بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಮೊದಲ ಯೂರೋಪ್ ಪ್ರವಾಸ 1924 ಮತ್ತು ಅದರ ಅನುಗ್ರಹಗಳು

ಸಂಪುಟ 05

ವಾರ್ಷಿಕ ಶುಲ್ಕ ರೂ.600/-

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

Weekly BADAR Qadian KANNADA

ಸಂಚಿಕೆ 51-52

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್

www.akhbarbadr.in

Postal Reg. No: 3000039689/2023-25    19-26 ಡಿಸೆಂಬರ್ 2024, 19-26 ಫತಹ್ 1403 ಹಿಜರಿ ಶಮ್ಸಿ, 16-23 ಜಮಾದಿಲುಸ್ಸಾನಿ 1446 ಹಿಜರಿ ಖಮರಿ.


## ಹೇ ಸೃಷ್ಟಿಕರ್ತನೇ, ನಿನ್ನ ಮಹಿಮೆ ಜಗತ್ತಿನಲ್ಲಿ ಪ್ರಕಟಗೊಳ್ಳಲಿ ಮತ್ತು ಈ ಮಸೀದಿಯು ನಿನ್ನ ಹೆಸರನ್ನು ಹರಡುವ ದೊಡ್ಡ ಕೇಂದ್ರವಾಗಲಿ. ಆಮೀನ್.

ಕ್ರಿ.ಶ. 1926 ಅಕ್ಟೋಬರ್ 3ರಂದು ಅತ್ಯಂತ ವೈಭವದಿಂದ ಲಂಡನಿನ 'ಮಸ್ಜಿದ್ ಫಝ್ಲ್'ನ ಉದ್ಘಾಟನೆಯಾಯಿತು. ಈ ಸಂದರ್ಭದಲ್ಲಿ ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ಕಳುಹಿಸಿದ ವಿಶ್ವಾಸವರ್ಧಕ ಸಂದೇಶವನ್ನು ಸಭೀಕರಿಗೆ ಓದಿ ಹೇಳಲಾಯಿತು. ಅದರ ಒಂದು ಭಾಗ ಕೆಳಕಂಡಂತಿದೆ.

ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:


ಹೇ ಸಹೋದರರೇ, ಪ್ರಪಂಚವು ಶಿರ್ಕ್, ಅಧರ್ಮ, ದೇವನಿಂದ ಮುಖ ತಿರುಗಿಸುವಿಕೆ, ರಾಷ್ಟ್ರೀಯ ದ್ವೇಷ ಮತ್ತು ಪಂಥೀಯ ಸಂಘರ್ಷಗಳ ಕೇಂದ್ರವಾಗುತ್ತಿದೆ. ಆದುದರಿಂದ ನಿರ್ಲಕ್ಷತನದಿಂದ ಎಚ್ಚೆತ್ತುಕೊಂಡು ದೇವನ ಹೆಸರಿನಲ್ಲಿ ಕಟ್ಟಿರುವ ಮನೆಗಳನ್ನು ಅಧರ್ಮ ಮತ್ತು ವಿಭಜನೆಯ ಕೇಂದ್ರವನ್ನಾಗಿಸುವ ಬದಲು ಏಕದೇವವಿಶ್ವಾಸ ಮತ್ತು ಸೌಹಾರ್ದತೆಯ ಕೇಂದ್ರವನ್ನಾಗಿಸುವುದು ಸರ್ವಶಕ್ತನಾದ ಅಲ್ಲಾಹನನ್ನು ಪ್ರೀತಿಸುವ ಪ್ರತಿಯೊಬ್ಬನ ಕರ್ತವ್ಯವಾಗಿದೆ. ಬನ್ನಿರಿ, ನಾವೆಲ್ಲರೂ ಒಟ್ಟಿಗೆ ಸೇರಿ ಎಲ್ಲರೂ ಒಪ್ಪುವ ತೌಹೀದನ್ನು (ಏಕದೇವೋಪಾಸನೆ) ಸ್ಥಾಪಿಸೋಣ. ಎಲ್ಲ ಧರ್ಮದವರು ಬಹುದೊಡ್ಡ ಮೂರ್ತಿಯಾದ ಹಗೆಯಿಂದ ಮುಕ್ತರಾಗಿ ಏಕದೇವನನ್ನು ಪ್ರಾಮಾಣಿಕತೆಯಿಂದ ಹುಡುಕಿ ಅಂಗೀಕರಿಸೋಣ. ನಮ್ಮ ಮನಸ್ಸು ಸೃಷ್ಟಿಸಿದ ದೇವರ ಮುಂದೆ ನಾವು ಬಾಗಬಾರದು. ಏಕೆಂದರೆ ನಾವು ಅವನನ್ನು ಏನೇ ಹೆಸರಿಸಿದರೂ ಅದು ಒಂದು ವಿಗ್ರಹವೇ ಆಗಿದೆ. ಸಕಲ ಲೋಕಗಳ ಸೃಷ್ಟಿಕರ್ತನಾದ ದೇವನ ಮುಂದೆ ಬಾಗಿರಿ. ಅವನು ಪ್ರಪಂಚದ ಸೃಷ್ಟಿಕರ್ತನು ಆಗಿರುವನು. ಅವನ ವೈಭವ ಜಗತ್ತಿನ ಕಣ ಕಣಗಳಲ್ಲಿ ಗೋಚರಿಸುತ್ತದೆ. ಅವನು ಯಾವಾಗಲೂ ತನ್ನ ಪರಿಶುದ್ಧ ಸಾತ್ವಿಕರ ಮೂಲಕ ತನ್ನ ಜೀವಂತ ಶಕ್ತಿಯನ್ನು ವ್ಯಕ್ತಪಡಿಸುತ್ತಾನೆ. ಆ ಪೂರ್ವ ಮತ್ತು ಪಶ್ಚಿಮದ ದೇವನನ್ನು ನಂಬುವ ಮೂಲಕ ಜಗತ್ತಿನಲ್ಲಿರುವ ದೇಶಗಳ ಆಂತರಿಕ ವ್ಯವಸ್ಥೆಯಲ್ಲೂ ಬೇರೆ ಬೇರೆ ದೇಶಗಳ ನಡುವೆಯೂ ಶಾಂತಿ ಮತ್ತು ಸುರಕ್ಷೆಯನ್ನು ಸ್ಥಾಪಿಸಲು ಪ್ರಯತ್ನಿಸೋಣ. ನಮ್ಮ ಸಂಪತ್ತು ಮತ್ತು ಅಧಿಕಾರದ ಮೂಲಕ ಜನರನ್ನು ಅಧೀನಪಡಿಸುವುದರಲ್ಲಿ ಅಥವಾ ನಮ್ಮ ಜನಸಮೂಹದ ಮೂಲಕ ಜನರ ಹಕ್ಕುಗಳನ್ನು ಕಸಿದುಕೊಳ್ಳುವುದರಲ್ಲಿ ನಮ್ಮ ಹಿರಿಮೆ ಇರಬಾರದು. ಬದಲಿಗೆ ಬಲಹೀನರಿಗೆ ಕರುಣೆ ತೋರಿಸುವುದು ಮತ್ತು ಅರ್ಹರಿಗೆ ಹಕ್ಕನ್ನು ನೀಡುವುದರಲ್ಲಿ ನಮ್ಮ ಹಿರಿಮೆ ಅಡಗಿರಬೇಕು.

ಹೇ ಸೃಷ್ಟಿಕರ್ತನೇ! ನಿನ್ನ ಮಹಿಮೆ ಜಗತ್ತಿನಲ್ಲಿ ಪ್ರಕಟಗೊಳ್ಳಲಿ ಮತ್ತು ಈ ಮಸೀದಿಯು ನಿನ್ನ ಹೆಸರನ್ನು ಹರಡುವ ದೊಡ್ಡ ಕೇಂದ್ರವಾಗಲಿ. ಆಮೀನ್. ವ ಆಖಿರುದ್ದಅ್‌ವಾನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್." **(ಅಲ್-ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 26 ಅಕ್ಟೋಬರ್ 1926, ಪುಟ-3)**



**ಹಝ್ರತ್ ಮುಸ್ಲೆಹ್ ಮೌಊದ್(ರ) ಮತ್ತು ನಿಮ್ಮೊಂದಿಗೆ ಯೂರೋಪ್ ಪ್ರವಾಸಕ್ಕೆ ತೆರಳಿದ ಸಂಗಡಿಗಳು**

**ಕುರ್ಚಿಗಳ ಮೇಲೆ ಬಲಭಾಗದಿಂದ ಎಡಕ್ಕೆ:** (1) ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್ ಮಿಸ್ರಿ (2) ಹಝ್ರತ್ ಚೌಧರಿ ಫತಹ್ ಮುಹಮ್ಮದ್ ಸಾಹಿಬ್ ಸಿಯಾಲ್ (3) ಹಝ್ರತ್ ಮುಸ್ಲೆಹ್ ಮೌಊದ್(ರ) (4) ಹಝ್ರತ್ ಖಿನ್ ಝುಲ್‌ಫಿಖಾರ್ ಅಲೀ ಖಾನ್ ಸಾಹಿಬ್ ಗೌಹರ್ (5) ಹಝ್ರತ್ ಹಾಫಿಝ್ ರೌಶನ್ ಅಲೀ ಸಾಹಿಬ್. **ನಿಂತಿರುವವರು ಬಲಭಾಗದಿಂದ ಎಡಕ್ಕೆ:** (1) ಮಿಯಾಂ ರೆಹೆಮ್ ದೀನ್ ಸಾಹಿಬ್ ಬಾವರ್ಚಿ (2) ಹಝ್ರತ್ ಶೇಖ್ ಯಾಖೂಬ್ ಅಲೀ ಇರ್ಫಾನಿ ಸಾಹಿಬ್ (3) ಹಝ್ರತ್ ಡಾ. ಹಷ್ಮತುಲ್ಲಾಹ್ ಸಾಹಿಬ್ (4) ಹಝ್ರತ್ ಭಾಯಿ ಅಬ್ದುರ್ರಹ್ಮಾನ್ ಸಾಹಿಬ್ ಖಾದಿಯಾನಿ (5) ಹಝ್ರತ್ ಚೌಧರಿ ಮುಹಮ್ಮದ್ ಷರೀಫ್ ಸಾಹಿಬ್ ಸಾಹೀವಾಲ್ (6) ಹಝ್ರತ್ ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್ ದರ್ದ್ (7) ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಷರೀಫ್ ಅಹ್ಮದ್ ಸಾಹಿಬ್.




**ಇಂಗ್ಲೆಂಡ್‌ಗೆ ಹೊರಡುವ ಮೊದಲು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಖಾದಿಯಾನ್‌ನ ಜನರೊಂದಿಗೆ (11 ಜುಲೈ 1924)**




**ವಿದೇಶ ಪ್ರವಾಸದ ಸಂದರ್ಭದ ಒಂದು ಸ್ಮರಣೀಯ ಚಿತ್ರ**




**ಪ್ರವಾಸದ ಸಂದರ್ಭದಲ್ಲಿ ರೆಲ್ವೇ ಸ್ಟೇಷನ್‌ನಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರನ್ನು ಜಮಾಅತ್ತಿನ ಸದಸ್ಯರು ಭೇಟಿಯಾಗುತ್ತಿರುವುದು**



شبیہ مبارک حضرت مرزا غلام احمد صاحب قادیانی مسیح موعود و مہدی معہود علیہ السلام (1835ء - 1908ء)




سیدنا وامامنا حضرت مرزا مسرور احمد خلیفۃ المسیح الخامس ایدہ اللہ تعالیٰ بنصرہ العزیز

**ಈ ಅನುಗ್ರಹದಾಯಕ ಪ್ರಯಾಣದ ಸಮಯದಲ್ಲಿ ನೀವು ವಿವಿಧ ಸ್ಥಳಗಳಲ್ಲಿ ಉಪನ್ಯಾಸಗಳನ್ನು ನೀಡಿದರು, ನಿಮ್ಮ ವಾಸ್ತವ್ಯದ ಪ್ರತಿಯೊಂದು ಸ್ಥಳದಲ್ಲಿ ಸ್ಥಳೀಯ ಜನರೊಂದಿಗೆ ಸಂಪರ್ಕ ಸಾಧಿಸಿದರು.**
**ಧಾರ್ಮಿಕ ಮತ್ತು ರಾಜಕೀಯ ಮುಖಂಡರು, ಬುದ್ಧಿಜೀವಿಗಳು, ಪತ್ರಕರ್ತರು ಮತ್ತು ಸಾಮಾನ್ಯ ಜನರು ನಿಮ್ಮನ್ನು ಭೇಟಿಯಾದರು**

**ಈ ಸಂಪೂರ್ಣ ಪ್ರಯಾಣದಲ್ಲಿ ನೀವು ಇಡೀ ದಿನ ಮತ್ತು ತಡರಾತ್ರಿಯವರೆಗೆ ಕೆಲಸದಲ್ಲಿ ನಿರತರಾಗಿರುತ್ತಿದ್ದರು**
**ನೀವು ನಿಮ್ಮ ಎಲ್ಲಾ ಸಮಯವನ್ನು ದಣಿವರಿಯಿಲ್ಲದೆ ಕೆಲಸ ಮಾಡುತ್ತಿದ್ದರು ಮತ್ತು ಅತ್ಯಂತ ಕಾರ್ಯನಿರತರಾಗಿರುತ್ತಿದ್ದರು**

**ಈ ಪ್ರವಾಸವು ಅತ್ಯಂತ ಯಶಸ್ವಿ ಮತ್ತು ಅನುಗ್ರಹದಾಯಕ ಪ್ರವಾಸವಾಗಿತ್ತು, ಇದರಲ್ಲಿ ಪ್ರತಿಯೊಂದು ಸ್ಥಳದಲ್ಲಿ ಸರ್ವಶಕ್ತನಾದ ಅಲ್ಲಾಹನ ಬೆಂಬಲದ ಅದ್ಭುತ ದರ್ಶನಗಳು ಕಾಣಿಸಿಕೊಂಡವು**

**ಓದುಗರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು "ಬದರ್"ನ ಈ ವಿಶೇಷ ಸಂಚಿಕೆಯನ್ನು ಓದಬೇಕು**

ಬದರ್ ಓದುಗರಿಗಾಗಿ, ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್[ಅತಬಿಅ] ಅವರ ಪ್ರೀತಿಭರಿತ ವಿಶ್ವಸವರ್ಧಕ ಸಂದೇಶ.

ಇಸ್ಲಾಮಾಬಾದ್ ಯುಕೆ
MA 17-11-2024

ಪ್ರೀತಿಯ ಬದರ್ ವಾರಪತ್ರಿಕೆ ಖಾದಿಯಾನ್‌ನ ಓದುಗರೇ
**ಅಸ್ಸಲಾಮು ಅಲೈಕುಂ ವ ರಹಮತುಲ್ಲಾಹಿ ವ ಬರಕಾತಹು**

ಅಲ್ಹಮ್ದುಲಿಲ್ಲಾಹ್, ಬದರ್ ವಾರಪತ್ರಿಕೆಯು "ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್[ರ] ಅವರ ಮೊದಲ ಯೂರೋಪ್ ಪ್ರವಾಸ 1924 ರ ಮತ್ತು ಅದರ ಅನುಗ್ರಹಗಳು ಮತ್ತು ಫಲಗಳು" ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಿಸುವ ಅವಕಾಶವನ್ನು ಪಡೆಯುತ್ತಿದೆ. ಈ ವಿಶೇಷ ಸಂದರ್ಭದಲ್ಲಿ ಸಂದೇಶ ಕಳುಹಿಸಲು ನನ್ನಲ್ಲಿ ಮನವಿ ಮಾಡಲಾಗಿದೆ. ಈ ನಿಟ್ಟಿನಲ್ಲಿ ನಾನು ಕೆಲವು ಪ್ರಮುಖ ಅಂಶಗಳನ್ನು ಪ್ರಸ್ತುತಪಡಿಸಲು ಬಯಸುತ್ತೇನೆ.

ಸೆಪ್ಟೆಂಬರ್ 1924 ರಲ್ಲಿ, ವೆಂಬ್ಲೆ (ಲಂಡನ್) ನಲ್ಲಿ ಸರ್ವಧಾರ್ಮ ಸಮ್ಮೇಳನವನ್ನು ಆಯೋಜಿಸಲಾಯಿತು, ಇದರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಧರ್ಮಗಳ ಪ್ರತಿನಿಧಿಗಳನ್ನು ತಮ್ಮ ಧರ್ಮಗಳ ತತ್ವಗಳ ಮೇಲೆ ಬೆಳಕು ಚೆಲ್ಲಲು ಆಹ್ವಾನಿಸಲಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರ ಸೇವೆಯಲ್ಲಿ ಸಮ್ಮೇಳನದ ವ್ಯವಸ್ಥಾಪರಕರಿಂದ (ಇದರಲ್ಲಿ ಇಂಗ್ಲೆಂಡ್‌ನ ಪ್ರಮುಖ ಪ್ರಾಚ್ಯಶಾಸ್ತ್ರಜ್ಞರು ಸೇರಿದ್ದಾರೆ) ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನವನ್ನು ಸ್ವೀಕರಿಸಿಲಾಯಿತು. ನೀವು ಸ್ವತಃ ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಆ ಸಮಯದಲ್ಲಿ ನೀವು ಹನ್ನೊಂದು ಜನರ ನಿಯೋಗವನ್ನು ನಿಮ್ಮೊಂದಿಗೆ ಕರೆತಂದಿದ್ದರು. ಇದು ಯುರೋಪ್ ಮತ್ತು ಅರಬ್ ರಾಷ್ಟ್ರಗಳಿಗೆ ಖಲೀಫತುಲ್ ಮಸೀಹ್ ಅವರ ಮೊದಲ ಭೇಟಿಯಾಗಿತ್ತು. ಸೀರಿಯಾ, ಈಜಿಪ್ಟ್, ಪ್ಯಾಲೆಸ್ಟೈನ್ ಇತ್ಯಾದಿ ಅರಬ್ ದೇಶಗಳಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಹೊರತುಪಡಿಸಿ ಯಾವುದೇ ಖಲೀಫರು ಭೇಟಿ ನೀಡಲಿಲ್ಲ. ಹುಝೂರ್[ರ] ತಮ್ಮ ಈ ಪ್ರಯಾಣದ ಬಗ್ಗೆ ವಿವರಿಸುತ್ತಾರೆ:

"ಇದು ಎರಡು ಭವಿಷ್ಯವಾಣಿಗಳನ್ನು ಪೂರೈಸಲು ಆಗಿತ್ತು. ಮೊದಲನೇಯದು ಡಮಸ್ಕಸ್‌ಗೆ ಸಂಬಂಧಿಸಿದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಭವಿಷ್ಯವಾಣಿ ಮತ್ತೊಂದು ಇಂಗ್ಲೆಂಡ್‌ಗೆ ಸಂಬಂಧಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವಿಷ್ಯವಾಣಿ."
(ಅನ್ವಾರುಲ್ ಉಲೂಮ್, ಸಂಪುಟ-8, ಪುಟ-465)

ಡಮಸ್ಕಸ್ ಕುರಿತಾದ ಭವಿಷ್ಯವಾಣಿಯ ನೆರವೇರಿಕೆಯನ್ನು ಉಲ್ಲೇಖಿಸುತ್ತಾ ಹಝ್ರತ್ ಮುಸ್ಲೆಹ್ ಮೌಊದ್[ರ] ಹೇಳುತ್ತಾರೆ:

"ಅದೇ ರೀತಿ ಮಿನಾರತುಲ್-ಬೈಝಾದ ವಿಚಿತ್ರ ವಿಷಯವಿತ್ತು..... ಆ ಮಿನಾರ ಯಾವುದಾಗಿದೆ ಅದನ್ನು ನೋಡಲು ಹೋಗೋಣ ಎಂದು ನಾವು ಯೋಚಿಸಿದೆವು. ಬೆಳಿಗ್ಗೆ ನಾನು ಹೋಟೆಲ್‌ನಲ್ಲಿ ನಮಾಝ್ ನಿರ್ವಹಿಸಿದೆ. ಆ ಸಮಯದಲ್ಲಿ ನಾನು ಮತ್ತು ಝುಲ್‌ಫಿಖಾರ್ ಅಲಿ ಖಾನ್ ಸಾಹಿಬ್ ಮತ್ತು ಡಾ. ಹೆಷ್ಮತುಲ್ಲಾ ಸಾಹಿಬ್ ಇದ್ದೆವು, ಅಂದರೆ ನನ್ನ ಹಿಂದೆ ಇಬ್ಬರು ಮುಕ್ತದಿಗಳಿದ್ದರು. ನಾನು ಸಲಾಮ್ ಮಾಡಲು ತಿರುಗಿದಾಗ ನನ್ನ ಮುಂದೆ ಒಂದು ಮಿನಾರವಿತ್ತು ಮತ್ತು ನಮ್ಮ ಮತ್ತು ಅದರ ನಡುವೆ ಒಂದೇ ರಸ್ತೆ ಇದೆ. ನಾನು ಹೇಳಿದೆ, ಇದೇ ಆ ಮಿನಾರವಾಗಿದೆ ಮತ್ತು ನಾವು ಅದರ ಪೂರ್ವ ದಿಕ್ಕಿನಲ್ಲಿದ್ದೆವು. ಅಲ್ಲಿ ಇದೇ ಒಂದು ಬಿಳಿ ಮಿನಾರವಿತ್ತು ಮತ್ತೆ ಯಾವ ಮಿನಾರವೂ ಇರಲಿಲ್ಲ. ಅಮ್ವಿಯಾ ಮಸೀದಿಯ ಮಿನಾರಗಳು ನೀಲಿ ಬಣ್ಣವನ್ನು ಹೊಂದಿದ್ದವು. ನಾನು ಈ ಬಿಳಿ ಮಿನಾರವನ್ನು ನೋಡಿದಾಗ ಮತ್ತು ನನ್ನ ಹಿಂದೆ ಇದ್ದ ಎರಡು ಮುಕ್ತದಿಗಳಿಗೆ ನಾನು ಹೇಳಿದೆ ಆ ಹದೀಸ್ ಕೂಡ ಈಡೇರಿದೆ."
(ಅನ್ವಾರುಲ್ ಉಲೂಮ್, ಸಂಪುಟ-8, ಪುಟ-614)

ಯುರೋಪ್ ಪ್ರವಾಸದ ಬಗ್ಗೆ ಅವರು ಹೇಳಿದರು:

"ಯೂರೋಪ್ ಕಡೆಗೆ ಮಸೀಹ್ ಮೌಊದ್ (ವಾಗ್ದಾತ್ತ ಮಸೀಹರು) ಅಥವಾ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರು ನಾನು ಪ್ರಯಾಣಿಸಿರುವ ಉದ್ದೇಶಕ್ಕಾಗಿ ಪ್ರಯಾಣಿಸುವರು, ಅದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿಯೂ ಉಲ್ಲೇಖಿಸಲಾಗಿದೆ ..... ಈ ಉಲ್ಲೇಖವು ಸೂರಾ ಕಹಫ್‌ನಲ್ಲಿದೆ ..... ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬರಹದ ಪ್ರಕಾರ ಝುಲ್-ಕರ್ನೈನ್ ನೀವಾಗಿದ್ದೀರಿ ಮತ್ತು ಪಾಶ್ಚಿಮಾತ್ಯ ದೇಶಗಳೆಂದರೆ ಕ್ರಿಶ್ಚಿಯನ್ ಧರ್ಮದ ಮೂಲದಲ್ಲಿ ಬೀಡುಬಿಟ್ಟಿರುವ ಯುರೋಪ್ ಮತ್ತು ಅಮೆರಿಕದ ಜನರಾಗಿದ್ದಾರೆ, ಆದ್ದರಿಂದ ಮಸೀಹ್ ಮೌಊದ್ (ವಾಗ್ದಾತ್ತ ಮಸೀಹ್) ಅಥವಾ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರು ಪಾಶ್ಚಿಮಾತ್ಯ ದೇಶಗಳಿಗೆ ಪ್ರಯಾಣಿಸಬೇಕಾಗುತ್ತದೆ ಎಂಬುದು ಸ್ಪಷ್ಟವಾಗಿದೆ ..... ಆದ್ದರಿಂದ ಈ ಪ್ರಯಾಣವು ವಾಸ್ತವವಾಗಿ, ಇದು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿರುವಷ್ಟು ಪ್ರಾಮುಖ್ಯವಾದ ಭವಿಷ್ಯವಾಣಿಗೆ ಒಳಪಟ್ಟಿರುತ್ತದೆ. ಅದೇ ಸಮಯದಲ್ಲಿ, ಈ ಪ್ರಯಾಣವು ತಬ್ಲೀಗ್‌ಗಾಗಿ ಮಾಡಲಾಗುವುದಿಲ್ಲ, ಬದಲಿಗೆ ತಬ್ಲೀಗ್‌ಗೆ ಸಂಬಂಧಿಸಿದ ತತ್ವಗಳನ್ನು ಹೊಂದಿಸಲು ಮತ್ತು ಜ್ಞಾನವನ್ನು ಪಡೆಯಲು ಎಂದು ತಿಳಿಯುತ್ತದೆ." (ಅನ್ವಾರುಲ್ ಉಲೂಮ್, ಸಂಪುಟ-8, ಪುಟ-434 ರಿಂದ 435)

ಈ ಪ್ರವಾಸದ ಮೂಲಕ ಕೆಲವು ದರ್ಶನಗಳೂ ಈಡೇರಿವೆ. ಅವುಗಳಲ್ಲಿ ಒಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ದರ್ಶನವಾಗಿದೆ:

"ನಾನು ಲಂಡನ್ ನಗರದ ಧರ್ಮಪೀಠದ ಮೇಲೆ ನಿಂತು ಇಂಗ್ಲಿಷ್ ಭಾಷೆಯಲ್ಲಿ ಬಹಳ ತರ್ಕಬದ್ಧ ಸಂಬೋಧನೆಯೊಂದಿಗೆ ಇಸ್ಲಾಂ ಧರ್ಮದ ಸತ್ಯಾಸತ್ಯತೆಯನ್ನು ತೋರಿಸುತ್ತಿರುವುದನ್ನು ನಾನು ನೋಡಿದೆ." (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ-3, ಪುಟ-377)

ಇದಲ್ಲದೆ, ಹುಝೂರ್[ರ] ಅವರು ಸ್ವತಃ ಎರಡು ದರ್ಶನಗಳನ್ನು ನೋಡಿದರು, ಅವುಗಳಲ್ಲಿ ಒಂದನ್ನು ಅವರು ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ:

"ಸರ್ವಲೋಕಗಳ ಅಧಿಪತಿಯಾದ ರಾಜನು ಅವನ ಕೈಯಲ್ಲಿ ಇಡೀ ಬ್ರಹ್ಮಾಂಡದ ನಿಯಂತ್ರಣವಿದೆ ಅವನು ನನಗೆ ದರ್ಶನದಲ್ಲಿ ತೋರಿಸಿದ್ದೇನೆಂದರೆ: ನಾನು ಇಂಗ್ಲೆಂಡಿಗೆ ಹೋಗಿರುವೆನು ಮತ್ತು ಓರ್ವ ವಿಜಯಶಾಲಿಯಾದ ಸೇನಾಧಿಪತಿಯಂತೆ ಪ್ರವೇಶಿಸಿದ್ದೇನೆ. ಮತ್ತು ಆ ಸಮಯದಲ್ಲಿ ನನ್ನ ಹೆಸರನ್ನು ವಿಲಿಯಂ ದಿ ಕಾಂಕರರ್ ಎಂದು ಹೆಸರಿಸಲಾಯಿತು." (ಅನ್ವಾರುಲ್ ಉಲೂಮ್, ಸಂಪುಟ-8, ಪುಟ-463)

ಆದಾಗ್ಯೂ, ಅವರು ಇಟಲಿ, ಸ್ವಿಟ್ಜರ್ಲೆಂಡ್ ಮತ್ತು ಫ್ರಾನ್ಸ್ ಮೂಲಕ ಆಗಸ್ಟ್ 22, 1924 ರಂದು ಇಂಗ್ಲೆಂಡ್‌ಗೆ ತಲುಪಿದರು. ನೀವು ಲಂಡನ್‌ನಲ್ಲಿ ತಂಗಿದ್ದಾಗ, ನೀವು ಅನೇಕ ಕಾರ್ಯಕ್ರಮಗಳನ್ನು ಹೊಂದಿದ್ದರು, ಅದರಲ್ಲಿ ಧಾರ್ಮಿಕ ಸಮ್ಮೇಳನದಲ್ಲಿ ನಿಮ್ಮ ಉಪನ್ಯಾಸ ಮತ್ತು ಮಸ್ಜಿದ್ ಫಝಲ್ ಲಂಡನ್‌ನ ಶಿಲಾನ್ಯಾಸ ಸಮಾರಂಭದ ಕುರಿತು ನಾನು ನಿಮಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ.

ಧಾರ್ಮಿಕ ಸಮ್ಮೇಳನದಲ್ಲಿ ನಿಮ್ಮ ಉಪನ್ಯಾಸವು ಸೆಪ್ಟೆಂಬರ್ 23 ರಂದು ಸಂಜೆ 5 ಗಂಟೆಗೆ ನಿಗದಿಯಾಗಿತ್ತು. ಈ ಸಂದರ್ಭದಲ್ಲಿ ಸಭೆಯ ಅಧ್ಯಕ್ಷರಾದ ಸರ್

ಥಿಯೋಡರ್ ಮಾರಿಸನ್ ಅವರು ಹುಝೂರ್(ರ) ಅವರನ್ನು ಪರಿಚಯಿಸಿದರು ಮತ್ತು ನಂತರ ಅತ್ಯಂತ ಸಭ್ಯತೆ ಮತ್ತು ಗೌರವದಿಂದ ಅವರನ್ನು ಉದ್ದೇಶಿಸಿ ಮಾತನಾಡಲು ವಿನಂತಿಸಿದರು. ಮೊದಲಿಗೆ, ನೀವು ಇಂಗ್ಲಿಷ್‌ನಲ್ಲಿ ಒಂದು ಸಣ್ಣ ಭಾಷಣವನ್ನು ನೀಡಿದರು. ನಂತರ ಅವರು ಹೇಳಿದರು, "ಆ ನಂತರ, ನಾನು ನನ್ನ ಪ್ರಬಂಧವನ್ನು ಓದಲು ನನ್ನ ಶಿಷ್ಯ ಚೌಧರಿ ಝಫರುಲ್ಲಾ ಖಾನ್ ಸಾಹಿಬ್ ಅವರನ್ನು ಕೇಳುತ್ತೇನೆ." ಆದ್ದರಿಂದ ಚೌಧರಿ ಸಾಹಿಬ್ ಅವರು ಈ ಲೇಖನದ ಇಂಗ್ಲಿಷ್ ಅನುವಾದವನ್ನು ಅತ್ಯಂತ ಗಂಭೀರವಾದ ಧ್ವನಿಯಲ್ಲಿ ಮತ್ತು ಅತ್ಯಂತ ಎತ್ತರದ ಧ್ವನಿಯಲ್ಲಿ ಓದಿ ತಿಳಿಸಿದರು. ಲೇಖನದಲ್ಲಿ ತಮಗೆ ಹೊಸತಾಗಿರುವ ಇಸ್ಲಾಂ ಧರ್ಮದ ಬಗ್ಗೆ ಏನಾದರೂ ಪ್ರಸ್ತಾಪಿಸಿದಾಗ ಅನೇಕ ಜನರು ಸಂತೋಷದಿಂದ ಜಿಗಿಯುತ್ತಿದ್ದರು. ಈ ಉಪನ್ಯಾಸವು ಎಷ್ಟು ವಿಶಿಷ್ಟ ಮತ್ತು ಅದ್ಭುತವಾಗಿತ್ತೆಯೆಂದರೆ, ಕ್ರೈಸ್ತಪ್ರಪಂಚದ ಮಹಾನ್ ನಾಯಕರು ಸಹ ನಿಸ್ಸಂದೇಹವಾಗಿ ಈ ಲೇಖನದಲ್ಲಿ ವ್ಯಕ್ತಪಡಿಸಿದ ವಿಚಾರಗಳು ಅದ್ಭುತ ಅವು ತರಬೇತಿ ಮತ್ತು ವಾದಗಳು ಮತ್ತು ಅವುಗಳ ಸೌಂದರ್ಯದಲ್ಲಿ ಅನನ್ಯವಾಗಿವೆ ಎಂದು ಉದ್ಗರಿಸಿದರು. ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು:

"ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಉಪನ್ಯಾಸವು ಅತ್ಯಂತ ಯಶಸ್ವಿಯಾಯಿತು. ಮತ್ತು ನಮ್ಮ ಉಪನ್ಯಾಸದಲ್ಲಿದಷ್ಟು ಜನರು ಬೇರೆ ಯಾವ ಉಪನ್ಯಾಸದಲ್ಲಿರಲಿಲ್ಲ, ಅಲ್ಲಿ ಜಾಗವಿರಲಿಲ್ಲ, ಮತ್ತು ಜನರು ಬಹಳ ಗಮನದಿಂದ ಆಲಿಸಿದರು ಮತ್ತು ನಂತರ ಸರ್ ಥಿಯೋಡರ್ ಮಾರಿಸನ್ ಮತ್ತು ಇತರರು ತಮ್ಮ ಶುಭಾಶಯಗಳನ್ನು ನೀಡಿದರು ಮತ್ತು ಅರ್ಧ ಘಂಟೆಯವರೆಗೆ ವಿವಿಧ ಸ್ನೇಹಿತರು ಸುತ್ತಲೂ ನಿಂತು ಮಾತನಾಡಿದರು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಈ ಪ್ರದೇಶದಲ್ಲಿ ಇಸ್ಲಾಮ್ ಧರ್ಮ ಪ್ರಖ್ಯಾತಿ ಪಡೆದಿದೆ ಮತ್ತು ಅಹ್ಮದೀಯತ್‌ನ ಹೆಸರು ಪ್ರಸಿದ್ಧವಾಗಿದೆ, ಭವಿಷ್ಯದಲ್ಲಿ ನಾವು ಶ್ರದ್ಧೆಯಿಂದ ಕಾರ್ಯನಿರ್ವಹಿಸಿದರೆ ಉತ್ತಮ ಯಶಸ್ಸಿನ ಭರವಸೆ ಇದೆ." (ಅನ್ವಾರುಲ್ ಉಲೂಮ್, ಸಂಪುಟ–8, ಪುಟ–519)

ಮಸ್ಜಿದ್ ಫಝುಲ್ ಸಮಾರಂಭಕ್ಕೆ ಸಂಬಂಧಿಸಿದಂತೆ. ಈ ಮಸೀದಿಯ ಅಡಿಪಾಯವನ್ನು ಅಕ್ಟೋಬರ್ 19, 1924 ರಂದು ಹಾಕಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಂಸದರನ್ನು, ಮುಖಂಡರನ್ನು, ರಾಜಕಾರಣಿಗಳನ್ನು, ರಾಜತಾಂತ್ರಿಕರನ್ನು ಸೇರಿದಂತೆ ಹಲವರು ಗಣ್ಯರನ್ನು ಆಮಂತ್ರಣ ಪತ್ರಗಳನ್ನು ಕಳುಹಿಸಲಾಗಿತ್ತು. ಸಮಯ ಸೀಮಿತವಾಗಿರುವುದರಿಂದ ಕೆಲವೇ ಜನರು ಆಗಮಿಸುತ್ತಾರೆ ಎಂದು ನಿರೀಕ್ಷಿಸಲಾಗಿತ್ತು ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಅತಿಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿವಿಧ ದೇಶಗಳ ಪ್ರತಿನಿಧಿಗಳು ಸಹ ಕಾರ್ಯಕ್ರಮದಲ್ಲಿ ಪಾಲ್ಗೊಂಡರು ಮತ್ತು ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಯಿತು. ಹುಝೂರ್(ರ) ಅವರು ಈ ಸಮಾರಂಭದ ಸಮಯದಲ್ಲಿ ಅವರ ಮನಸ್ಥಿತಿಯನ್ನು ಉಲ್ಲೇಖಿಸುತ್ತಾರೆ ಮತ್ತು ಹೇಳುತ್ತಾರೆ:

"ನನಗೆ ನೆನಪಿದೆ, ನಾನು 1924 ರಲ್ಲಿ ಲಂಡನ್‌ಗೆ ಹೋಗಿ ಅಲ್ಲಿ ಮಸೀದಿಗೆ ಅಡಿಪಾಯ ಇರಿಸಿದಾಗ, ಆ ಸಂದರ್ಭದಲ್ಲಿ ನನ್ನ ಮನಸ್ಥಿತಿ ಹೇಗಿತ್ತು ಎಂದರೆ ನನ್ನ ಕಣ್ಣುಗಳಿಂದ ಕಂಬನಿ ನಿಲ್ಲುತ್ತಿರಲಿಲ್ಲ ಏಕೆಂದರೆ ಆ ಸಮಯದಲ್ಲಿ ನನ್ನೆದುರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಲ್ಲಾಹನಿಂದ ಇಲ್‌ಹಾಮ್ ಪಡೆದು "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಆಗಮಿಸಿದನು. ಆದರೆ ಲೋಕವು ಅವನನ್ನು ಅಂಗೀಕರಿಸಲ್ಲಿಲ್ಲ. ಆದರೇ ದೇವರು ಅವನನ್ನು ಅಂಗೀಕರಿಸುವನು ಮತ್ತು ಬಹಳ ತೀವ್ರವಾದ ಧಾಳಿಗಳ ಮೂಲಕ ಅವನ ಸತ್ಯವನ್ನು ಪ್ರಕಟಿಸುವನು." ಎಂದು ಘೋಷಿಸಿದ ದೃಶ್ಯ ಪುನರಾವರ್ತನೆಯಾಯಿತು. ... ಸರ್ವಶಕ್ತನಾದ ಅಲ್ಲಾಹನು ಹೇಳಿದನು: ಎದ್ದೇಳು ಮತ್ತು ಜಗತ್ತಿನಲ್ಲಿ ನನ್ನ ಹೆಸರನ್ನು ಘೋಷಿಸು ಮತ್ತು ಅದಕ್ಕೆ ಹೇಳು: **ಹಾನ ಅನ್ ತುಆನ ವ ತುಅ್‌ರಫ ಬೈನನ್ನಾಸ–** ಅಲ್ಲಾಹನು ನಿಮಗೆ ಸಹಾಯ ಮಾಡುವ ಮತ್ತು ಜಗತ್ತಿನಲ್ಲಿ ನಿಮಗೆ ಶಾಶ್ವತವಾದ ಖ್ಯಾತಿಯನ್ನು ನೀಡುವ ಸಮಯ ಬಂದಿದೆ."

(ಅನ್ವಾರುಲ್ ಉಲೂಮ್, ಸಂಪುಟ–26, ಪುಟ–529)

ಆದಾಗ್ಯೂ, ಹುಝೂರ್(ರ) ಅವರು ಈ ಮಸೀದಿಯ ಅಡಿಪಾಯವನ್ನು ಕರುಣಾಜನಕ ಪ್ರಾರ್ಥನೆಗಳೊಂದಿಗೆ ಇರಿಸಿದರು. ನಂತರ ಈ ಮಸೀದಿಯಲ್ಲಿ ನೀವು ಮತ್ತು ನಿಮ್ಮ ನಂತರ ಎಲ್ಲಾ ಖಲೀಫರು ನಮಾಝ್‌ಗಳನ್ನು ನಿರ್ವಹಿಸಿದರು ಮತ್ತು ಇಲ್ಲಿಯೇ ಇದ್ದಿರಿ. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರ ಹಿಜ್ರತ್ ನಂತರ ಖಲೀಫರ ಉಪಸ್ಥಿತಿಯಿಂದಾಗಿ ಈ ಮಸೀದಿಯು ಕೇಂದ್ರವಾಯಿತು. ಇಲ್ಲಿಂದಲೇ ಪ್ರಪಂಚದಾದ್ಯಂತ mta ಪ್ರಸಾರ ಪ್ರಾರಂಭವಾಯಿತು. ಖಿಲಾಫತೆ ಖಾಮಿಸಾದ ಚುನಾವಣೆಯು ಕೂಡ ಈ ಮಸೀದಿಯಲ್ಲಿಯೇ ಆಯಿತು. ಮತ್ತು ಇಸ್ಲಾಮಾಬಾದ್ (ಯುಕೆ) ಪುನರ್ನಿರ್ಮಾಣಕ್ಕೆ ಮುಂಚೆ ನಾನು ಕೂಡ ಅಲ್ಲಿ ವಾಸಿಸುತ್ತಿದ್ದೆ.

ಈ ಅನುಗ್ರಹದಾಯಕ ಪ್ರಯಾಣದಲ್ಲಿ ಅವರು(ರ) ವಿವಿಧ ಸ್ಥಳಗಳಲ್ಲಿ ಉಪನ್ಯಾಸಗಳನ್ನು ನೀಡಿದರು. ಅವರು(ರ) ಎಲ್ಲಿದ್ದರೂ ಸ್ಥಳೀಯ ಜನರೊಂದಿಗೆ ಸಂಪರ್ಕವನ್ನು ನಿರ್ಮಿಸಿದರು. ಧಾರ್ಮಿಕ ಮತ್ತು ರಾಜಕೀಯ ಮುಖಂಡರು, ಬುದ್ಧಿಜೀವಿಗಳು, ಪತ್ರಕರ್ತರು ಮತ್ತು ಸಾಮಾನ್ಯ ಜನರು ನಿಮ್ಮನ್ನು ಭೇಟಿಯಾದರು. ಕೆಲವು ಜನರನ್ನು ಭೇಟಿಯಾಗಲು ತಮ್ಮ ಸಹೋದ್ಯೋಗಿಗಳನ್ನು ಸಹ ಕಳುಹಿಸಿದರು. ಇಟಲಿಯಲ್ಲಿದ್ದಾಗ, ಅವರು ಪೋಪ್ ಅವರಿಗೆ ಸಮಗ್ರ ಇಸ್ಲಾಮಿಕ್ ಶಿಕ್ಷಣದ ಉಡುಗೊರೆಯನ್ನು ನೀಡಲು ಬರವಣಿಗೆಯ ರೂಪದಲ್ಲಿ ಎರಡು ಬಾರಿ ಸಂಪರ್ಕಿಸಿದರು, ಆದರೆ ಮನೆ ರಿಪೇರಿ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಭೇಟಿಯಾಗಲು ಕ್ಷಮೆಯಾಚಿಸಿದರು ಹಾಗಾಗಿ ಭೇಟಿ ಸಾಧ್ಯವಾಗಲಿಲ್ಲ. ಪ್ಯಾಲೆಸ್ತೈನ್, ಡಮಾಸ್ಕಸ್‌ನ ಉಮಯ್ಯದ್ ಮಸೀದಿ, ಈಜಿಪ್ಟ್ ಮ್ಯೂಸಿಯಂನಲ್ಲಿರುವ ಫರೋನ ದೇಹ ಮತ್ತು ಇಟಲಿಯ ಅಸ್‌ಹಾಬೆ ಕಹಫ್‌ನನ ಗುಹೆಗಳು (Catacombos) ಸೇರಿದಂತೆ ಧಾರ್ಮಿಕ ದೃಷ್ಟಿಕೋನದಿಂದ ಅವರು ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿದರು. ಈ ಪ್ರಯಾಣದ ಉದ್ದಕ್ಕೂ ಅವರು ಪ್ರತ್ಯೇಕವಾಗಿ ಮತ್ತು ಸಾಮೂಹಿಕವಾಗಿ ಪ್ರಾರ್ಥನೆಯಲ್ಲಿ ತೊಡಗಿದ್ದರು. ಹಗಲಿರುಳು ಮತ್ತು ತಡರಾತ್ರಿಯವರೆಗೆ ಕೆಲಸ ಮಾಡುತ್ತಿದ್ದರು. ಇಡೀ ಸಮಯವನ್ನು ದಣಿವರಿಯಿಲ್ಲದೆ ಕೆಲಸ ಮಾಡುತ್ತಿದ್ದರು ಮತ್ತು ಅತ್ಯಂತ ಕಾರ್ಯನಿರತರಾಗಿರುತ್ತಿದ್ದರು. ಈ ಪ್ರಯಾಣದ ಯಶಸ್ಸನ್ನು ಉಲ್ಲೇಖಿಸುತ್ತಾ ಅವರು(ರ) ಹೇಳುತ್ತಾರೆ:

"ಈ ಪಯಣದಲ್ಲಿ ಜಮಾಅತ್ತಿನ ಹಿರಿಮೆಯ ಪರಿಣಾಮವನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ, ನಾವು ಯಾವುದೇ ಪ್ರದೇಶದಿಂದ ಹಾದುಹೋದರೂ, ನಾವು ನಿಮ್ಮನ್ನು ತಿಳಿದಿದ್ದೇವೆ ಎಂಬ ಧ್ವನಿ ಹೊರಹೊಮ್ಮಿತು. ಚೌಧರಿ ಝಫರುಲ್ಲಾ ಖಾನ್ ಸಾಹಿಬ್ ಹಾಲೆಂಡ್‌ಗೆ ಹೋಗಿ ಒಬ್ಬ ವ್ಯಕ್ತಿಗೆ ತಬ್ಲೀಗ್ ಮಾಡುತ್ತಿದ್ದರು. ಸಂಭಾಷಣೆಯಲ್ಲಿ ನನ್ನ ಫೋಟೋ ತೆಗೆದು ತೋರಿಸಲಾಯಿತು. ನಾನು ಈ ಚಿತ್ರವನ್ನು ನೋಡಿದ್ದೇನೆ ಎಂದು ಅವರು ಹೇಳಿದರು. ಬರ್ಲಿನ್‌ನಿಂದ, ಮಾಸ್ಟರ್ ಮುಬಾರಕ್ ಅಲಿ ಸಾಹಿಬ್ ಪತ್ರಿಕೆಯನ್ನು ಕಳುಹಿಸಿದರು, ಅದು ಇಡೀ ಪುಟದಲ್ಲಿ ನನ್ನ ಪೂರ್ಣ–ಉದ್ದದ ಚಿತ್ರವನ್ನು ಪ್ರಕಟಿಸಿತು. ಅಮೇರಿಕದಲ್ಲೂ ಚಿತ್ರ ಪ್ರಕಟವಾಗುತ್ತಿದೆ. ಅಂತೆಯೇ, ಇಟಲಿಯಲ್ಲಿ, ಬಾಗ್ದಾದ್ ಮತ್ತು ಇತರ ದೇಶಗಳಲ್ಲಿ, ಈ ಮಾಧ್ಯಮದ ಮೂಲಕ ಚಿತ್ರಗಳು ಮತ್ತು ಲೇಖನಗಳನ್ನು ಪ್ರಕಟಿಸಲಾಯಿತು ಮತ್ತು ಪ್ರಸಿದ್ಧವಾಯಿತು. ಹಿಂದಿರುಗುವಾಗ ವಿಮಾನದಲ್ಲಿ ಸ್ವಿಸ್ ಕಾನ್ಸುಲ್ ಅವರ ಪತ್ನಿಯೂ ಇದ್ದರು. ನಮ್ಮ ಗೆಳೆಯರ ಜೊತೆ ಅವರು ಮಾತನಾಡಿದರು ಮಾತನಾಡುವಾಗ ಅವರಿಗೆ ಫೋಟೋ ತೋರಿಸಿದಾಗ ಇದನ್ನು ನೋಡಿದ್ದೇನೆ ಎಂದು ಹೇಳಿದರು. ಎಲ್ಲಿ ನೋಡಿದ್ದೀರಿ? ಎಂದು ಕೇಳಿದಾಗ ಅವರು ಸಿನಿಮಾದಲ್ಲಿ ನೋಡಿದ್ದೇನೆ ಎಂದು ಹೇಳಿದರು. ಹೀಗಾಗಿ, ಈಗ ನಮ್ಮ ಮಗು ಕೂಡ ಅಲ್ಲಿಗೆ ಹೋದರೂ ಅವನ ಹಿಂದೆ ಒಂದು ದೊಡ್ಡ ಗುಂಪೇ ಇದೆ ಎಂದು ಅರ್ಥವಾಗುವಷ್ಟು ಪ್ರಸಿದ್ಧಿಯಾಗಿದೆ. ಅದರ ಅರಿವು ಹೇಗಾಯಿತು ಎಂದರೆ ಅತ್ಯಂತ ಪ್ರಭಾವಿಯಾಗಿದ್ದ ಮೂವರು ಪಾದ್ರಿಗಳು ಕಾಬುಲ್ ವಿರೋಧಿ ಪ್ರತಿಭಟನಾ ರ್ಯಾಲಿಯಲ್ಲಿ ಸೇರಿದ್ದರು. ಅವರಲ್ಲಿ ಒಬ್ಬರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದನು: ಸರಕಾರಗಳು ಅಹ್ಮದಿಯರ ಕೈಗೆ ಸಿಗುವ ಕಾಲ ಬರಲಿದೆ. ಈ ಸಮಯದಲ್ಲಿ ಮನುಕುಲಕ್ಕಾಗಿ ನರಳುತ್ತಿರುವ ಈ ಜನರ ಪೀಳಿಗೆಗಳು ನೋಡುತ್ತಾರೆ ಮತ್ತು ನಮ್ಮ ಪೂರ್ವಜರು ಎಂತಹವರಾಗಿದ್ದರು ಎಂದು ಜನರು ಅವರನ್ನು ಮಾತನಾಡಲು ಸಹ ಬಿಡುತ್ತಿರಲಿಲ್ಲ ಅವರನ್ನು ವಧಿಸುತ್ತಿದ್ದರು ಮತ್ತು ಪ್ರತಿಯೊಂದು ರೀತಿಯ ತೊಂದರೆಗಳನ್ನು ನೀಡುತ್ತಿದ್ದರು ಆದರೆ ಇಂದು ನಾವು ಆ ತ್ಯಾಗಗಳ ಫಲಿತಾಂಶವಾಗಿ ಅರಸರಾಗಿದ್ದೇವೆ ಎಂದು ಹೆಮ್ಮೆಪಡುತ್ತಾರೆ. (ಅನ್ವಾರುಲ್ ಉಲೂಮ್, ಸಂಪುಟ–8, ಪುಟ–615 ರಿಂದ 616)

ಹಝ್ರತ್ ಭಾಯಿ ಅಬ್ದುರ್ರಹ್ಮಾನ್ ಸಾಹಿಬ್(ರ) ಖಾದಿಯಾನಿ ಅವರು ವರದಿ ಮಾಡುತ್ತಾರೆ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು:

"ನಮ್ಮ ಈ ಪ್ರಯಾಣವು ಜ್ಹೇಲಮ್ ಪ್ರಯಾಣದಂತೆ ಅಲ್ಲಾಹನ ಕರುಣೆ ಮತ್ತು ಅನುಗ್ರಹದ ಮೂಲಕ ಸಂಭವಿಸಿದೆ ಮತ್ತು ಯಶಸ್ಸು ಕೂಡ ಅನುಗ್ರಹದಿಂದ ಲಭಿಸಿದೆ. ಜ್ಹೇಲಮ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾನ್ ಪ್ರಯಾಣದಂತೆಯೇ, ಅಲ್ಲಾಹನು ವಿಶೇಷ ಉದ್ದೇಶದಿಂದ ಪ್ರಯಾಣಕ್ಕಾಗಿ ಉಪಕರಣಗಳನ್ನು ಸೃಷ್ಟಿಸಿದನು ಮತ್ತು ಯಶಸ್ಸನ್ನು ನೀಡಿದನು." (ಸಫರ್ ಯೂರೋಪ್, ಪುಟ–490 ರಿಂದ 491)

ಒಟ್ಟಿನಲ್ಲಿ ಈ ಪ್ರವಾಸವು ಅತ್ಯಂತ ಯಶಸ್ವಿ ಮತ್ತು ಅನುಗ್ರಹದಾಯಕ ಪ್ರವಾಸವಾಗಿದೆ. ಇದರಲ್ಲಿ ಸರ್ವಶಕ್ತನಾದ ಅಲ್ಲಾಹನ ಬೆಂಬಲ ಮತ್ತು ಸಹಾಯದ ದರ್ಶನಗಳನ್ನು ನಾವು ಎಲ್ಲೆಡೆ ನೋಡಿದ್ದೇವೆ. ಓದುಗರು ತಮ್ಮ ಜ್ಞಾನವನ್ನು ಹೆಚ್ಚಿಸಲು "ಬದರ್"ನ ಈ ವಿಶೇಷ ಸಂಚಿಕೆಯನ್ನು ಓದಬೇಕು. ಅಲ್ಲಾಹನು ಇದರ ಪ್ರಕಟಣೆಯನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಲಿ. ಆಮೀನ್.

ವಸ್ಸಲಾಮ್, ಖಾಕ್ಸಾರ್

ಖಲೀಫತುಲ್ ಮಸೀಹ್ ಖಾಮಿಸ್

# ಹಝ್‌ರತ್ ಮುಸ್ಲೆಹ್ ಮೌಊದ್ (ರ) ಅವರ ಮೊದಲ ಯೂರೋಪ್ ಪ್ರವಾಸ 1924 ಮತ್ತು ಅದರ ಅನುಗ್ರಹಗಳು


| ಕ್ರಮ ಸಂಖ್ಯ | ವಿಷಯ ಸೂಚಿಕೆ | ಪುಟ |
|---|---|---|
| 01 | ಸಂಪಾದಕರ ನುಡಿ | 01 |
| 02 | 1924 ರಲ್ಲಿ ಸಯ್ಯದ್ ಹಜರತ್ ಮುಸ್ಲೆಹ್ ಮುಆದ್ ರದಿ ಅಲ್ಲಾ ಅನ್ಹು ಅವರ ಯುರೋಪ್ ಭೇಟಿಯ ವರದಿ | 03 |
| 03 | ಮಸ್ಜಿದ್ ಫಝ್ಲ್ ಲಂಡನ್-ಶಂಕು ಸ್ಥಾಪನೆ, ನಿರ್ಮಾಣ ಮತ್ತು ಉದ್ಘಾಟನೆ | 10 |
| 04 | ವೆಂಬ್ಲೆ ಸಮ್ಮೇಳನದ ವರದಿ ಮತ್ತು ಹಝ್‌ರತ್ ಮುಸ್ಲೆಹ್ ಮೌಊದ್(ರ) ಅವರ ಲೇಖನದ ಕುರಿತು ವಿಧ್ವಾಂಸರ ಮತ್ತು ಪತ್ರಿಕೆಗಳ ಪುನರ್‌ವಿಮರ್ಶೆ | 16 |
| 05 | 1924 ರಲ್ಲಿ ಯುರೋಪ್ ಪ್ರವಾಸದಿಂದ ಹಝ್‌ರತ್ ಮುಸ್ಲೆಹ್ ಮೌಊದ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಹಿಂದಿರುಗುವಿಕೆ | 22 |


## ಸಯ್ಯಿದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಅವರ ಯೂರೋಪ್ ಪ್ರವಾಸ ಕೆಲವು ದಿನಗಳ ಭೇಟಿ, ಶತಮಾನಗಳ ಅನುಗ್ರಹಗಳು

ಜಲ್ಸ ಸಾಲಾನ ಖಾದಿಯಾನ್ 2024 ಸಂದರ್ಭದಲ್ಲಿ ಪ್ರಕಟವಾದ ಈ ಬದರ್ ಪತ್ರಿಕೆಯ ವಿಶೇಷಾಂಕಗೋಸ್ಕರ, ಹುಝೂರ್ ಅನ್ವರ್(ಅತಬಿಅ) ರವರು **"ಸಯ್ಯಿದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ರವರ 1924ರ ಮೊದಲ ಯೂರೋಪ್ ಪ್ರವಾಸ, ಅದರ ಅನುಗ್ರಹಗಳು ಹಾಗೂ ಫಲಗಳು"** ಶೀರ್ಷಿಕೆಗೆ ಅನುಮತಿ ನೀಡಿದರು. ಹಾಗೂ ತಮ್ಮ ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಈ ವಿಶೇಷಾಂಕಗೋಸ್ಕರ ಆಶೀರ್ವಾಧಿತ ಸಂದೇಶ ಮತ್ತು ತಮ್ಮ ಪವಿತ್ರ ಹಸ್ತದಿಂದ ಸಹಿಯೊಂದಿಗೆ ಬದರ್ ಓದುಗರಿಗೆ ತಮ್ಮ ಚಿತ್ರವನ್ನು ಕಳುಹಿಸಿದ್ದಾರೆ. ಅದಕ್ಕಾಗಿ ನಾವು ಹುಝೂರ್ ಅನ್ವರ್(ಅತಬಿಅ) ಅವರಿಗೆ ಕೃತಜ್ಞರಾಗಿದ್ದೇವೆ ಮತ್ತು ನಮ್ಮ ಪ್ರಾರ್ಥನೆಯಿದೆ. **ಅಲ್ಲಾಹುಮ್ಮ ಅಯ್ಯದ್ ಇಮಾಮನಾ ಬಿರೂಹಿಲ್ ಖುದುಸ್ ವ ಬಾರಿಕ್ ಲನಾ ಫೀ ಉಮ್ರಿಹೀ ವ ಅಮ್ರಿಹೀ-** ಅತ್ಯಂತ ಬಿಡುವಿಲ್ಲದ ಕೆಲಸ ಕಾರ್ಯಗಳ ನಡುವೆಯೂ ಎಂಬ ಪದಗಳನ್ನು ಕಾಟಾಚಾರಕ್ಕಾಗಿ ಉಪಯೋಗ ಮಾಡಲಿಲ್ಲ, ಬದಲು ವಾಸ್ತವವಾಗಿಯೂ ಖಿಲಾಫತ್ ಎಂಬುದು ಒಂದು ಕಬ್ಬಿಣದ ಕಡಲೆಯ ಹುದ್ದೆಯಾಗಿದೆ. ಅದರ ಕಾರ್ಯಗಳು ಎಷ್ಟರಮಟ್ಟಿಗಿವೆ ಎಂದರೆ ಅಲ್ಲಾಹನ ಅನುಗ್ರಹ ಜೊತೆಗಿರದಿದ್ದರೆ ನಿಶ್ಚಯವಾಗಿಯೂ ಒಂದು ಅಲ್ಪ ಅವಧಿಯಲ್ಲೇ ಮನುಷ್ಯನು ಸಾವನ್ನಪ್ಪಬಹುದು. ಆದರೆ ಅಲ್ಲಾಹನೇ ಈ ಹುದ್ದೆಯ ಕಾವಲುಗಾರನಾದ ಕಾರಣ ಅವನು ತನ್ನ ಕೃಪೆಯಿಂದ ಈ ಕಾರ್ಯಗಳನ್ನು ನಡೆಸುತ್ತಾನೆ." ಆದ್ದರಿಂದ ನಾವು ಹುಝೂರ್ ಅನ್ವರ್(ಅತಬಿಅ) ಅವರಿಗೋಸ್ಕರ ದಿನನಿತ್ಯವೂ ಪ್ರಾರ್ಥಿಸುವುದು ನಮ್ಮ ಕರ್ತವ್ಯವೆಂದು ಭಾವಿಸಬೇಕಾಗಿದೆ. ಅದರಲ್ಲಿ ನಮ್ಮದೇ ಒಳಿತಿದೆ.

ಸಯ್ಯಿದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) 1924 ಜುಲೈ ತಿಂಗಳು ಖಾದಿಯಾನ್‌ನಿಂದ ಯೂರೋಪ್ ಪ್ರವಾಸಕ್ಕೆ ಹೊರಟಿದ್ದರು. ಇಂದಿಗೆ ಅವರ ಈ ಪ್ರವಾಸಕ್ಕೆ ಒಂದು ನೂರು ವರ್ಷಗಳು ಸಂದಿವೆ. ಅದಕ್ಕಾಗಿ ನಮಗೆ ಈ ವಿಶೇಷಾಂಕ ಪ್ರಕಟಿಸುವ ಭಾಗ್ಯ ದೊರೆಯುತ್ತಿದೆ. ಅಲ್ಲಾಹನು ಅದನ್ನು ಅನುಗ್ರಹಿಸಲಿ. ಮತ್ತು ಓದುಗರ ಜ್ಞಾನವನ್ನು ಹೆಚ್ಚಿಸಿಕೊಳ್ಳುವಂತಾಗಲಿ. ಆಮೀನ್.

ಖಾದಿಯಾನ್‌ನಿಂದ ಹೊರಟು ಖಾದಿಯಾನ್‌ಗೆ ಮರಳುವ ತನಕದ ಈ ಪ್ರವಾಸ ಅತ್ಯಂತ ದೂರಾಗಾಮಿ, ಅತ್ಯಂತ ರೋಚಕ ಮತ್ತು ಅತ್ಯಂತ ವಿಶ್ವಾಸವರ್ಧಕವಾಗಿದೆ. ಹೊರಡುವ ಸಮಯದಲ್ಲಿ ಪ್ರಾರ್ಥನೆ ಮತ್ತು ಹುಝೂರ್(ರ)ರ ಹೊರಟ ನಂತರದ ದೃಶ್ಯಗಳು

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಮತ್ತು ಖಾದಿಯಾನ್ ಮರಳಿದ ನಂತರ ಮರುಳುವಿಕೆಯ ಸಂತೋಷ ಹಾಗೂ ಸಂಭ್ರಮದ ವಾತಾವರಣ ಹೇಳತೀರದು. ಹುಝೂರ್(ರ) ವಿವರಿಸಿದ ಪ್ರವಾಸದ ಧ್ಯೇಯೋದ್ದೇಶಗಳು ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಚಲ್ಲಿದ ಬೆಳಕು ಮತ್ತು ಈ ಪ್ರವಾಸದ ಪರಿಣಾಮವಾಗಿ ಅಹ್ಮದಿಯತ್‌ಗೆ ದೊರೆತ ವಿಜಯ ಮತ್ತು ದಕ್ಕಿದ ಅಭೂತಪೂರ್ವ ಯಶಸ್ಸು ಮತ್ತು ಕೀರ್ತಿ, ಅಂದರೆ ಕೆಲವು ದಿನಗಳಲ್ಲಿ ವರ್ಷಾನುಗಟ್ಟಲೆಯ ಪ್ರಚಾರ ಆದಂತಾಗಿದೆ. ಹುಝೂರರಿಂದ ಈ ವರ್ಣನೆ ಅತ್ಯಂತ ವಿಶ್ವಾಸವರ್ಧಕವಾಗಿವೆ. ಈ ಪ್ರವಾಸದ ಫಲವಾಗಿ ಪವಿತ್ರ ಪ್ರವಾದಿ(ಸ) ರವರ ಭವಿಷ್ಯವಾಣಿ ಪೂರ್ಣಗೊಂಡಿದೆ. ಹಝ್‌ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ ಮತ್ತು ಸ್ವಪ್ನ ಪೂರ್ಣಗೊಂಡಿದೆ. ಸ್ವಯಂ ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ರವರ ಸ್ವಪ್ನ ಪೂರ್ಣಗೊಂಡಿದೆ. ಹಲವು ಸಮಾರಂಭಗಳು ಏರ್ಪಟ್ಟವು. ಅದರಲ್ಲಿ ಹುಝೂರ್(ರ) ಸಂಬೋಧಿಸಿದರು. ಹಲವು ಸಾಮೂಹಿಕ ಭೇಟಿಗಳು ನಡೆದವು. ಅದರಲ್ಲಿ ಅವರು ಉಪದೇಶಗಳನ್ನು ನೀಡಿದರು. ಹಲವು ಸಾಮೂಹಿಕ ಭೇಟಿಗಳಾದವು, ಅದರಲ್ಲಿ ಇಸ್ಲಾಮಿ ಬೋಧನೆಗಳನ್ನು ವಿವರಿಸಿದರು. ಲಂಡನ್ ನಿವಾಸಿಗರಿಗೆ ಮತ್ತು ಲಂಡನ್‌ನ ನವ ಮುಸ್ಲಿಮರಿಗೆ ಆಧ್ಯಾತ್ಮಿಕ ಹಾಗೂ ದೈವಿಕ ಸಂದೇಶವನ್ನು ನೀಡಿದರು. ಮಸ್ಜಿದ್ ಫಝ್ಲ್ ಲಂಡನ್‌ನ ಅಡಿಗಲ್ಲು ಹಾಕಿದರು. ಹಲವು ದೇಶ ವಿದೇಶಗಳ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದರು. ಮತ್ತು ಪ್ರಚಾರದ ಅವಕಾಶಗಳ ಸಮೀಕ್ಷೆ ನಡೆಸಿದರು.

ಪ್ರವಾಸದ ವರದಿಯ ಒಂದು ಅಂಗ ಹುಝೂರ್(ರ), ಈ ಪ್ರವಾಸದ ಸಮಯ ಪೈಗ್ಹಾಮಿಯರಿಗೆ ಅವರು ಎತ್ತಿದ ಆಕ್ಷೇಪಗಳಿಗೆ ಉತ್ತರ ನೀಡಿದರು. ಅವೆಲ್ಲ ವಿಷಯಗಳು ಅಲ್ ಫಝ್ಲ್ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಮತ್ತೊಂದು ಅತ್ಯಂತ ಸುಂದರವಾದ ಹಾಗೂ ರೋಚಕವಾದ ಸುದ್ದಿ ಎಂದರೆ ಈ ನಡುವೆ ಅತ್ಯಂತ ವಿಶ್ವಾಸವರ್ಧಕ ಕವನಗಳ ಸರಣಿ ನಡೆಯಿತು. ಹುಝೂರರನ್ನು ಬೀಳ್ಕೊಡುವ ಸಮಯದಲ್ಲಿ ಬೀಳ್ಕೊಡುವ ಗೀತೆಗಳು, ಅವರು ಮರಳಿ ಆಗಮಿಸಿದಾಗ ಸ್ವಾಗತ ಹಾಡುಗಳು, ದು:ಖಭರಿತ ಕವನಗಳು, ಒಂದೆಡೆ ದು:ಖ ಉಂಟು ಮಾಡಿದರೆ, ಇನ್ನೊಂದೆಡೆ ವಿದೇಶದಲ್ಲಿ ಇಸ್ಲಾಮಿ ಕೋಲಾಹಲ, ಸಂತೋಷದ ಕವನಗಳು ಕೇಳಿಬಂದವು. ಲಂಡನ್‌ನಲ್ಲಿ ಮಸೀದಿಯ ಅಡಿಗಲ್ಲು ಹಾಕಿದ ಸಂತೋಷದಲ್ಲಿ ಕವನಗಳು, ಹಝ್‌ರತ್ ಮುಸ್ಲಿಹ್ ಮೌಊದ್(ರ) ಖಾದಿಯಾನ್ ಮತ್ತು ಖಾದಿಯಾನ್ ನಿವಾಸಿಗಳಿಂದ ವಿದಾಯ ಕೋರುವಾಗ, ಮತ್ತು ಖಾದಿಯಾನ್‌ನ ಪಾವಿತ್ರ್ಯತೆಯಲ್ಲಿ ಪ್ರವಾಸದ ಸಮಯ ಒಂದು ಅತ್ಯುತ್ತಮ ಕವನ ರಚಿಸಲ್ಪಟ್ಟಿತು. ಅದರ ಎರಡು ಕವನ ಸಾಲುಗಳು ಹೀಗಿವೆ. ಹುಝುರ್(ರ) ಹೀಗೆ ನುಡಿಯುತ್ತಾರೆ:

ಖಯಾಲ್ ರೆಹ್ತಾ ಹೈ ಹಮೇಶಾ ಉಸ್ ಮಖಾಮೆ ಪಾಕ್ ಕಾ
ಸೋತೆ ಸೋತೆ ಭಿ ಕೆಹ್ ಉಠತ್‌ತಾ ಹೋಂ ಹಾಯೆ
ಖಾದಿಯಾನ್
ಆಹ್ ಕೈಸೀ ಖುಷ್ ಘಡೀ ಹೋಗೀ ಕೆ ಬಾನೀಲೆ ಮರಾಮ್
ಬಾನ್‌ಧೇಂಗೆ ರಖ್ತೆ ಸಫರ್ ಕೊ ಹಮ್ ಬರಾಯೆ ಖಾದಿಯಾನ್

(ಯಾವಾಗಲೂ ಆ ಪವಿತ್ರ ಸ್ಥಳವೇ ಧ್ಯಾನದಲ್ಲಿರುತ್ತದೆ. ಮಲಗುವ ವೇಳೆಯು ಹೇ ಖಾದಿಯಾನ್ ಎಂದು ಧ್ವನಿ ಮೂಡಿಬರುತ್ತದೆ. ನಾವು ಇಲ್ಲಿಂದ ಮರಳಿ ಖಾದಿಯಾನ್‌ಗೆ ಹೋಗುವಾಗ, ಆ ಸಮಯ ಆ ಕ್ಷಣಗಳು ಎಷ್ಟು ಮಧುರವಾಗುವುವು).

ಅದಕ್ಕೆ ಉತ್ತರವಾಗಿ ಹಝ್‌ರತ್ ಸಯ್ಯದಾ ನವಾಬ್ ಮುಬಾರಕಾ ಬೇಗಂ ಸಾಹಿಬ(ರ) ಸಹ ಎಷ್ಟು ಸುಂದರ ಕವನವನ್ನು ಬರೆದಿದ್ದಾರೆ, ಅದನ್ನು ಎಷ್ಟು ಸಲ ಓದಿದರೂ ಅದರ ರಸ ಕಡಿಮೆಯಾಗದು. ಆ ಕವನದ ಎರಡು ಸಾಲುಗಳು ಹೀಗಿವೆ:

ಸೈಯಿದಾ ಹೈ ಆಪ್ಕೊ ಶೌಖೆ ಲಿಖಾಯೆ ಖಾದಿಯಾನ್
ಹಿಜ್ರ್ ಮೇಂ ಖೂಂ ಬಾರ್ ಹೈಂ ಯಾ ಚಶ್ಮ ಹಾಯೆ ಖಾದಿಯಾನ್
ಸಬ್ ತಡಪ್ತೆ ಹೈಂ ಕಹಾಂ ಹೈ ಝೀನತ್ ದಾರುಲ್ ಅಮಾನ್

ರೌನಖೆ ಬುಸ್ತಾನೆ ಅಹ್ಮದ್ ದಿಲ್ರುಬಾಯೆ ಖಾದಿಯಾನ್
(ಸಯ್ಯಿದಾ! ನಿನಗೆ ಖಾದಿಯಾನ್ ಸೇರುವ ತವಕವಿದೆ, ವಿರಹದ ನಿಮಿತ್ತ ಇಲ್ಲಿ ನನ್ನ ಕಣ್ಣುಗಳು ಆಶುಭರಿತವಾಗಿವೆ. ಖಾದಿಯಾನ್‌ನ ಸೌಂದರ್ಯ ಎಲ್ಲಿದೆ ಎಂದು ಎಲ್ಲರೂ ದುಃಖಿತಪ್ತರಾಗಿದ್ದಾರೆ.
ಅಹ್ಮದ್‌ನ ಉದ್ಯಾನವನದ ಆಕರ್ಷಕ, ಖಾದಿಯಾನ್‌ನ ಪ್ರೇಮಿ)

ಖಾದಿಯಾನ್ ಹಿಂದಿರುಗಿದ ನಂತರ ಒಂದು ಸಂದರ್ಭದಲ್ಲಿ ಹುಝೂರ್[ರ] ಹೀಗೆ ಹೇಳಿದರು:

"ನನ್ನ ದೃಷ್ಟಿಯಲ್ಲಿ ಈ ಪ್ರವಾಸದಿಂದ ದೊಡ್ಡ ದೊಡ್ಡ ಪ್ರಯೋಜನಗಳಲ್ಲದೆ ಕೆಲವರು ಮೌಲ್ವಿ ಶೇಕ್ ಅಲಿ ಸಾಹಿಬ್ ಅವರ ಕುರಿತು ಹೇಳಿದ್ದಾರೆ, ಅವರು ಹೇಳಿದ ಪ್ರಕಾರ ಕೆಲವು ಸಣ್ಣ ಸಣ್ಣ ಪ್ರಯೋಜನವು ದೊರೆತಿದೆ, ಅದರಲ್ಲಿ ಒಂದು ನನ್ನ ಪ್ರವಾಸದಿಂದಾಗಿ ಹಲವು ಹೊಸ ಕವಿಗಳು ಜನ್ಮ ತಾಳಿದ್ದಾರೆ, ವಿಶೇಷವಾಗಿ ನನ್ನ ತಂಗಿ ಕವಿಯಿತ್ರಿಯಾಗಿದ್ದಾಳೆ."

ಒಟ್ಟಿನಲ್ಲಿ ಈ ಪ್ರವಾಸದ ಆರಂಭದಿಂದ ಖಾದಿಯಾನ್ ಮರಳುವವರೆಗೆ ಎಲ್ಲವೂ ಹೃದಯವನ್ನು ಬೆಚ್ಚಗಾಗಿಸುತ್ತದೆ, ಆತ್ಮವನ್ನು ಪ್ರಚೋದಿಸುತ್ತದೆ, ನಂಬಿಕೆಯನ್ನು ಹೆಚ್ಚಿಸುತ್ತದೆ, ಜ್ಞಾನವನ್ನು ಬೆಳಗಿಸುತ್ತದೆ, ಏಕೆ ಹೀಗೆ ಆಗಬಾರದು. ಇದು ದೈವಿಕ ಅನುಗ್ರಹಾತ್ಮಕ ಪ್ರವಾಸವಾಗಿತ್ತು. ಅದು ಅನಾದಿ ಕಾಲದಿಂದ ಉದ್ದೇಶಿಸಲ್ಪಟ್ಟಿದೆ. ಈ ಪ್ರವಾಸದ ಕುರಿತು ಕೆಲವು ಪ್ರಮುಖ ವಿಷಯಗಳು ಮತ್ತು ಪ್ರವಾಸದ ಉದ್ದೇಶಗಳನ್ನು ಹುಝೂರ್ ರವರ ಪದಗಳಲ್ಲಿ ಪ್ರಸ್ತುತಪಡಿಸುವೆವು.

**ಈ ಪ್ರಯಾಣವನ್ನು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೆಖಿಸಲಾಗಿದೆ.**

ಹುಝೂರ್[ರ] ಹೇಳುತ್ತಾರೆ:- "ನಾನು ಯಾವ ಉದ್ದೇಶಕ್ಕಾಗಿ ಪ್ರಯಾಣಿಸಿದ್ದೇನೆಯೋ ಆ ಉದ್ದೇಶಕ್ಕಾಗಿ ವಾಗ್ದತ್ತ ಮಸೀಹ್ ಅಥವಾ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರು ಯೂರೋಪ್‌ಗೆ ಮಾಡಿದ ಪ್ರಯಾಣವನ್ನು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಈ ರೀತಿಯ ಪ್ರಯಾಣವಿಲ್ಲದೆ ಇಸ್ಲಾಂ ಧರ್ಮದ ರಕ್ಷಣೆ ಪೂರ್ಣವಾಗುವುದಿಲ್ಲ ಎಂದು ತಿಳಿದಿದೆ. ಆದ್ದರಿಂದ ವಾಗ್ದತ್ತ ಮಸೀಹರ ಬರಹಗಳ ಪ್ರಕಾರ ಮತ್ತು ದುಲ್ ಖರ್‍ನೈನ್ ಅವರಾಗಿದ್ದರಿಂದ, ಪಾಶ್ಚಿಮಾತ್ಯ ದೇಶಗಳೆಂದರೆ ಯೂರೋಪ್ ಮತ್ತು ಅಮೇರಿಕಾದ ಜನರಾಗಿದ್ದಾರೆ, ಅವರು ಕ್ರಿಶ್ಚಿಯನ್ ಧರ್ಮದ ಮೇಲೆ ಬೀಡುಬಿಟ್ಟಿದ್ದಾರೆ, ಇದರಿಂದ ಸ್ಪಷ್ಟವಾಗುವುದೇನೆಂದರೆ ವಾಗ್ದತ್ತ ಮಸೀಹರು ಅಥವಾ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬರು ಪಶ್ಚಿಮ ದೇಶಗಳಿಗೆ ಪ್ರಯಾಣ ಮಾಡುವರು.

(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 16, ಆಗಸ್ಟ್ 1924, ಪುಟ-7)

**ಈ ಪ್ರಯಾಣದ ಉಲ್ಲೇಖ ಹದೀಸಿನಲ್ಲಿದೆ.**

ಹದೀಸಿನಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಈಸಾ(ಅ) ಅವರಿಗೆ ದೇವವಾಣಿ (ವಹಿ) ಮೂಲಕ ತಿಳಿಸುವನು, ನಾನು ಈಗ ಎಂತಹ ಜನರನ್ನು ಕಳುಹಿಸಿದ್ದೇನೆ (ಅಂದರೆ ಯಜ್‌ಜೂಜ್ ಮಜ್‌ಜೂಜ್) ಅವರೊಂದಿಗೆ ಯುದ್ಧ ಮಾಡುವ ಶಕ್ತಿ ಯಾರಲ್ಲೂ ಇರುವುದಿಲ್ಲ. ಆದ್ದರಿಂದ ನೀವು ನನ್ನ ದಾಸರನ್ನು ಪರ್ವತಗಳ ಕಡೆಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿರಿ. ಹಾಗಾಗಿ ಇಂತಹ ಅವಸ್ಥೆಯಲ್ಲಿ ಅಲ್ಲಾಹನು ಯಜ್‌ಜೂಜ್ ಮಜ್‌ಜೂಜ್‌ರವನ್ನು ಕಳುಹಿಸುವನು. ತದನಂತರ ಹೀಗೆ ಇದೆ: **ಯಹ್‌ಬಿತು ನಬಿಯುಲ್ಲಾಹಿ ಈಸಾ ವ ಅಸ್‌ಹಾಬುಹೂ ಇಲಲ್ ಅರ್ಝಿ ಫಲಾ ಯಜಿದೂನ ಫಿಲ್ ಅರ್ಝಿ ಮೌಝಿಅ ಶಿಬ್ರಿನ್ ಇಲ್ಲಾ ಮಲಹೂ ಝುಹಮುಹುಮ್ ವನತ್‌ನುಹುಮ್**- ಅಂದರೆ ಅಲ್ಲಾಹನ ಪ್ರವಾದಿ, ಈಸಾನಬಿ ಮತ್ತು ಅವರ ಸಂಗಡಿಗರು ಯಜ್‌ಜೂಜ್ ಮಜ್‌ಜೂಜ್‌ರ ಭೂಮಿ ಮೇಲೆ ಇಳಿಯುವರು. ಆದರೆ ಆಗ ಭೂಮಿಯಲ್ಲಿ ಒಂದು ಅಡಿಯಷ್ಟು ಜಾಗ ಯಾಜೂಜ್ ಮಾಜೂಜ್‌ಗಳ ಶವಗಳಿಂದ ಮತ್ತು ಅದರ ಗಬ್ಬುವಾತದಿಂದ ಖಾಲಿ ಸಿಗದು.

ತದನಂತರ ಹದೀಸಿನಲ್ಲಿ ಹೀಗಿದೆ:

ಆಗ ಅಲ್ಲಾಹನ ಪ್ರವಾದಿ ಈಸಾನಬಿ ಮತ್ತು ಅವರ ಸಂಗಡಿಗರು ಪ್ರಾರ್ಥಿಸುವರು. ಆಗ ಅಲ್ಲಾಹನು ಪಕ್ಷಿಗಳನ್ನು ಕಳುಹಿಸುವನು. ಅದರ ಕುತ್ತಿಗೆಗಳು ಬಖ್ತಿ ಒಂಟೆಗಳ ರೀತಿಯಲ್ಲಿರುವವು. ಆ ಪಕ್ಷಿಗಳು ಆ ಶವಗಳನ್ನು ಎಲ್ಲಿ ಅಲ್ಲಾಹನು ಅವರನ್ನು ಬಿಸಾಕಲು ಆದೇಶಿಸುತ್ತಾನೋ ಅಲ್ಲಿ ಎತ್ತಿ ಬಿಸಾಡುವುವು, ನಂತರ ಅಲ್ಲಾಹನು ಮಳೆ ಸುರಿಸುವನು. ಎಲ್ಲಿಯವರೆಗೆಂದರೆ ಒಂದು ಮನೆ ಸಹ ಬಾಕಿ ಉಳಿಯದು ಮತ್ತು ಇಡೀ ಭೂಮಿಯು ತೊಡೆದುಬರುವುದು. ಅದು ಕನ್ನಡಿಯ ರೀತಿ ಸ್ವಚ್ಛವಾಗುವುದು ಮತ್ತು ಭೂಮಿಗೆ ಹೇಳಲಾಗುವುದು, ತನ್ನ ಫಲಗಳನ್ನು ಬೆಳೆಸು ಮತ್ತು ತನ್ನ ಔದಾರ್ಯವು ದಯಪಾಲಿಸು.

ಈಸಾ ಎಂದರೆ ವಾಗ್ದತ್ತ ಹಝ್ರತ್ ಮಸೀಹರಾಗಿದ್ದಾರೆ ಮತ್ತು ಯಾಜೂಜ್ ಮಾಜೂಜ್ ಭೂಮಿಯ ಮೇಲೆ ಅವರ ಅವತರಿಕೆ ಎಂದರೆ ಅವರ ಉತ್ತರಾದಿಕಾರಿಯ ಬರುವಿಕೆ ಆಗಿದೆ. ಇನ್‌ಶಾಅಲ್ಲಾಹ್ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಉತ್ತರಾಧಿಕಾರಿಗಳ ಪ್ರಾರ್ಥನೆಗಳಿಂದ ಯಾಜೂಜ್ ಮಾಸೂಜನ ಭೂಮಿ ಕನ್ನಡಿಯ ರೀತಿ ತೊಳೆದುಕೊಂಡು ಸ್ವಚ್ಛವಾಗುವುದು.

**ಪವಿತ್ರ ಪ್ರವಾದಿ ಮುಹಮ್ಮದ್(ಸ) ರವರ ಭವಿಷ್ಯವಾಣಿ ಪ್ರಾರ್ಥಿಸುವುದು.**

ಹುಝೂರ್[ರ] ಹೇಳುತ್ತಾರೆ. ಪವಿತ್ರ ಪ್ರವಾದಿ ಮುಹಮ್ಮದ್[ಸ] ರವರ ಭವಿಷ್ಯವಾಣಿ ಹಝ್ರತ್ ಮಸೀಹ್ ಮೌಊದ್[ಅ] ರವರ ಕಾಲಘಟ್ಟ ಬಗ್ಗೆ ಏನಿದೆ ಅದರ ಅರ್ಥವೇನೆಂದು ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು. ವಾಗ್ದತ್ತ ಮಸೀಹ್ ಅಥವಾ ಅವರ ಒಬ್ಬ ಉತ್ತರಾದಿಕಾರಿ (ಖಲೀಫ) ಸೀರಿಯಾಕ್ಕೆ ಹೋಗುವರು, ನನಗೆ ಅಲ್ಲಿ ಹೋಗುವ ಇರಾದೆ ಇದೆ, ಅದಕ್ಕಾಗಿ ಒಂದಿಷ್ಟು ಹಾದಿ ಬದಲಿಸಿ ಹೋಗಬೇಕಾಗಬಹುದು. ಆದರೆ ಇಂತಹ ಅವಕಾಶಗಳು ಮತ್ತೆ ಮತ್ತೆ ಸಿಗುವುದಿಲ್ಲ. ಆದ್ದರಿಂದ ಆದಷ್ಟುಮಟ್ಟಿಗೆ ಈ ಪ್ರಯಾಣದಿಂದ ಲಾಭ ಪಡೆಯುವುದು ಅವಶ್ಯವಾಗಿದೆ ಮತ್ತು ಸಂಘಟನೆಗಾಗಿ ಸತ್ಯತೆಯ ದೃಷ್ಟಾಂತಗಳನ್ನು ಸ್ಥಾಪಿಸುವುದು ಒಂದು ಸುಯೋಗ ಆಗಿರುತ್ತದೆ. (ಯೂರೋಪ್ ಪ್ರವಾಸ, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-381)

**ಎರಡು ಭವಿಷ್ಯವಾಣಿಗಳ ಪೂರ್ಣಗೊಳ್ಳುವಿಕೆ**

ಪೈಗಾಮಿಗಳು ಅಂದರೆ ಹುಝೂರ್[ರ] ರವರ ಈ ಪ್ರಯಾಣದಿಂದ ಲಾಹೋರಿಗಳಲ್ಲಿ ಬಹಳ ತಳಮಳ ಉಂಟಾಯಿತು. ಅವರು ಹುಝೂರ್[ರ] ರವರ ಈ ಪ್ರಯಾಣವನ್ನು ಐಶಾರಾಮಿ ವಿಹಾರ ಮತ್ತು ಸಂಪತ್ತಿನ ದುರುಪಯೋಗ ಎಂದು ಕರೆದರು. ಅವರ ಈ ಆಕ್ಷೇಪಣೆಯ ಉತ್ತರ ಅಲ್-ಫಝ್ಲ್ ಸಂಪಾದಕರು, ಇತರ ಪ್ರಬಂಧಕರು ಹಾಗೂ ಸ್ವತಃ ಹುಝೂರ್[ರ] ಈ ರೀತಿ ನೀಡಿದರು. ಅದನ್ನು ಅಲ್ ಫಝ್ಲ್‌ನಲ್ಲಿ ಕಾಣಬಹುದಾಗಿದೆ. ಅವರ ಆಕ್ಷೇಪಣೆಗಳಿಗೆ ನೀಡಲಾದ ಶೀರ್ಷಿಕೆಯನ್ನು ನಾವು ಓದುಗರ ಅಭಿರುಚಿಗಾಗಿ ಪ್ರಕಟಿಸುತ್ತಿದ್ದೇವೆ. **"ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯ ಅವರ ಯೂರೋಪ್ ಪ್ರವಾಸ ಮತ್ತು ಗೈರ್ ಮುಬಾಯಿನರ ದ್ವೇಷ ಹಾಗೂ ಜಲಸಿ."** **"ಯೂರೋಪ್ ಪ್ರವಾಸದ ಮುಳ್ಳು ಮೌಲ್ವಿ ಮುಹಮ್ಮದ್ ಅಲಿ ಸಾಹಿಬರ ಗಂಟಲಿನಲ್ಲಿ"** **"ಮಹ್ಮೂದ್ ದಮಿಷ್ಕ್ ಮೇಂ ಔರ್ ಗೈರ್ ಮಬಾಯೀನ್ ಫಸ್ಸ್ ಮೇಂ"** **"ಮಹ್ಮೂದ್ ಸಫರ್ ಮೇ ಔರ್ ಹಾಸಿದ್ ಸಖರ್ ಮೇಂ"** ಈ ಲೇಖನವನ್ನು ಬರೆದವರು ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್[ರ]. ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಪ್ರಯಾಣದ ದುಃಖ ಅವರ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಿತು. ಅದಕ್ಕಾಗಿ ಲೇಖನ ಸಹ ಬರೆಯಬೇಕಾಯಿತು.

ಮೇಲಿನ ಎರಡು ಶೀರ್ಷಿಕೆ ಜೋಡಿಸಿ ಒಂದು ಕವನ ಸಾಲು ರಚಿಸಲಾಗಿದೆ. ನೋಡಿರಿ:

ಮೆಹಮೂದ್ ಸಫರ್ ಮೇ ಔರ್ ಹಾಸಿದ್ ಸಖರ್ ಮೇ
ಸಫರ್ ಯೂರೋಪ್ ಕಾ ಕಾಂಟಾ ಮೌಲ್ವಿ ಮುಹಮ್ಮದ್ ಅಲಿ ಕೆ ಹಲಖ್ ಮೇ

ಮೆಹಮೂದ್ ಪ್ರಯಾಣದಲ್ಲಿ ಮತ್ತು ಅವರ ಶಬ್ದಗಳು ಗೊಂದಲದಲ್ಲಿ
ಯೂರೋಪ್ ಪ್ರಯಾಣದ ಮುಳ್ಳು ಮೌಲ್ವಿ ಮುಹಮ್ಮದ್

*(ಉಳಿದ ಭಾಗ ಪುಟ ಸಂಖ್ಯೆ 25ರಲ್ಲಿ ಮುಂದುವರಿಸಲಾಗಿದೆ)*

# 1924 ರಲ್ಲಿ ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಯುರೋಪ್ ಪ್ರವಾಸದ ವರದಿ

(ಹಾಫಿಝ್ ಸೈಯದ್ ರಸೂಲ್ ನಿಯಾಝ್, ಮುರಬ್ಬಿ ಸಿಲ್‌ಸಿಲಾ ನಝಾರತ್ ನಶ್ರೊ ಇಶಾಅತ್ ಖಾದಿಯಾನ್)

**11 ಜುಲೈ 1924**

**ಶುಕ್ರವಾರ ಬಹಿಷ್ತಿ ಮಖ್ಬರಾದಲ್ಲಿ ಮೂರು ಬಾರಿ ದುಆ:**

ಜುಲೈ 11 ರ ಬೆಳಿಗ್ಗೆ, ಹಝ್ರತ್ ಮುಸ್ಲೆಹ್ ಮೌಊದ್(ರ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಮಾಧಿಯ ಬಳಿ ದುಆ ಮಾಡಲು ಬಹಿಷ್ತಿ ಮಖ್ಬರಾಗೆ ತೆರಳಿದರು. ಹುಝೂರ್(ರ) ಅವರು ಸಮಾಧಿಯ ಪೂರ್ವ ದಿಕ್ಕಿನಲ್ಲಿರುವ ಬಾಗಿಲಿನಲ್ಲಿ ನಿಂತು ದೀರ್ಘ ಸಮಯದವರೆಗೆ ದುಆ ಮಾಡಿದರು ಮತ್ತೆ ದಕ್ಷಿಣದ ಕಡೆಗೆ ನಂಗಲ್‌ನಿಂದ ಹಾದು ಹೋಗುತ್ತಾ ಕಾಲ್ಪವಾನ್ ಬಳಿಯ ರಸ್ತೆಗೆ ಹೋಗಿ ಬೇರೆ ಮಾರ್ಗದಿಂದ ಹಿಂತಿರುಗಿದರು, ಅವರು ಪುನಃ ಬಹಿಷ್ತಿ ಮಖ್ಬರಕ್ಕೆ ಆಗಮಿಸಿ ಪುನಃ ಪವಿತ್ರ ಸಮಾಧಿಯ ಬಂದು ಪ್ರಾರ್ಥಿಸಿದರು, ಅದೇ ದಿನ ಅವರು ಮಗ್ರಿಬ್ ನಮಾಝ್ ನಂತರ, ಮೂರನೇ ಬಾರಿ ಬಹಿಷ್ತಿ ಮಖ್ಬರಕ್ಕೆ ಭೇಟಿ ನೀಡಿ ದುಆ ಮಾಡಿದರು.

**ಮಸ್ಜಿದೆ ಅಖ್ಸಾದಲ್ಲಿ ಬೀಳ್ಕೊಡುಗೆ ಸಮಾರಂಭ:**

ಜುಮುಅ ನಮಾಝ್ ನಂತರ, ಹುಝೂರ್(ರ) ಅವರೊಂದಿಗೆ ಹಸ್ತಲಾಘವ ಮಾಡಲು ಅವಕಾಶ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಸ್ನೇಹಿತರು ಭೇಟಿಯಾಗಲು ಮಸೀದಿಗೆ ಬಂದರು, ಹುಝೂರ್(ರ) ಅವರು ನಮಾಝ್ ಅಸರ್ ಮಸ್ಜಿದ್ ಮುಬಾರಕ್‌ನಲ್ಲಿ ನಿರ್ವಹಿಸಿದರು ಮತ್ತೆ ಪುನಃ ಅವರು ಮಸ್ಜಿದ್ ಅಖ್ಸಾಗೆ ತೆರಳಿದರು ಅಲ್ಲಿ ಹುಝೂರ್(ರ) ತನ್ನ ಸಂಗಡಿಗರೊಂದಿಗೆ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಈ ಸಂದರ್ಭದಲ್ಲಿ ಹಝ್ರತ್ ಡಾ. ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ) ಅವರ ಒಂದು ಕವನವನ್ನು ಮದ್ರಸಾ ಅಹ್ಮದಿಯಾದ ವಿದ್ಯಾರ್ಥಿ ಮಲಿಕ್ ಅಬ್ದುಲ್ ಅಝೀಝ್ ಸಾಹಿಬ್ ಅವರು ಕರುಣಾಜನಕ ಸ್ವರದಲ್ಲಿ ವಾಚಿಸಿದರು, ಈ ಸಂದರ್ಭದಲ್ಲಿ ಹುಝೂರ್(ರ) ಅವರ ಕಣ್ಣುಗಳು ಕಂಬನಿಯಿಂದ ತುಂಬಿತು ಮತ್ತು ಅವರು ತಮ್ಮ ಮುಖವನ್ನು ಕರವಸ್ತ್ರದಿಂದ ಮುಚ್ಚಿಕೊಂಡರು. ಕವಿತೆಯ ನೋವಿನ ಸಾಹಿತ್ಯವು ನೋಯುತ್ತಿರುವ ಹೃದಯಗಳಿಗೆ ಕನ್ನಡಿಯಾಗಿತ್ತು ಮತ್ತು ಹಲವರ ಕಣ್ಣುಗಳಲ್ಲಿ ತುಂಬಿದ ಭಾವನೆಗಳು ಮತ್ತು ಅವರ ಹೃದಯ ಸ್ಥಿತಿ, ಅವರ ಭಾವನೆಗಳನ್ನು ವ್ಯಕ್ತಪಡಿಸುತ್ತಿತ್ತು.

**ಖಾದಿಯಾನ್‌ನಿಂದ ನಿರ್ಗಮನ:**

ಜುಲೈ 12 ರಂದು ಹೊರಡುವ ದಿನವಾಗಿತ್ತು. ಮುಂಜಾನೆ, ಹುಝೂರ್(ರ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಸಮಾಧಿಯ ಬಳಿ ಬಂದು ಕೊನೆಯ ಬಾರಿ ದುಆ ಮಾಡಿದರು. ಜನರು ಮಸ್ಜಿದ್ ಮುಬಾರಕ್ ಬಳಿಯಿರುವ ಮಾರುಕಟ್ಟೆಯಲ್ಲಿ ಸೇರಲು ಪ್ರಾರಂಭಿಸಿದರು ಸುಮಾರು ಎಂಟು ಗಂಟೆಗೆ ಹುಝೂರ್(ರ) ರವರು ದುಆ ಮಾಡಿಸುತ್ತಿದ್ದಾರೆ ಎಲ್ಲರು ಹುಝೂರ್(ರ) ಅವರೊಂದಿಗೆ ದುಆವಿನಲ್ಲಿ ಸೇರಿಕೊಳ್ಳಿ ಎಂದು ಘೋಷಿಸಲಾಯಿತು. ಹುಝೂರ್(ರ) ಅವರು ಬೈತುದ್ದುಆದಲ್ಲಿ ಕುಳಿತು ದೀರ್ಘ ಪ್ರಾರ್ಥನೆ ಸಲ್ಲಿಸಿದರು ಮತ್ತು ನಂತರ ಮನೆಯಿಂದ ಹೊರಬಂದರು. ಗೆಳೆಯರು ಹಸ್ತಲಾಘವ ಮಾಡಲು ಉತ್ಸುಕರಾಗಿ ಮುಂದಕ್ಕೆ ಹೋದರೂ ರಸ್ತೆಯ ತಿರುವಿನಲ್ಲಿ ಹಸ್ತಲಾಘವ ನಡೆಯುವುದೆಂದು ಆದೇಶಿಸಲಾಯಿತು. ಮಾರ್ಗಮಧ್ಯೆ ಹುಝೂರ್(ರ) ಅವರನ್ನು ವೃತ್ತದೊಳಗೆ ಕರೆದೊಯ್ದು ಜನಜಂಗುಳಿಯನ್ನು ಹಿಂಬಾಲಿಸುವಂತೆ ಸಂಘಟಕರು ವ್ಯವಸ್ಥೆ ಮಾಡಿದರೂ ಜನಸಂದಣಿ ತಾಳಲಾರದೆ ಒಬ್ಬರ ಮೇಲೊಬ್ಬರು ಮುಗಿ ಬೀಳುತ್ತಿದ್ದರೂ ಯಾವುದೇ ಹಿಂಜರಿಕೆಯಿಲ್ಲದೆ ಎದ್ದು ಮುಂದೆ ಸಾಗುತ್ತಿದ್ದರು. ಜನಸಂದಣಿಯ ವೇಗಕ್ಕೆ ರಸ್ತೆಯ ಧೂಳು ಮೋಡದಂತೆ ಮೇಲೇರಿತು. ಹುಝೂರ್(ರ) ಅವರಿಗೆ ನೋವಾಗಬಹುದೆಂದು ಭಾವಿಸಿದ ಸಂಘಟಕರು ಎಲ್ಲರನ್ನು ಹತ್ತಿರ ಬರದಂತೆ ತಡೆದರು, ಆದ್ದರಿಂದ ಹುಝೂರ್(ರ) ಅದನ್ನು ಇಷ್ಟಪಡಲಿಲ್ಲ ಮತ್ತು ಯಾರನ್ನೂ ನಿಲ್ಲಿಸಬಾರದು ಎಂದು ಆದೇಶಿಸಿದರು. ಅದರೊಂದಿಗೆ ನಾನು ಕೂಡ ಹೆಚ್ಚು ಧೂಳು ಹಾರದಂತೆ ನಿಧಾನವಾಗಿ ನಡೆಯುತ್ತೇನೆ ಎಂದು ಹೇಳಿದರು. ಹುಝೂರ್(ರ) ರಸ್ತೆಯ ತಿರುವಿನಲ್ಲಿ ತಲುಪಿದರು, ಅಲ್ಲಿ ಅನೇಕ ಜನರು, ವಿಶೇಷವಾಗಿ ಮಹಿಳೆಯರು ಈಗಾಗಲೇ ಆಗಮಿಸಿದ್ದರು ಮತ್ತು ಇಡೀ ಗುಂಪಿನೊಂದಿಗೆ ಸುದೀರ್ಘ ದುಆ ಮಾಡಲಾಯಿತು.

ಪ್ರಾರ್ಥನೆಯ (ದುಆ) ನಂತರ, ಇಡೀ ಸಮೂಹದ ಒಂದು ಫೋಟೋವನ್ನು ತೆಗೆದುಕೊಳ್ಳಲಾಯಿತು ಮತ್ತು ಹುಝೂರ್(ರ) ತಮ್ಮ ತಾಯಿ ಹಝ್ರತ್ ಉಮ್ಮುಲ್ ಮುಮಿನೀನ್(ರ) ಅವರ ಸಲಹೆಯ ಮೇರೆಗೆ ಅವರನ್ನು ಭೇಟಿಯಾಗಲು ಪುರುಷರ ಗುಂಪಿನಿಂದ ಹೊರಬಂದರು. ಹಝ್ರತ್ ಉಮ್ಮುಲ್-ಮುಮಿನೀನ್(ರ) ಹುಝೂರ್(ರ) ಅವರನ್ನು ದೀರ್ಘಕಾಲ ತಬ್ಬಿಕೊಂಡು ಮಮತೆಯ ಪ್ರೀತಿ ಮತ್ತು ಪ್ರಾರ್ಥನೆಯ ನದಿಗಳನ್ನು ಸುರಿಸಿ ಸಾವಿರಾರು ಪ್ರಾರ್ಥನೆಗಳನ್ನು ಸಲ್ಲಿಸಿದರು. ಆ ನಂತರ ಹುಝೂರ್(ರ) ಕಾರಿನ ಪಕ್ಕದಲ್ಲಿ ನಿಂತು ಸರದಿಯಲ್ಲಿ ಸದಸ್ಯರ ಹಸ್ತಲಾಘವ ಮಾಡಿದ ಬಳಿಕ ಅಲ್ಲಾಹು ಅಕ್ಬರ್ ಘೋಷಣೆಗಳ ಮಧ್ಯೆ ಹೊರಡಿದರು.

(ಅಲ್-ಫಝ್ಲ್, 15 ಜುಲೈ 1924, ಪುಟ 1-2)

ಗುಂಪು ಬಟಾಲಾಗೆ ತಲುಪಲು ತಡವಾಯಿತು. ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ಗಾಡಿ ನಿಂತಿತ್ತು, ಅಲ್ಲಿ ಹುಝೂರ್(ರ) ಅವರ ನಿರೀಕ್ಷೆಯಲ್ಲಿ ಅಪಾರವಾದ ಜನಸಂದಣಿ ಕಾದು ಕುಳಿತಿತ್ತು, ಮತ್ತು ಬಟಾಲಾ ಜಮಾಅತ್ ಮತ್ತು ಸ್ನೇಹಿತರೆಲ್ಲರೂ ತುಂಬಾ ತವಕದಲ್ಲಿದ್ದರು. ಅಷ್ಟರಲ್ಲಿ ಹುಝೂರ್(ರ) ಅವರು ಖುದ್ದಾಮರೊಂದಿಗೆ ಬಟಾಲಾ ಸ್ಟೇಷನ್‌ಗೆ ತಲುಪಿದರು. ಅಲ್ಲಾಹು ಅಕ್ಬರ್‌ನ ಘೋಷಣೆಗಳು ಕೂಗಲಾಯಿತು.

**ಬಟಾಲಾದಿಂದ ನಿರ್ಗಮನ:**

ಗಾಡಿಯು ಬಟಾಲದಿಂದ ಜಯಂತಿಪುರವನ್ನು ತಲುಪಿತು, ಅಲ್ಲಿಯು ಕೂಡ ಹುಝೂರ್(ರ) ಅವರ ಗಾಡಿಯ ಮುಂದೆ ಜನರ ಸಮೂಹವು ಬಂದು ಸೇರಿತ್ತು. ಹುಝೂರ್(ರ) ಅವರ ಆಗಮನದ ಸುದ್ದಿ ಕೇಳಿ ಲಾಹೋರ್ ಮತ್ತು ಅಮೃತಸರ ಮತ್ತು ಅದರ ಉಪನಗರಗಳಿಂದ ಜಮಾಅತ್‌ನ ಅನೇಕ ಸ್ನೇಹಿತರು ಅಮೃತಸರ ನಿಲ್ದಾಣದಲ್ಲಿ ಸೇರಿದ್ದರು. ಲಾಹೋರ್ ಮತ್ತು ಅಮೃತಸರದ ಜಮಾಅತ್‌ಗಳು ಫೋಟೋಗಳನ್ನು ತೆಗೆದುಕೊಂಡವು.

**ಬಿಯಾಸ್:**

ಗಾಡಿಯು ಬಿಯಾಸ್ ರೈಲ್ವೇ ನಿಲ್ದಾಣಕ್ಕೆ ತಲುಪಿದಾಗ, ಮಾಹಿತಿಯ ಪ್ರಕಾರ, ಹುಝೂರ್(ರ) ಅವರು ಫೋಟೋಗಾಗಿ ಹೋದರು, ಅಲ್ಲಿ ಹುಝೂರ್(ರ) ಅವರ ಮೂರು ವಿಭಿನ್ನ ಫೋಟೋಗಳನ್ನು ತೆಗೆದರು.

**ಜಲಂಧರ್ ಫಗ್ವಾರ ಫುಲೂರ್:**

ಜಲಂಧರ್ ನಗರ, ಜಲಂಧರ್ ಕಂಟೋನ್ಮೆಂಟ್, ಫಗ್ವಾರಾ ಮತ್ತು ಫ್ಲೋರ್ ನಿಲ್ದಾಣಗಳಲ್ಲಿ ಅತ್ಯಂತ ಪ್ರಾಮಾಣಿಕ ಜಮಾಅತ್ತಿನ ಸದಸ್ಯರುಗಳಿದ್ದರು. ಜಲಂಧರ್ ಮತ್ತು ಹೋಶಿಯಾರ್‌ಪುರ ಜಿಲ್ಲೆಗಳ ಅನುಯಾಯಿಗಳು ತಮ್ಮ ಪ್ರೀತಿ ಮತ್ತು ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿದರು.

**ಲುಧಿಯಾನ:**

ಲುಧಿಯಾನದಲ್ಲಿ, ನಗರ ಜಮಾಅತ್‌ಗಳ ಹಳ್ಳಿಗಳು ಮತ್ತು ಸುತ್ತಮುತ್ತಲಿನ ಜಮಾಅತ್ತಿನ ಸದಸ್ಯರು ಕೂಡ ಸೇರಿದ್ದರು. ಲುಧಿಯಾನ ಜಮಾಅತ್ ರೈಲಿನಾದ್ಯಂತ ಐಸ್ ಮತ್ತು ಹಾಲು ಬೆರಸಿದ ಶರಬತ್ತನ್ನು ವಿತರಿಸಿ ಸಂಭ್ರಮಿಸಿದರು. ಜಲಂಧರ್ ನಿಲ್ದಾಣದಲ್ಲಿ, ಜಮಾಅತ್‌ಗಳು ಸೋಡಾ ಐಸ್ ಮತ್ತು ಹೋಶಿಯಾರ್‌ಪುರ್‌ನವರು ಮಾವಿನಹಣ್ಣುಗಳೊಂದಿಗೆ ಸ್ನೇಹಿತರಿಗೆ ಸೇವೆ ಸಲ್ಲಿಸಿದವು.

**ಖನ್ನಾ:**

ಖನ್ನಾ ನಿಲ್ದಾಣದಲ್ಲಿ, ಹಝ್ರತ್ ಮುನ್ಷಿ ಅಬ್ದುಲ್ಲಾ ಸಾಹೇಬ್ ಸುನೂರಿ(ರ) ಅವರು ಸಿದ್ಧಪಡಿಸಿದ ಜಮಾಅತ್ 18 ಮೈಲುಗಳನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದ ನಂತರ ಹಾಜರಿತ್ತು ... ಮಹಿಳೆಯೊಬ್ಬರು ಮಹಾನ್ ಶೌರ್ಯವನ್ನು ತೋರಿಸಿದರು. ಗಾಡಿ ಹೊರಡಲು ಸಿಳ್ಳೆ ಹೊಡೆಯಿತು, ಗೆಳೆಯರು ರೈಲುಗಾಡಿ ಸ್ಟಾರ್ಟ್ ಆಗುತ್ತಿದೆ ಎಂದು ಆಕೆಗೆ ತಡೆದು ಕೆಳಗಿನಿಂದ ಸಲಾಮ್ ಮಾಡಿ ಎಂದು ಹೇಳಿದರೂ ಆಕೆ ಕೇಳಲಿಲ್ಲ, ಬುರ್ಖಾ ಹಾಕಿಕೊಂಡು ಗಾಡಿ ಹತ್ತಿ ಹುಝೂರ್(ರ) ಅವರ ಬಳಿ ತಲುಪಿದಳು ಅಷ್ಟರಲ್ಲಿ ಗಾಡಿ ಹೊರಡಿತು. ಆ ಮಹಿಳೆ ಕೆಳಗಿಳಿಯಲು ಯತ್ನಿಸಿದಳು ಹೀಗೆ ಆಕೆ ಚಲಿಸುತ್ತಿದ್ದ ಗಾಡಿಯಿಂದ ಜಿಗಿದಿದ್ದಾಳೆ. ತಲೆ ಒಡೆದು ದೇಹ ಪೂರ್ತಿ ರಕ್ತ ಸುರಿಯುವ ಸಾಧ್ಯತೆಯಿತ್ತು, ಆದರೆ ಒಬ್ಬ ಅಹ್ಮದಿ ಸ್ನೇಹಿತ ಆಕೆಯನ್ನು ತನ್ನ ತೋಳುಗಳಲ್ಲಿ ತಾಯಿ ಮಗುವನ್ನು ತನ್ನ ಮಡಿಲಲ್ಲಿ ತೆಗೆದುಕೊಳ್ಳುವಂತೆ ತೆಗೆದುಕೊಂಡನು.

**ರಾಜಪುರ ನಿಲ್ದಾಣ:**

ಜಮಾಅತ್ ಪಟಿಯಾಲ ರಾಜಪುರ ನಿಲ್ದಾಣದಲ್ಲಿ ಊಟದ ವ್ಯವಸ್ಥೆ ಮಾಡಿತ್ತು. ಎಲ್ಲಾ ಸ್ನೇಹಿತರಿಗೆ ಊಟವನ್ನು ಚೆನ್ನಾಗಿ ಹಂಚಲಾಯಿತು ಮತ್ತು ಸ್ನೇಹಿತರು ಅಂಬಾಲಾ ಛಾವನಿಯ ತನಕ ಊಟ ಮಾಡಿಸುತ್ತಲೇ ಹೋದರು.

**ಮುಝಫ್ಫರ್‌ನಗರ ಮತ್ತು ಮೀರತ್:**

ಮುಝಫ್ಫರ್‌ನಗರ, ಮೀರತ್ ಕಂಟೋನ್ಮೆಂಟ್ ಮತ್ತು ನಗರದ ಗೆಳೆಯ ಹುಝೂರ್(ರ) ಅವರ ಕೈಗೆ ಮುತ್ತಿಟ್ಟು ಭೇಟಿ ನೀಡಿ ಅನುಗ್ರಹವನ್ನು ಪಡೆದು ಹಿಂತಿರುಗಿದರು. ರೈಲುಗಾಡಿ ಗಾಜಿಯಾಬಾದ್‌ಗೆ ಬಂದು ದೆಹಲಿ ತಲುಪಿತು.

**ದೆಹಲಿ ಸ್ಟೇಷನ್, ಜುಲೈ 13:**

ಜಮಾಅತ್‌ನ ಸದಸ್ಯರು ಭವ್ಯವಾದ ಸ್ವಾಗತ ಧ್ವಜವನ್ನು ಸಿದ್ಧಪಡಿಸಿತ್ತು ಮತ್ತು ಸ್ವಾಗತಕ್ಕಾಗಿ ಪ್ಲ್ಯಾಟ್‌ಫಾರ್ಮ್‌ನಲ್ಲಿ ಉಪಸ್ಥಿತರಿದ್ದರು. ಛಾಯಾಚಿತ್ರಗಳಿಗೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ದೆಹಲಿ ಜಮಾಅತ್‌ವತಿಯಿಂದ ಮಧ್ಯಾಹ್ನ ಊಟದ ವ್ಯವಸ್ಥೆ ಕೂಡ ಮಾಡಲಾಗಿತ್ತು. ಹಾಲು, ಚಹಾ ಮತ್ತು ಐಸ್ ಕೂಡ ತರಲಾಗಿತ್ತು. ಬರೇಲಿ, ಶಹಜಹಾನ್‌ಪುರದ ಜಮಾಅತ್ತಿನ ಸದಸ್ಯರುಗಳು ಮತ್ತು ಖಾಯಿಮ್‌ಗಂಜ್‌ನ ಅಬ್ದುಲ್ ಗಫರ್ ಖಾನ್ ಸಾಹಿಬ್ ಕೂಡ ದೆಹಲಿ ನಿಲ್ದಾಣಕ್ಕೆ ಬಂದಿದ್ದರು. ಡಾ. ಇಕ್ಬಾಲ್ ಅಲಿ ಸಾಹಿಬ್ ಅವರು ಕೂಡ ಅಲಿಗಢದಿಂದ ಭೇಟಿ ನೀಡಿದ್ದರು.

ದೆಹಲಿಯಿಂದ ಹೊರಟ ನಂತರ, ಹಲವಾರು ನಿಲ್ದಾಣಗಳ ನಂತರ ರೈಲುಗಾಡಿ ಒಂದು ಸ್ಥಳದಲ್ಲಿ ನಿಮತುಕೊಂಡಿತು ಅಲ್ಲಿಯೂ ಕೂಡ ರಡು ಮೂರು ಸದಸ್ಯರು ಹುಝೂರ್(ರ) ಅವರನ್ನು ಭೇಟಿ ಮಾಡುವ ಉದ್ದೇಶದಿಂದ ಇದ್ದರು. ಅವರು ಬಹುಶಃ ಬಲ್ಲಬ್‌ಗಢ್‌ದಿಂದ ಆಗಮಿಸಿರಬಹುದು. ಚಲಿಸುತ್ತಿದ್ದ ರೈಲುಗಾಡಿಯಲ್ಲಿ ಸ್ನೇಹಿತರಿಗೆ ದೆಹಲಿಯಿಂದ ಬಂದ ಊಟ ನೀಡಲಾಯಿತು.

**ಮಥುರಾ:**

ಆಗ್ರಾದ ಜಮಾಅತ್ ಮಥುರಾ ನಿಲ್ದಾಣದಲ್ಲಿ ಆಗಮಿಸಿದ್ದರು. ನಮ್ಮ ಅಮೀರುಲ್ ಮುಜಾಹಿದೀನ್ ಕೂಡ ಅಲ್ಲಿಗೆ ಬಂದಿದ್ದರು. ಫರ್ರುಖಾಬಾದ್ ಮತ್ತು ಮಾಸ್ಟರ್ ಮುಹಮ್ಮದ್ ಶಫೀ ಸಾಹಿಬ್ ಅಸ್ಲಂ ಮತ್ತು ಮೌಲ್ವಿ ಗುಲಾಮ್ ಮುಹಮ್ಮದ್ ಸಾಹಿಬ್ ಕೂಡ ಮೈನ್‌ಪುರಿ ಪ್ರದೇಶದಿಂದ ಬಂದಿದ್ದರು. ಛಾಯಾಚಿತ್ರಗಳನ್ನು ತೆಗೆದರು ಮತ್ತು ಸ್ನೇಹಿತರೆಲ್ಲರೂ ಹಝ್ರತ್ ಜೊತೆಗೆ ಮಥುರಾದಿಂದ ಆಗ್ರಾ ಜಂಕ್ಷನ್ ವರೆಗೆ ಬಂದರು.

**ಭೋಪಾಲ್:**

ಆಗ್ರಾದಿಂದ ಗ್ವಾಲಿಯರ್, ಝಾನ್ಸಿ ಮತ್ತು ಬೀನಾಗೆ ಪ್ರಯಾಣಿಸಿದ ನಂತರ ಅವರು ಮಧ್ಯರಾತ್ರಿ ಭೋಪಾಲ್ ತಲುಪಿದರು, ಅಲ್ಲಿ ಹಝ್ರತ್ ಮೌಲ್ವಿ ಉಬೈದುಲ್ಲಾ ಸಾಹಿಬ್ ಬಿಸ್ಮಲ್ ಮತ್ತು ಇತರ ಇಬ್ಬರು ತುಪ್ಪದ ಟಿನ್ ನೊಂದಿಗೆ ಉಪಸ್ಥಿತರಿದ್ದರು ಸ್ನೇಹಿತರು ಭೋಪಾಲ್ ನಂತರ, ಬಾಂಬೆಯ ಕೊನೆಯ ನಿಲ್ದಾಣವಾದ ವಿಕ್ಟೋರಿಯಾ ಟರ್ಮಿನಲ್ ತನಕ ಮತ್ತೆ ಯಾವುದೇ ಜಮಾಅತ್ ಕಂಡುಬಂದಿಲ್ಲ.

**ಈದ್-ಉಲ್-ಅಝ್ಹಾದ ನಮಾಝ್, 14 ಜುಲೈ:**

ಜುಲೈ 14 ರಂದು ಈದ್ ದಿವಸ ಆಗಿದ್ದರಿಂದ ಆಗ ನಾವು ರೈಲಿನಲ್ಲಿದ್ದ ಕಾರಣದಿಂದ ಹುಝೂರ್(ರ) ಅವರು ಮನ್ಮಾಡ್ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ಈದ್ ನಮಾಝ್ ಅನ್ನು ನಿರ್ವಹಿಸಿದರು ಮತ್ತು ಸಣ್ಣ ಪ್ರವಚನ ನೀಡಿದರು. ಪ್ಲಾಟ್‌ಫಾರ್ಮ್‌ನಿಂದ ಎದ್ದು ರೈಲುಗಾಡಿ ಪ್ರವೇಶಿಸಿದ ನಂತರ ದುಆ ಮಾಡಲಾಯಿತು.

**ಆಂಗ್ಲ ಭಾಷೆಯಲ್ಲಿ ಮಾತುಕತೆ:**

13ರ ಸಂಜೆ ಎಲ್ಲ ಸ್ನೇಹಿತರು ಇಂಗ್ಲಿಷ್‌ನಲ್ಲಿ ಮಾತನಾಡಬೇಕು, ಯಾರಾದರೂ ಉರ್ದುವಿನಲ್ಲಿ ಮಾತನಾಡಿದರೆ ಒಂದು ಅನ್ನಾ ದಂಡ ಪಾವತಿಸಬೇಕು ಎಂದು ಹುಝೂರ್(ರ) ಅವರು ಆದೇಶಿಸಿದರು. ಇಂಗ್ಲಿಷ್ ನಂತರ ಅರೇಬಿಕ್ ಸಹ ಅನುಮತಿಸಲಾಗಿತ್ತು, ಆದರೆ ಇತರ ಜನರು ತೊಡಗಿಸಿಕೊಂಡಾಗ, ನಂತರ ಉರ್ದುವಿಗೂ ಅವಕಾಶ ನೀಡಲಾಯಿತು.

**ಬಾಂಬೆಯಲ್ಲಿ ಇಳಿಯುವುದು:**

ರೈಲುಗಾಡಿಯು ಸಂಜೆ 5:00 ಗಂಟೆಗೆ ಬಾಂಬೆ ನಿಲ್ದಾಣಕ್ಕೆ ಆಗಮಿಸಿತು. ಜಮಾಅತ್‌ನ ಸದಸ್ಯರು ಅಲ್ಲಿ ಉಪಸ್ಥಿತರಿದ್ದರು. ಮೋಟಾರ್‌ಗಳು ಉಪಸ್ಥಿತವಿದ್ದವು. ಫೋಟೋ ಉಪಕರಣ ಸಿದ್ಧವಾಗಿದ್ದವು. ಹಸ್ತಲಾಘವದ ನಂತರ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಸಂಜೆ 7:30 ಯ ನಂತರ ಮೆಮಿನಿ ಬಿಲ್ಡಿಂಗ್ ತಲುಪಿದರು.

ಬಾಂಬೆಯನ್ನು ತಲುಪಿದಾಗ, ಥಾಮಸ್ ಕಿಕ್ ಕಂಪನಿ ಕಡೆಯಿಂದ ನಮ್ಮ ಹಡಗು ಎಸ್.ಎಸ್ ಆಫ್ರಿಕಾ, ಬೆಳಿಗ್ಗೆ 8:30ಗೆ ಹೋರಡುವುದು ಎಂದು ನಮಗೆ ತಿಳಿಸಲಾಯಿತು ಆದ್ದರಿಂದ ನಾವು ಮುಂಜಾನೆ 6 ಗಂಟೆಗೆ ಹೊರಡಬೇಕೆಂದು ಎಂದು ತಿಳಿಸಲಾಯಿತು.

**ಬಾಂಬೆ:**

ನಾವು ರೈಲಿನಿಂದ ಇಳಿದ ತಕ್ಷಣ ನಮಗೆ ಸಿಕ್ಕಿದ ಮೊದಲ ಸುದ್ದಿ ಎಂದರೆ ಹಡಗು ಮುಂಜಾನೆ ಹೊರಡುತ್ತದೆ ಎಂದು ನಾನು ಈಗಾಗಲೇ ಮೇಲೆ ಹೇಳಿದ್ದೇನೆ. ಈ ಸುದ್ದಿಯು ನಮ್ಮೆಲ್ಲರ ಮೇಲೆ ಪ್ರಭಾವ ಬೀರಿತು ಏಕೆಂದರೆ ಬಹುತೇಕ ಸಾಮಾನುಗಳನ್ನು ಬಾಂಬೆಯಲ್ಲಿ ಖರೀದಿಸಲು ನಿರ್ಣಯಿಸಲಾಗಿತ್ತು ಆದರೆ ಈಗ ಅದು ಸಾಧ್ಯವಿರಲಿಲ್ಲ. ಬಹಳ ಪ್ರಯತ್ನ ಮಾಡಲಾಯಿತು. ಶ್ರಮವಹಿಸಲಾಯಿತು, ರಾತ್ರಿಯಿಡೀ ಎಚ್ಚರವಾಗಿ ಕಳೆದರು ಆದರೂ ಏನೂ ಮಾಡಲು ಸಾಧ್ಯವಾಗಲಿಲ್ಲ ಮತ್ತು ಬಹಳಷ್ಟು ಬೇಕಾದ ಅವಶ್ಯಕತೆಗಳು ಉಳಿದಿದ್ದವು.

**ಮುಂಬೈನಿಂದ ನಿರ್ಗಮನ ಮತ್ತು ಏಡನ್‌ಗೆ ಆಗಮನ:**

ಮರುದಿನ, 15 ಜುಲೈ 1924 ರಂದು, ಸುಮಾರು 7 ಗಂಟೆಗೆ, ಹುಝೂರ್(ರ) ತಮ್ಮ ಸಹಚರರೊಂದಿಗೆ ಮುಂಬೈ ಬಂದರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಹುಝೂ(ರ) ಅವರಿಗೆ ವಿದಾಯ ಹೇಳಲು ಜಮಾಅತ್‌ನ ಸ್ನೇಹಿತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಹುಝೂರ್(ರ) ಅವರು ಈ ಸಂದರ್ಭದಲ್ಲಿ ಸುದೀರ್ಘ ಹಾಗೂ ಕರುಣಾಜನಕ ಸಾಮೂಹಿಕ ದುಆ ಮಾಡಿಸಿದರು. ಹಡಗಿನ ನಿರ್ಗಮನದ ಸಮಯವು ಸಹ ಹಾದುಹೋಗಲು ಪ್ರಾರಂಭಿಸಿತು, ಆದರೆ ಹಡಗಿನ ಅಧಿಕಾರಿಗಳು ಸಹ ಪ್ರಾರ್ಥನೆಯನ್ನು ನಿಲ್ಲಿಸಲು ಅಥವಾ ಹಡಗನ್ನು ಕಳುಹಿಸಲು ಸಾಧ್ಯವಾಗದಂತಹ ಮನಸ್ಥಿತಿಯಲ್ಲಿದ್ದರು. ಅಂತಿಮವಾಗಿ ಹುಝೂರ್(ರ) ಅವರು ದುಆ ಮುಗಿಸಿದರು. ಹುಝೂರ್(ರ) ಅವರು ಪ್ರಾರ್ಥನೆಯೊಂದಿಗೆ ಜಮಾಅತ್ ಅನ್ನು ವಿದಾಯಕೋರಿದರು ಮತ್ತು ಅಸ್ಸಲಾಮು ಅಲೈಕುಮ್ ಮತ್ತು ಖುದಾ ಹಾಫಿಝ್‌ನ ಘೋಷಣೆಗಳು ಪ್ರತಿಧ್ವನಿಸಿತ್ತು. ಹಡಗನ್ನು ಒಂದು ಸಣ್ಣ ಉಗಿದೋಣಿಯಿಂದ ನಡೆಸುತ್ತಿತ್ತು. ಜಮಾಅತ್‌ನ ಸ್ನೇಹಿತರು ಇನ್ನೊಂದು ಬದಿಯಲ್ಲಿ ನಿಂತಿದ್ದರು ಮತ್ತು ಹುಝೂರ್(ರ) ಅವರು ತಮ್ಮ ಮನಸ್ಸಿನಲ್ಲಿ ಪ್ರಾರ್ಥಿಸುತ್ತಿದ್ದರು ಮತ್ತು ಏಕಾಏಕಿ ಭಾವನೆಗಳು ಉಕ್ಕಿ ಬಂದವು ತೇವಭರಿತ ಕಣ್ಣುಗಳೊಂದಿಗೆ ಜಮಾಅತ್‌ಗೋಸ್ಕರ ಅತ್ಯಂತ ಕಳವಳದಿಂದ ದೀರ್ಘವಾದ ಪ್ರಾರ್ಥನೆ ಸಲ್ಲಿಸಿದರು.

ಈಗ ಹಡಗು ಚಲನೆಯಲ್ಲಿತ್ತು ಮತ್ತು ಸ್ನೇಹಿತರು ವೇಗವಾಗಿ ದೃಷ್ಟಿಯಿಂದ ಕಣ್ಮರೆಯಾಗುತ್ತಿದ್ದರು. ಆದರೆ ಹುಝೂರ್(ರ) ಅವರ ಕರುಣೆ ಮತ್ತು ಪ್ರೀತಿಯ ಈ ಅದ್ಭುತ ಭಾವನೆಯು ಕಾಣಿಸಿಕೊಂಡಿತು

ಅಂದರೆ, ಹಡಗಿನ ಯಾವ ಭಾಗವು ಅವರ ಸ್ನೇಹಿತರ ಬಳಿ ಇದೆಯೋ, ಹುಝೂರ್(ರ) ಕೂಡ ಆ ಕಡೆಗೆ ಓಡುತ್ತಿದ್ದರು. ಕೆಲವೊಮ್ಮೆ ಈ ತುದಿಯಲ್ಲಿ, ಕೆಲವೊಮ್ಮೆ ಇನ್ನೊಂದು ತುದಿಯಲ್ಲಿ, ಮತ್ತು ಕೆಲವೊಮ್ಮೆ ಮಧ್ಯದಲ್ಲಿ ಮತ್ತು ಸ್ನೇಹಿತರಿಗಾಗಿ ಅವರು ಹತ್ತಿರ ಹೋಗಿ ಪ್ರಾರ್ಥನೆಯನ್ನು ಪ್ರಾರಂಭಿಸುತ್ತಿದ್ದರು. ಆ ಸಮಯದಲ್ಲಿ, ಮಳೆ ಸುರಿದು ನಿಮ್ಮ ಬಟ್ಟೆ ಒದ್ದೆಯಾಗಿತ್ತು, ಆದರೆ ನಿಮ್ಮ ಖುದ್ದಾಮರ ಮೇಲಿನ ಪ್ರಾಮಾಣಿಕ ಪ್ರೀತಿ ಮತ್ತು ವಾತ್ಸಲ್ಯದ ಕಿಡಿ ನಿಮ್ಮನ್ನು ಆವರಿಸಿತ್ತು. ಏಕೆಂದರೆ ಹುಝೂರ್(ರ) ಅವರು ಎಲ್ಲಾ ಸ್ನೇಹಿತರನ್ನು ಸಂಪೂರ್ಣವಾಗಿ ಕಣ್ಮರೆಯಾಗುವವರೆಗೂ ಬಹಳ ಉತ್ಸಾಹದಿಂದ ಹಡಗಿನ ಸುತ್ತಲೂ ತಿರುಗಾಡುವುದನ್ನು ಮುಂದುವರೆಸಿದರು.

### ವೈರ್‌ಲೆಸ್ ಸಂದೇಶ:

ಮುಂಬೈನಲ್ಲಿ, ಅಖಿಇರ್ಝ್ ಬಾಬು ಅಬ್ದುಲ್ ಘನಿ ಸಾಹಿಬ್ ಅವರನ್ನು ಮೌಲವಿ ರಹೀಮ್ ಭಕ್ಷ್ ಸಾಹಿಬ್ ಅವರು ಕೆಲ ಸ್ಥಳಗಳಲ್ಲಿ ಹಡಗಿನ ನಿರ್ಗಮನದ ಬಗ್ಗೆ ಸುದ್ದಿ ತಿಳಿಸಲು ತಂತಿ ಸಂದೇಶ ಕಳುಹಿಸಲು ಹೇಳಿದ್ದರು. ಉದಾಹರಣೆಗೆ ಲಂಡನ್, ಈಜಿಪ್ಟ್, ಖಾದಿಯಾನ್ ಇತ್ಯಾದಿ. ಈ ಮಹಾನುಭಾವರು ಈ ವಿಷಯಗಳನ್ನು ಅನುಸರಿಸಿ ನಮಗೆ ಒಂದು ತಂತಿ ನೀಡಿದರು ಅದು ಮೂರನೇ ದಿನ ನಮಗೆ ಹಡಗಿನಲ್ಲಿ ವೈರ್‌ಲೆಸ್ ಟೆಲಿಗ್ರಾಫಿ ಮೂಲಕ ಲಭಿಸಿತು. "ಎಲ್ಲಾ ಆದೇಶಗಳನ್ನು ಪಾಲಿಸಲಾಗಿದೆ" ಎಂಬುದು ತಂತಿಯಯಲ್ಲಿ ತಿಳಿಸಲಾಗಿತ್ತು. ಈ ತಂತಿಯು ನಿಸರ್ಗದ ಅದ್ಭುತಗಳ ಮೋಡಿಯೂ ಆಗಿತ್ತು. **ಇಝುಸ್ಸುಹುಫು ನುಶಿರತ್** (ಅತ್ತಕ್ವೀರ್:11) ವಿಶೇಷವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗಾಗಿ ಆಗಿತ್ತು. ಅದರ ಪರಿಪೂರ್ಣತೆಯನ್ನು ನೋಡಿ, ಹೃದಯವು ಸರ್ವಶಕ್ತನಾದ ಅಲ್ಲಾಹನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಲು ಬಯಸುತ್ತಿತ್ತು. ಅದೇ ದಿನ, ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್(ರ) ಅವರ ಆದೇಶದಂತೆ ಖಾದಿಯಾನ್‌ನ ಹಝ್ರತ್ ಅಮೀರ್ ಜಮಾಅತ್‌ರ ಸೇವೆಗೆ ಟೆಲಿಗ್ರಾಮ್ ಕಳುಹಿಸಲಾಯಿತು. ಅದರ ವಿಷಯವು ಹೀಗಿತ್ತು: "ಸಮುದ್ರವು ಡೋಲಾಯಮಾನ ಸ್ಥಿತಿಯಲ್ಲಿದೆ, ಭಾಯ್ ಜೀ ಮತ್ತು ಸಿಯಾಲ್ ಸಾಹಿಬ್ ಅವರನ್ನು ಹೊರತುಪಡಿಸಿ ಎಲ್ಲಾ ಸ್ನೇಹಿತರು ಅಸ್ವಸ್ಥರಾಗಿದ್ದಾರೆ. ಹುಝೂರ್(ರ) ಅವರ ಆರೋಗ್ಯವೂ ಚನ್ನಾಗಿದೆ." ಈ ತಂತಿ ಸಂದೇಶವು 35 ಪದಗಳನ್ನು ಒಳಗೊಂಡಿತ್ತು. 26 ರೂಪಾಯಿಗಳು ವ್ಯಚ್ಚವಾಯಿತು. ತಂತಿಯನ್ನು ಕಳುಹಿಸುವ ಮೂಲಕ ಇಲ್ಲಿಯ ಸ್ನೇಹಿತರಲ್ಲಿ ಅಲ್ಲಿಯ ಸ್ನೇಹಿತರು ಖಂಡಿತವಾಗಿಯೂ ಪ್ರಾರ್ಥಿಸುತ್ತಾರೆ ಮತ್ತು ದೇವರ ಕರುಣೆಯು ಸ್ವರ್ಗದಿಂದ ಇಳಿದು ನಮಗೆ ಸಹಾಯ ಮಾಡುತ್ತದೆ ಎಂದು ಇಲ್ಲಿನ ಸ್ನೇಹಿತರಲ್ಲಿ ಶಾಂತಿ ಮತ್ತು ತೃಪ್ತಿಯ ಭಾವನೆ ಇತ್ತು. (ಸಫರ್ ಯೂರೋಪ್, ಪುಟ-17)

### ಒಂದು ಚಿಂತನಶೀಲ ವಿಷಯ:

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಈ ಪ್ರಯಾಣದ ಸಮಯದಲ್ಲಿ ಹಗಲು ರಾತ್ರಿ ನಿಮ್ಮನ್ನು ಆವರಿಸಿದ ಮುಖ್ಯ ಚಿಂತೆ ಮತ್ತು ಆತಂಕವೆಂದರೆ ಯುರೋಪಿಯನ್ ನಾಗರಿಕತೆ ಮತ್ತು ಅದರ ಬೌದ್ಧಿಕ ಬೆಳವಣಿಗೆಯನ್ನು ಹೇಗೆ ನಿಭಾಯಿಸುವುದು. ಅವರು(ರ) ತಮ್ಮ ಸ್ನೇಹಿತರಿಗೆ ಹೇಳಿದರು.

"ಯುರೋಪಿಗೆ ಸಂಬಂಧಿಸಿದಂತೆ, ಅವರ ಧರ್ಮವನ್ನು ಹೇಗೆ ಜಯಿಸಬೇಕು ಎಂಬುದರ ಬಗ್ಗೆ ನಾನು ಚಿಂತಿಸುವುದಿಲ್ಲ, ಧರ್ಮದ ಬಗ್ಗೆ, ಕ್ರಿಶ್ಚಿಯನ್ ಧರ್ಮವು ಶೀಘ್ರದಲ್ಲೇ ಇಸ್ಲಾಂಗೆ ಬಲಿಯಾಗಲಿದೆ ಎಂದು ನನಗೆ ಖಾತ್ರಿಯಿದೆ. ನಾನು ಚಿಂತೆ ಮಾಡುತ್ತಿರುವ ವಿಷಯವೆಂದರೆ: ಅದು ಯುರೋಪಿನ ಸಂಸ್ಕೃತಿ ಮತ್ತು ಅಭಿವೃದ್ಧಿ ಮತ್ತು ಅವರ ಮಾನಸಿಕ ಪ್ರಗತಿಯನ್ನು ಹೇಗೆ ಎದುರಿಸಬೇಕು ಎಂಬುದಾಗಿದೆ. ಈ ಎರಡು ವಿಷಯಗಳ ಕುರಿತು ನಾನು ನನ್ನ ರಾತ್ರಿಗಳನ್ನು ಕಳೆಯುತ್ತಿದ್ದೇನೆ ಮತ್ತು ಗಂಟೆಗಟ್ಟಲೆ ಯೋಚಿಸುತ್ತಿರುತ್ತೇನೆ. ಅವರು ಮುಂದೆ ಹೇಳಿದರು: ಬ್ರಿಟೀಷರ ವೇಷಭೂಷ ನನಗೆ ಎಳ್ಳಷ್ಟು ಹಿಡಿಸುವುದಿಲ್ಲ ಮತ್ತು ನಮ್ಮ ಮಕ್ಕಳಲ್ಲಿ ಯಾರಾದರೂ ಪ್ಯಾಂಟ್ ಮತ್ತು ಟೋಪಿಗಳನ್ನು ಧರಿಸಿದರೆ ಅವರನ್ನು ಶಿಕ್ಷಿಸಬೇಕಾಗಿದೆ, ಏಕೆಂದರೆ ಯಾವ ಸಮುದಾಯದ ಬಳಿ ತಮ್ಮ ವೇಷಭೋಷವಿಲ್ಲವೊ ಬೇರೊಬ್ಬರ ವೇಷಭೂಷವನ್ನು ತಮ್ಮ ವೇಷಭೂಷಕ್ಕಿಂದ ಉತ್ತಮ ಎಂದು ಭಾವಿಸುವ ಸಮುದಾಯದವರು ಅವರೊಂದಿಗೆ ಹೇಗೆ ಸ್ಪರ್ಧಿಸಲು ಸಾಧ್ಯ? ಹಝ್ರತ್ ಪೈಗಂಬರ್(ಸ)ರು ಅರಬ್ಬರ ಕಣ್ಣು ತೆರೆದ ತಕ್ಷಣ ಸತ್ಯವನ್ನು ಕಂಡುಕೊಂಡರು, ಆದ್ದರಿಂದ ಅವರು(ಸ) ಹೇಳಿದರು: **ಖಾಲಫುಲ್ ಯಹೂದ ವನ್ನಸಾರಾ-** ಅದೇ ರೀತಿ **ಮನ್ ತಶಬ್ಬಹ ಬಿಖೌಮಿನ್ ಫಹುವ ಮಿನ್‌ಹುಮ್** ಮತ್ತು ವಾಸ್ತವವೂ ಅದೇ ಆಗಿದೆ ಯಾರಾದರು ಅನ್ಯ ಸಮುದಾಯದ ಉಡುಗೆ ಮತ್ತು ಸಂಸ್ಕೃತಿಯನ್ನು ಒಪ್ಪಿಕೊಳ್ಳುವವರು ಅವರಲ್ಲಿಯೇ ಪರಿಗಣಿಸಲ್ಪಡುವರು. ಏಕೆಂದರೆ ಅವರ ಹೃದಯವು ಅವರ ಶ್ರೇಷ್ಠತೆ ಮತ್ತು ವೈಭವವನ್ನು ಮನವರಿಕೆ ಮಾಡುತ್ತದೆ." (ಅಲ್-ಫಝುಲ್, ಆಗಸ್ಟ್ 23, 1924, ಪುಟ 8, 9)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲೂ ಸಾಮಾನ್ಯವಾಗಿ ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುವ ಏರ್ಪಾಡು ಮಾಡಿಕೊಂಡಿದ್ದರು. ಮತ್ತು ಅವರು(ರ) ತಮ್ಮ ಪ್ರಯಾಣದ ಸಹಚರರೊಂಇಗೆ ಜಮಾಅತ್‌ಗೋಸ್ಕರ ಸಾಕಷ್ಟು ಪ್ರಾರ್ಥಿಸಿದರು. ಅಂತಿಮವಾಗಿ, ಐದನೇ ದಿನ ಅಂದರೆ ಜುಲೈ 19 ರಿಂದ, ಚಂಡಮಾರುತದ ಸ್ಥಿತಿಯು ಬದಲಾಗಲಾರಂಭಿಸಿತು ಮತ್ತು ಆರನೇ ದಿನವಾದ ಜುಲೈ 20 ರಂದು, ಚಂಡಮಾರುತವು ಕಡಿಮೆಯಾಯಿತು.

### ಸೂಕ್ಷ್ಮವಾದ ಮಾತು:

ಏಳನೇ ದಿನ, 21 ಜುಲೈ 1924 ರಂದು, ಹುಝೂರ್(ರ) ಅವರು ರಾತ್ರಿ ಒಂದೂವರೆ ಗಂಟೆಯವರೆಗೆ ತಮ್ಮ ಸಹಚರರೊಂದಿಗೆ ಇದ್ದರು, ಅವರು ನಾಗ್ಪುರದ ಹಿಂದೂ ಯುವಕರಾದ ಶ್ರೀ ಜೋಶಿ ಪಿಎಸ್ಸಿ, ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಧ್ಯಾಯನಕ್ಕಾಗಿ ಜರ್ಮನಿಗೆ ಹೋಗುತ್ತಿದ್ದರು. ಹುಝೂರ್(ರ) ಅವರ ಸೇವೆಯಲ್ಲಿ ಬಂದರು. ಹುಝೂರ್(ರ) ಅವರು ನಿಜವಾದ ಧರ್ಮದ ಗುರುತು ಮತ್ತು ಜೀವಂತ ದೇವರನ್ನು ನಂಬುವ ಸರಿಯಾದ ಮಾರ್ಗದ ಬಗ್ಗೆ ಬಹಳ ಸೂಕ್ಷ್ಮವಾದ ಭಾಷಣವನ್ನು ನೀಡಿದರು. ಇದರಿಂದ ಶ್ರೀ ಜೋಶಿಯವರು ತುಂಬಾ ಪ್ರಭಾವಿತರಾಗಿ ಇಂದು ನಾನು ಹೊಸ ಜ್ಞಾನವನ್ನು ಪಡೆದುಕೊಂಡಿದ್ದೇನೆ ಎಂದು ಹೇಳಿದರು.

### ಒಂದು ಚುಟುಕು:

ಒಂದು ದಿನ ಚೌಧರಿ ಮಹಮ್ಮದ್ ಷರೀಫ್ ಸಾಹಿಬ್(ರ) ಅವರು ನಿಂಬೆ ರಸವನ್ನು ಕೇಳಿದರು. ಹಡಗಿನ ಸೇವಕನು ಅದನ್ನು ತಂದನು. ಸಾಹಿಬ್‌ಝಾದಾ ಹಝ್ರತ್ ಮಿಯಾಂ ಷರೀಫ್ ಅಹ್ಮದ್ ಸಾಹೇಬ್(ರ) ಕುಳಿತಿದ್ದರು ಅವರ ಮುಂದೆ ಪ್ರಸ್ತುತಪಡಿಸಲಾಯಿತು. ಅವರು(ರ) ಹೇಳಿದರು ನಾನು ಇದನ್ನು ತರಸಲಿಲ್ಲ. ಚೌಧರಿ ಮುಹಮ್ಮದ್ ಷರೀಫ್ ಸಾಹಿಬ್(ರ) ತರಸಿರಬಹುದು. ಇದನ್ನು ಕೇಳಿದ ಹಡಗಿನ ಸೇವಕನು ಹೇಳಿದನು: "ನಾನೇನು ಮಾಡಲಿ? ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಗಡ್ಡವಿದೆ, ನಿಮ್ಮನ್ನು ಗುರುತಿಸುವುದಲ್ಲಿ ಕಷ್ಟವಾಗುತ್ತದೆ, ಆದ್ದರಿಂದ ಗೊಂದಲು ಸೃಷ್ಟಿಯಾಗುತ್ತಿದೆ." ಹಝ್ರತ್ ಮಿಯಾಂ ಸಾಹಿಬ್(ರ) ಹೇಳಿದರು: ನಿಮ್ಮಲ್ಲಿ ಗುರುತಿಸುವುದಕ್ಕೆ ನಮಗೆ ನಿಮ್ಮಲ್ಲಿ ಗಡ್ಡ ಇಲ್ಲದಿರುವುದೇ ಸಮಸ್ಯೆಯಾಗಿದೆ. (ಸಫರ್ ಯೂರೋಪ್, ಪುಟ-25)

ಎಂಟನೇ ದಿನ, ಜುಲೈ 22, ಹಡಗು ಏಡನ್ ಬಳಿ ಬಂದಾಗ, ಹುಝೂರ್(ರ) ಅವರು ಮಧ್ಯರಾತ್ರಿಯಲ್ಲಿ ತಮ್ಮ ಲೇಖನಿಯಿಂದ ಜಮಾಅತ್‌ಗೆ ವಿವರವಾದ ಪತ್ರವನ್ನು ಬರೆದರು. ವಿವರವಾದ ಪತ್ರದ ಪುಟವನ್ನು ನೋಡಿ.

ಹಡಗು 23 ಜುಲೈ 1924 ರಂದು ಬೆಳಿಗ್ಗೆ ಒಂಬತ್ತು ಗಂಟೆಗೆ ಸುರಕ್ಷಿತವಾಗಿ ಏಡೆನ್ ತಲುಪಿತು ಮತ್ತು ಹುಝೂರ್(ರ) ಅವರು ತಮ್ಮ ಯೋಗಕ್ಷೇಮವನ್ನು ಟೆಲಿಗ್ರಾಫ್ ಮೂಲಕ ಕಳುಹಿಸಿದರು.

### ಏಡೆನ್‌ನಿಂದ ಸಈದ್ ಪೋರ್ಟ್ ತನಕ:

ಈಗ ಹಡಗು ಏಡೆನ್‌ನಿಂದ ಪೋರ್ಟ್ ಸಈದ್‌ಗೆ ಹೊರಟಿತು ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಸಮಯವನ್ನು ಈ ಪ್ರಮುಖ ಪ್ರಯಾಣಕ್ಕಾಗಿ ಪ್ರಾರ್ಥನೆ ಮತ್ತು ಪ್ರಾಯೋಗಿಕ ಕಾರ್ಯಕ್ರಮದ ಪರಿಗಣನೆಯಲ್ಲಿ ಮೊದಲಿಗಿಂತ ಹೆಚ್ಚು

ಖರ್ಚು ಮಾಡಲು ಪ್ರಾರಂಭಿಸಿತು. ಆದ್ದರಿಂದ ಜುಲೈ 24, 1924 ರಂದು, ಅವರು ಸಿರಿಯಾ ಮತ್ತು ಈಜಿಪ್ಟ್‌ನಲ್ಲಿ ಉಪದೇಶ ಮಾಡುವ ಬಗ್ಗೆ ಹಲವಾರು ಗಂಟೆಗಳ ಕಾಲ ತಮ್ಮ ಸ್ನೇಹಿತರನ್ನು ಸಂಪರ್ಕಿಸಿ ಮತ್ತು ಒಂದು ಯೋಜನೆಯನ್ನು ಸೂಚಿಸಿದರು ಮತ್ತು ಪ್ರಯಾಣದ ಮಹತ್ವ, ಉದ್ದೇಶದ ಹಿರಿಮೆಯನ್ನು ಗಮನದಲ್ಲಿಟ್ಟುಕೊಂಡು ಸಾರ್ವಕಾಲಿಕ ತಯಾರಿ ನಡೆಸುವಂತೆ ತಮ್ಮ ಸ್ನೇಹಿತರನ್ನು ಒತ್ತಾಯಿಸಿದರು. ಮತ್ತು ಅದಕ್ಕಾಗಿ ನಾವು ಎಲ್ಲಾ ರೀತಿಯ ಅನುಗ್ರಹಗಳನ್ನು ಪಡೆಯುವಂತೆ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು. ಒಟ್ಟಿನಲ್ಲಿ, ನೀವು ಕುಳಿತಾಗ ನಿಂತಾಗ ಹುಝೂರ್(ರ) ಅವರ ಮೂಲ ಉದ್ದೇಶ ನಮ್ಮ ಯಾವ ಸಮಯವೂ ವ್ಯರ್ಥವಾಗಬಾರದು ಎಂದಾಗಿತ್ತು. ಅದೇ ದಿನಾಂಕ ಜುಲೈ 24 ರಂದು, ಹುಝೂರ್(ರ) ಅವರು ಇಸ್ಲಾಮಿಕ್ ಜಗತ್ತಿನಲ್ಲಿ ಸಾಮಾನ್ಯ ಏಕತೆಯನ್ನು ಸೃಷ್ಟಿಸಲು ಪರಿಣಾಮಕಾರಿ ಚಳುವಳಿಯ ಸ್ಥಾಪನೆಯ ಬಗ್ಗೆ ಮಾತನಾಡುವುದನ್ನು ಮುಂದುವರೆಸಿದರು. ಜುಲೈ 25 ರಂದು, 11 ಮತ್ತು 12 ಗಂಟೆಯ ನಡುವೆ, ಹಡಗು ಜಿದ್ದಾ ಮತ್ತು ಮಕ್ಕಾ ಷರೀಫ್‌ನ ಮುಂದೆ ಹಾದುಹೋಗಲು ಹೊರಟಿತ್ತು, ಆದ್ದರಿಂದ ಹುಝೂರ್(ರ) ಅವರು ವಿಶೇಷವಾಗಿ ಪ್ರಾರ್ಥಿಸಲು ನಿರ್ಧರಿಸಿದರು, ಆದ್ದರಿಂದ ಹುಝೂರ್(ರ) ಅವರು ಎರಡು ರಕಅತ್ ನಮಾಝ್ ಅನ್ನು ಬಾಜಮಾಅತ್ ನಿರ್ವಹಿಸಿದರು. ಇದರಲ್ಲಿ ಬಹಳ ಕರುಣಾಜನಕ ಪ್ರಾರ್ಥನೆಗಳನ್ನು ಮಾಡಲಾಯಿತು. ಜುಲೈ 26ರಂದು ಹುಝೂರ್(ರ) ಇಡೀ ದಿನ ಪ್ರಬಂಧ ಬರೆಯುವುದರಲ್ಲಿ ನಿರತರಾಗಿದ್ದರು.

**ಸಈದ್ ಪೋರ್ಟ್‌ನಿಂದ ಖಾಹಿರಹ್, ಬೈತುಲ್ ಮುಖದ್ದಸ್ ಮತ್ತು ರೋಮ್:**

ಹುಝೂರ್(ರ) ತಮ್ಮ ಸಹಚರರೊಂದಿಗೆ ಅದೇ ದಿನ ಸಈದ್ ಪೋರ್ಟ್‌ನಿಂದ ಎಕ್ಸ್‌ಪ್ರೆಸ್ ವಾಹನದಲ್ಲಿ ಖಾಹಿರಾಗೆ ಹೋಗಿ ಶೇಖ್ ಮಹಮೂದ್ ಅಹ್ಮದ್ ಸಾಹಿಬ್ ಇರ್ಫಾನಿ ಅವರ ಮನೆಯಲ್ಲಿ ತಂಗಿದರು. ಖಾಹಿರಾದಲ್ಲಿ ಹುಝೂರ್(ರ) ಅವರ ವಾಸ್ತವ್ಯವು ಕೇವಲ ಎರಡು ದಿನವಾಗಿತ್ತು. ಆದರೆ ನಿಮ್ಮ ಅನುಗ್ರಹದಿಂದ ಮತ್ತು ಗಮನದಿಂದ ಎರಡು ದಿನಗಳಲ್ಲಿ ಖಾಹಿರಾದಲ್ಲಿ ಜಮಾಅತ್ತಿಗೆ ಹೊಸ ಅಲೆಯೊಂದು ಹುಟ್ಟಿಕೊಂಡಿತು.

ಹುಝೂರ್(ರ) ಹೇಳುತ್ತಾರೆ: "ಎರಡು ದಿನಗಳ ಕಾಲ ಉಳಿದುಕೊಂಡ ನಂತರ, ನಾವು ಡಮಾಸ್ಕಸ್‌ಗೆ ಹೊರಟೆವು, ಆದರೆ ಮಾರ್ಗದಲ್ಲು ಬೈತುಲ್ ಮುಖದ್ದಸ್ ಇದೆ. ಆದ್ದರಿಂದ ಪ್ರವಾದಿಗಳ ಸ್ಥಳಗಳನ್ನು ನೋಡದೇ ಹೋಗುವುದು ಸರಿಯೆನಿಸದೇ ಎರಡು ದಿನ ಅಲ್ಲಿಯೇ ತಂಗಿದ್ದರು..... ಇಲ್ಲಿ ಕಾಣುವ ಯಹೂದಿ ಸಮುದಾಯದ ದಯನೀಯ ಸ್ಥಿತಿ ಬೇರೆಲ್ಲೂ ಕಾಣಸಿಗದು. ಜೆರುಸಲೆಮ್‌ನ ಅತಿದೊಡ್ಡ ದೇವಾಲಯವನ್ನು ಮೊದಲು ಕ್ರಿಶ್ಚಿಯನ್ನರು ಯಹೂದಿಗಳಿಂದ ಕಸಿದುಕೊಂಡರು, ನಂತರ ಅದನ್ನು ಕ್ರಿಶ್ಚಿಯನ್ನರಿಂದ ಕಸಿದುಕೊಂಡು ಮಸೀದಿಯನ್ನಾಗಿ ಮಾಡಿದ ಮುಸ್ಲಿಮರು ಅದರ ಗೋಡೆಯ ಪಕ್ಕದಲ್ಲಿ ನಿಂತು ಎರಡು ಸಾವಿರ ವರ್ಷಗಳಿಂದ ಒಂದು ವಾರದಲ್ಲಿ ಎರಡು ದಿವಸ ಯಹೂದಿಗಳು ಅಳುತ್ತಿದ್ದಾರೆ. ನಾವು ಈ ಸ್ಥಳವನ್ನು ನೋಡಲು ಹೋದ ದಿನ ಅಕಸ್ಮಿಕವಾಗಿ ಅವರ ಅಳುವ ದಿನವಾಗಿತ್ತು. ಪುರುಷರು ಮತ್ತು ಮಹಿಳೆಯರು, ವೃದ್ಧರು ಮತ್ತು ಮಕ್ಕಳು ಗೋಡೆಯ ಹಿಂದೆ ನಿಂತು ಬೈಬಲ್‌ನ ಪ್ರಾರ್ಥನೆಗಳನ್ನು ಓದುವುದನ್ನು ನೋಡುವುದು ತುಂಬಾ ಖಿನ್ನತೆಯ ದೃಶ್ಯವಾಗಿತ್ತು.... ಅಬುಲ್ ಅಂಬಿಯಾ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್, ಹಝ್ರತ್ ಇಸ್‌ಹಾಖ್ ಅಲೈಹಿಸ್ಸಲಾಮ್, ಹಝ್ರತ್ ಯಾಖೂಬ್ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಯೂಸುಫ್ ಅಲೈಹಿಸ್ಸಲಾಮ್ ಅವರ ಸಮಾಧಿಗಳು ಮತ್ತು ಹಝ್ರತ್ ಉಮರ್(ರ) ನಮಾಝ್ ನಿರ್ವಹಿಸಿದ ಸ್ಥಳ ಮತ್ತು ನಂತರ ಅದನ್ನು ಮಸೀದಿಯನ್ನಾಗಿ ಪರಿವರ್ತಿಸಲಾಯಿತು ಮತ್ತು ಹಝ್ರತ್ ಈಸಾ ಮಸೀಹರ ಜನನದ ಸ್ಥಳ. ಹುಝೂರ್(ರ) ಹೇಳುತ್ತಾರೆ: ನಾನು ಅಲ್ಲಿ ಹಿರಿಯ ಮುಸ್ಲಿಮರನ್ನು ಆಗಾಗ್ಗೆ ಭೇಟಿಯಾಗಿದ್ದೇನೆ. ಅವರು ಯಹೂದಿಗಳನ್ನು ಹೊರಹಾಕುವುದರಲ್ಲಿ ಯಶಸ್ವಿಯಾಗುತ್ತಾರೆ ಎಂದು ಯೋಚಿಸುತ್ತಾರೆ ಮತ್ತು ಅದರಲ್ಲಿ ಅವರು ತೃಪ್ತರಾಗಿದ್ದಾರೆ. ಆದರೆ ನನ್ನ ಪ್ರಕಾರ ಈ ಅಭಿಪ್ರಾಯ ತಪ್ಪು. ಯಹೂದಿ ಸಮುದಾಯವು ತಮ್ಮ ತಾಯಿನಾಡನ್ನು ಆಕ್ರಮಿಸಿಕೊಳ್ಳಲು ದೃಢಸಂಕಲ್ಪ ಹೊಂದಿದ್ದಾರೆ. ..... ಪವಿತ್ರ ಖುರ್‌ಆನ್‌ನ ಭವಿಷ್ಯವಾಣಿಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಇಲ್‌ಹಾಮ್‌ಗಳಿಂದ ತಿಳಿದು ಬರುವುದೇನೆಂದರೆ: ಯಹೂದಿಗಳು ಖಂಡಿತವಾಗಿಯೂ ಈ ದೇಶದಲ್ಲಿ ನೆಲೆಸುವಲ್ಲಿ ಯಶಸ್ವಿಯಾಗುತ್ತಾರೆ. ಹಾಗಾಗಿ ನನ್ನ ದೃಷ್ಟಿಯಲ್ಲಿ, ಮುಸ್ಲಿಂ ನಾಯಕರ ಈ ತೃಪ್ತಿ ಅಂತಿಮವಾಗಿ ಅವರ ವಿನಾಶಕ್ಕೆ ಕಾರಣವಾಗುತ್ತದೆ..... ಪ್ಯಾಲೆಸ್ಟೈನ್ ಗವರ್ನರ್ ಅನ್ನು ಹೈ ಕಮಿಷನರ್ ಎಂದು ಕರೆಯಲಾಗುತ್ತದೆ. ಮೂಲ ಹೈಕಮಿಷನರ್ ಈಗ ಹೊರದೇಶಕ್ಕೆ ಹೋಗಿದ್ದಾರೆ ಮತ್ತು ಸರ್ ಗಿಲ್ಬರ್ಟ್ ಕ್ಲೇಟನ್ ಅವರ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾನು ಅವರನ್ನು ಒಂದು ಗಂಟೆ ಭೇಟಿಯಾಗಿ ದೇಶದ ವ್ಯವಹಾರಗಳ ಬಗ್ಗೆ ಮಾತನಾಡಿದೆ ... ಸಾಮಾನ್ಯವಾಗಿ ಮುಸ್ಲಿಮರು ಶೈಕ್ಷಣಿಕ ವಿಷಯಗಳಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ ಎಂದು ದೂರಿದರು. ನಾನು ಅವರೊಂದಿಗೆ ಈ ವಿಷಯವನ್ನು ಚರ್ಚಿಸಿದೆ ಮತ್ತು ಅವರು ಮುಸ್ಲಿಮರ ದೂರು ಸ್ವಲ್ಪಮಟ್ಟಿಗೆ ಮಾನ್ಯವಾಗಿದೆ ಎಂದು ಒಪ್ಪಿಕೊಂಡರು ಮತ್ತು ಅವರು ಒಂದು ದಿನ ಮುಂಚಿತವಾಗಿ ಬ್ರಿಟಿಷ್ ಸಚಿವಾಲಯದ ಪರಿಗಣನೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ ಎಂದು ಹೇಳಿದರು ... ಸರ್ ಕ್ಲೇಟನ್ ಸಾಹಿಬ್ ಅವರಿಗೆ ನಮ್ಮ ಮೊದಲ ಭೇಟಿಯಲ್ಲಿ ನಮ್ಮ ಜಮಾಅತ್ತಿನಲ್ಲಿ ಬಹಳ ಆಸಕ್ತಿವುಂಟಾಯಿತು ಮತ್ತು ನಾವು ಮರುದಿನ ಹೊರಡಬೇಕಿತ್ತು. ಆದರೆ ಒಂದೂವರೆ ಗಂಟೆಗೆ ಅವರೊಂದಿಗೆ ಊಟ ಮಾಡೋಣ ಎಂದು ಒತ್ತಾಯಿಸಿದರು. ಹೀಗಾಗಿ ಎರಡನೇ ದಿನವೂ ಒಂದೂವರೆ ಗಂಟೆಗಳ ಕಾಲ ಅವರೊಂದಿಗೆ ಮಾತುಕತೆ ನಡೆಸಿ ಪ್ಯಾಲೆಸ್ತೀನ್ ರಾಜ್ಯದ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಳ್ಳಲಾಯಿತು.

(ಅಲ್‌ಫಝಲ್, 13 ಸೆಪ್ಟೆಂಬರ್ 1924, ಪುಟ-3 ರಿಂದ 6)

ಹುಝೂರ್(ರ) ಅವರು ಬೈತುಲ್ ಮುಖದ್ದಸ್‌ನಿಂದ ಡಮಾಸ್ಕಸ್‌ಗೆ ಬಂದರು, ಆರಂಭದಲ್ಲಿ ಜನರು ಆಸಕ್ತಿ ತೋರಿಸಲಿಲ್ಲ ಆದರೆ ಪ್ರಾರ್ಥನೆಯ ನಂತರ ಜನರ ಗುಂಪು ಅವರನ್ನು ಭೇಟಿ ಮಾಡಲು ಬಂದಿತು. ಇಲ್ಲಿನ ವಾಸ್ತವ್ಯದ ಬಗ್ಗೆ ಹುಝೂರ್(ರ) ಅವರು ಸ್ವತಃ ಹೇಳುತ್ತಾರೆ:

"ಡಮಾಸ್ಕಸ್‌ನಲ್ಲಿ ಯಶಸ್ಸು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನದಾಗಿತ್ತು... ಪತ್ರಿಕೆಗಳು ಹೊಗಳಿಕೆಯ ದೀರ್ಘ ಲೇಖನಗಳನ್ನು ಪ್ರಕಟಿಸಿದವು. ಡಮಾಸ್ಕಸ್‌ನ ವಿದ್ಯಾವಂತ ವರ್ಗವು ತೀವ್ರ ಆಸಕ್ತಿಯನ್ನು ತೆಗೆದುಕೊಂಡಿತು. ನಮ್ಮ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದ ಸುದ್ದಿಗಳು ಮತ್ತು ಲೇಖನಗಳನ್ನು ಪ್ರಕಟಿಸಿದ ಎಲ್ಲಾ ಪತ್ರಿಕೆಗಳು ತಕ್ಷಣವೇ ಮಾರಾಟವಾಗುತ್ತಿದ್ದವು." (ಅಲ್‌ಫಝಲ್, 28 ಆಗಸ್ಟ್ 1924, ಪುಟ-2)

ಆಗಸ್ಟ್ 10, 1924 ರಂದು, ಹುಝೂರ್(ರ) ಅವರು ಡಮಾಸ್ಕಸ್ ಅನ್ನು ತೊರೆದು ಬೈರುತ್ ಮೂಲಕ ಹೈಫಾವನ್ನು ತಲುಪಿದರು. ಅಲ್ಲಿಂದ ಬಹಾಯಿಗಳ ಕೇಂದ್ರವನ್ನು ನೋಡಲು ಅವರು ಅಕ್ಕ ಬಳಿಗೆ ಹೋದರು, ಆದರೆ ಬಹಾಯಿಗಳು ಮೂರು ಅಥವಾ ನಾಲ್ಕು ಮೈಲುಗಳಷ್ಟು ದೂರದಲ್ಲಿರುವ ಮಿನ್ನಿಯಾ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಅವರು ಎರಡು ಗಂಟೆಗಳ ನಂತರ ಹೈಫಾಗೆ ಹಿಂದಿರುಗಿದರು. 13 ಆಗಸ್ಟ್‌ರಂದು ಹುಝೂರ್ ಪೋರ್ಟ್ ಸಈದ್‌ನಿಂದ ಬ್ರಂಡ್‌ಝಿಗೆ ಪಲ್ವಾ ಎಂಬ ಹೆಸರಿನ ಹಡಗಿನಲ್ಲಿ ತೆರಳಿದರು. ಆಗಸ್ಟ್ 16, 1924 ರಂದು ಬೆಳಿಗ್ಗೆ ಒಂಬತ್ತೂವರೆ ಗಂಟೆಗೆ ನಿಮ್ಮ ಹಡಗು ಇಟ್ಲಿಯ ಬಂದರಿನಿಂದ ಬ್ರಾಂಡ್‌ಝೀಗೆ ತಲುಪಿತು. ಹುಝೂರ್(ರ) ಸಹಚರರೊಂದಿಗೆ ಸಂಜೆ 6:30 ಕ್ಕೆ ಬ್ರಿಂಡಿಸಿಯಿಂದ ಕಾರು ಹತ್ತಿದರು ಮತ್ತು ಆಗಸ್ಟ್ 17, 1924 ರಂದು 9:30 ಕ್ಕೆ ರೋಮ್ ಅನ್ನು ಪ್ರವೇಶಿಸಿದರು, ಇದು ರೋಮ್‌ನಲ್ಲಿ ಕ್ರೈಸ್ತ ಧರ್ಮದ ಪೋಪರ ವಾಸ್ತವ್ಯದ ಕೇಂದ್ರವಾಗಿದೆ. ರೋಮ್‌ನಲ್ಲಿ ಹುಝೂರ್(ರ) ಅವರು 4 ದಿನಗಳ ಕಾಲ ತಂಗಿದ್ದರು. ಈ ಅವಧಿಯಲ್ಲಿ ಹುಝೂರ್(ರ) ಅವರು ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದರು. ಪತ್ರಿಕೆಯ ವರದಿಗಾರರು ಮತ್ತು ಛಾಯಾಗ್ರಾಹಕರು ನಿಮ್ಮನ್ನು ಸಂದರ್ಶಿಸಿದರು. ಹುಝೂರ್(ರ) ಇಟಾಲಿಯನ್ ಪ್ರಧಾನಿ ಮುಸೋಲಿನಿಯನ್ನು ಭೇಟಿಯಾದರು ಮತ್ತು ಅಹ್ಮದೀಯ ಜಮಾಅತ್ತಿನ

ಧ್ಯೇಯೋದ್ದೇಶಗಳನ್ನು ತಿಳಿಸಿದರು. ಮುಸೊಲಿನಿ ಬಹಳ ಘನತೆ ಗೌರವದಿಂದ ವರ್ತಿಸಿದರು.

**ಇಟಲಿಯಲ್ಲಿ, ಪೋಪ್ ಅವರಿಗೆ ಇಸ್ಲಾಮ್ ಧರ್ಮದ ಸಂದೇಶ:**

ಹುಝೂರ್(ರ) ಅವರು ಪೋಪ್ ಅವರನ್ನು ಭೇಟಿ ಮಾಡಲು ಮತ್ತು ಅವರಿಗೆ ಇಸ್ಲಾಂ ಧರ್ಮವನ್ನು ಬೋಧಿಸಲು ಉದ್ದೇಶಿಸಿದ್ದರು. ಆದರೆ ಪೋಪ್ ನಿಮ್ಮ ಆಗಮಿಸಿದ ಸಂದರ್ಭದಲ್ಲಿ ಭೇಟಿಗಳ ಸರಣಿಯನ್ನು ನಿಲ್ಲಿಸಿದರು. ಆದಾಗ್ಯೂ, ಹಝ್ರತ್ ಖಲೀಫತುಲ್-ಮಸೀಹ್ ಸಾನಿ(ರ) ಅವರಿಗೆ ತಿಳಿಸಲು ಬಯಸಿದ ಸಂದೇಶವನ್ನು ದೇವರು ಮತ್ತೊಂದು ರೀತಿಯಲ್ಲಿ ತಿಳಿಸಿದನು. ಬೇರೆ ರೀತಿಯಲ್ಲಿ ಹೇಳುವುದಾದರೆ, ರೋಮ್‌ನ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ಪತ್ರಿಕೆ "ಲ್ಯಾಟ್ರಿಬುನಾ" ಹುಝೂರ್(ರ) ಅವರ ವಿವರವಾದ ಸಂದರ್ಶನವನ್ನು ಪ್ರಕಟಿಸಿತು. ಹುಝೂರ್(ರ) ಅವರು ಪೋಪ್ ಅವರನ್ನು ಭೇಟಿಯಾದರೆ ಏನು ಹೇಳುತ್ತೀರಿ ಎಂದು ಕೇಳಲಾಯಿತು. ಅದಕ್ಕೆ ಹುಝೂರ್(ರ) ಉತ್ತರಿಸಿದರು:

"ನಾನು ಪೋಪ್ ಅವರನ್ನು ಭೇಟಿಯಾಗುತ್ತಿದ್ದರೆ ನಾನು ನನ್ನ ಬಳಿ ಇರುವ ಉತ್ತಮವಾದ ಉಡುಗೊರೆ ಅವರಿಗೆ ಅರ್ಪಿಸುತ್ತಿದ್ದೆ ಅದೇನೆಂದರೆ ಅವರಿಗೆ ನಾನು ಇಸ್ಲಾಮ್ ಕಡೆಗೆ ಆಹ್ವಾನವನ್ನು ನೀಡುತ್ತಿದ್ದೆ ಮತ್ತು ಜನರನ್ನು ದೇವರ ಕಡೆಗೆ ಕರೆದೊಯ್ಯುವ ಪ್ರಕಾಶದ ಕಡೆಗೆ ಅವರಿಗೆ ಕರೆಯುತ್ತಿದ್ದೆ ಮತ್ತು ಅದು ಪದಗಳಲ್ಲಿ ಅಲ್ಲ ಬದಲಿಗೆ ಅಲ್ಲಾಹನ ಸಾಮೀಪ್ಯದ ಕುರುಹುಗಳು ಅದರಲ್ಲಿ ಕಂಡುಬರುತ್ತವೆ ..... ಕ್ರಿಶ್ಚಿಯನ್ನರಲ್ಲಿ ಮಹಾನ್ ಪುರುಷರು ಕಂಡುಬರುತ್ತಾರೆ, ಅವರು ಬಹಳ ಸದ್ಗುಣಶೀಲರು ಮತ್ತು ಧರ್ಮನಿಷ್ಠರು ಎಂದು ಕರೆಯುತ್ತಾರೆ. ಆದರೆ ಅವರು ತಮ್ಮ ಪ್ರಾಮಾಣಿಕತೆಯ ಯಾವುದೇ ಲಕ್ಷಣವನ್ನು ತೋರಿಸಲಾರರು. ಇದು ದೇವರ ಸಮೀಪಕ್ಕೆ ಹೋಗುವ ಮಾರ್ಗವಲ್ಲ ಎಂದು ತೋರಿಸುತ್ತದೆ. ಮತ್ತು ಈ ಶಕ್ತಿ ಈಗ ಇಸ್ಲಾಂನಲ್ಲಿದೆ ಎಂದು ಜಗತ್ತಿಗೆ ಸಾಬೀತುಪಡಿಸಲು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು (ವಾಗ್ದತ್ತ ಮೆಸ್ಸೀಹರನ್ನು) ಜಗತ್ತಿಗೆ ಕಳುಹಿಸಿದ್ದಾನೆ ಎಂಬುದು ನಿಜಸಂಗತಿಯಾಗಿದೆ ...... ಹಾಗಾಗಿ ನಾನು ಈ ಇಸ್ಲಾಮಿನ ಶುಭ ಸುದ್ದಿಯನ್ನು ಪೋಪ್‌ಗೆ ನೀಡುತ್ತೇನೆ ಮತ್ತು ನಮಗೆ ದೇವರ ದಾಸರಿಗೆ ಲಭಿಸಿರುವಂತಹ ಕುರುಹುಗಳು ನಮಗೆ ನೀಡಲಾಗಿದೆ ಎಂದು ಹೇಳುತ್ತೇನೆ. (ಅಲ್-ಫಝ್ಲ್, ಸೆಪ್ಟೆಂಬರ್ 23, 1924, ಪುಟ 3-4)

ರೋಮ್‌ನಲ್ಲಿ, ಹುಝೂರ್(ರ) ಅವರು (ಅಸ್‌ಹಾಬೆ ಕಹಫ್) ಕಹ್ಫ್‌ನ ಸಹಚರರ ಗುಹೆಗಳನ್ನು ನೋಡಿದರು, ಅದರ ವಿವರಗಳನ್ನು ಹುಝೂರ್(ರ) ಅವರು ಸುರಾ ಕಹ್ಫ್‌ನ ವ್ಯಾಖ್ಯಾನದಲ್ಲಿ ವಿವರಿಸಿದ್ದಾರೆ, ಹುಝೂರ್(ರ) ಹೇಳುತ್ತಾರೆ: ಈ ನೆಲಮಾಳಿಗೆಗಳನ್ನು ಮೂರು ಮಹಡಿಗಳಲ್ಲಿ ನಿರ್ಮಿಸಲಾಗಿದೆ. ಮತ್ತು ನಾನು 1924 ರಲ್ಲಿ ಇಂಗ್ಲೆಂಡಿಗೆ ಹೋಗುವಾಗ ರೋಮ್ನಲ್ಲಿ ನಾನು ಸ್ವತಃ ನನ್ನ ಕಣ್ಣುಗಳಿಂದ ನೋಡಿದ್ದೇನೆ. (ತಫ್ಸೀರ್ ಕಬೀರ್, ಸಂಪುಟ-6, ಪುಟ-485, ಆವೃತ್ತಿ 2023)

**ಲಂಡನ್‌ಗೆ ಆಗಮನ:**

ಅವರು ಆಗಸ್ಟ್ 20, 1924 ರ ಸಂಜೆ ರೋಮ್‌ನಿಂದ ಹೊರಟು ಮರುದಿನ (ಆಗಸ್ಟ್ 21) ಸುಮಾರು 9 ಗಂಟೆಗೆ ಫ್ರಾನ್ಸ್ ಪ್ಯಾರಿಸ್ಗೆ ತಲುಪಿದರು. ಅವರು ಹಡಗಿನ ಮೂಲಕ ಡೋವರ್‌ಗೆ ಬಂದರು ಮತ್ತು ಲಂಡನ್‌ನ ಪ್ರಸಿದ್ಧ ವಿಕ್ಟೋರಿಯಾ ನಿಲ್ದಾಣಕ್ಕೆ ಆಗಸ್ಟ್ 22, 1924 ರಂದು ಡೋವರ್‌ನಿಂದ ಕಾರಿನಲ್ಲಿ ಸುಮಾರು 6 ಗಂಟೆಗೆ ಬಂದರು. ಸ್ವಾಗತಕ್ಕೆ ಇಸ್ಲಾಂ ಧರ್ಮ ಪ್ರಚಾರಕರು ಮತ್ತು ಇತರ ಸಹಚರರು ಉಪಸ್ಥಿತರಿದ್ದರು.

ಹುಝೂರ್(ರ) ಅವರು ಪ್ಲಾಟ್‌ಫಾರ್ಮ್ ಮೇಲೆ ಕಾಲಿಟ್ಟ ತಕ್ಷಣ ತಮ್ಮ ಗುಂಪಿನ ಜೊತೆಗೆ ಪ್ರಾರ್ಥಿಸಿದರು. ಲಂಡನ್ ಪತ್ರಿಕೆಗಳಲ್ಲಿ ಈ ದೃಶ್ಯದ ಛಾಯಾಚಿತ್ರವೂ ಪ್ರಕಟವಾಯಿತು. ನಿಲ್ದಾಣದಿಂದ ಲಿಡ್ಗೇಟ್ ತಲುಪಿದ ಹುಝೂರ್(ರ) ಅವರು ಸೇಂಟ್ ಪಾಲ್ಸ್ ಚರ್ಚ್ ನ ಬಾಗಿಲ ಬಳಿಯ ಪ್ರಾಂಗಣದಲ್ಲಿ ಇಸ್ಲಾಂ ಧರ್ಮದ ಯಶಸ್ಸಿಗೆ ಹಾಗೂ ಶಿಲುಬೆ ಒಡೆಯಲು (ಅಂದರೆ ಕ್ರೈಸ್ತರ ತಪ್ಪು ನಂಬಿಕೆಗಳು) ಪ್ರಾರ್ಥಿಸಿದರು. ಲಿಂಡೆನ್ ಈ ದೃಶ್ಯವನ್ನು ಎಂದಿಗೂ ನೋಡಿರಲಿಲ್ಲ, ಆದ್ದರಿಂದ ಸೃಷ್ಟಿಯು ಸುತ್ತಲೂ ಸ್ಫೋಟಿಸಿತು. ಸುದೀರ್ಘ ಪ್ರಾರ್ಥನೆಯನ್ನು ಮಾಡಿದ ನಂತರ, ಹುಝೂರ್(ರ) ತಮ್ಮ ಸಹಚರರೊಂದಿಗೆ ಸವಾರಿ ಮಾಡಿ ತಮ್ಮ ನಿವಾಸ ಚೇಶಾಮ್ ಪ್ಯಾಲೇಸ್ ನಂ. 6 ಅನ್ನು ತಲುಪಿ ಮನೆಗೆ ಪ್ರವೇಶಿಸುವ ಮೊದಲು ಪ್ರಾರ್ಥಿಸಿದರು.

ಹುಝೂರ್(ರ) ಅವರ ಆಗಮನದ ಕುರಿತು ಇಂಗ್ಲೆಂಡ್‌ನಲ್ಲಿ ಪತ್ರಿಕೆಗಳ ಮೂಲಕ ಪ್ರಚುರಪಡಿಸಲಾಯಿತು. ಹುಝೂರ್(ರ) ಅವರು ಇಲ್ಲಿಗೆ ತಲುಪಿ ಮೊದಲ ಕೆಲಸಮಾಡಿದ್ದೇನೆಂದರೆ ತಮ್ಮ ಸಹಚರರಿಗೆ ವಿವಿಧ ಕರ್ತವ್ಯಗಳನ್ನು ನಿಯೋಜಿಸಿ ಒಂದು ಆಡಳಿತ ಸಮಿತಿಯನ್ನು ಸ್ಥಾಪಿಸಿದರು, ಅದರ ಅಧ್ಯಕ್ಷರು ಚೌಧರಿ ಫತೇಹ್ ಮುಹಮ್ಮದ್ ಸಿಯಾಲ್ ಸಾಹಿಬ್ ಮತ್ತು ಕಾರ್ಯದರ್ಶಿ ಮೌಲ್ವಿ ಮುಹಮ್ಮದ್ದೀನ್ ಸಾಹಿಬ್ ಅವರನ್ನು ನೇಮಿಸಿದರು. ಅದಲ್ಲದೆ, ಹುಝೂರ್(ರ) ಅವರು ಲಂಡನ್‌ನಲ್ಲಿ ವಾಸ್ತವ್ಯದ ಮೊದಲ ವಾರದಲ್ಲಿ "ಈವ್ನಿಂಗ್ ಸ್ಟಾಂಡರ್ಡ್" ಮತ್ತು "ಸ್ಟಾರ್" ಪತ್ರಿಕೆಯ ಪ್ರತಿನಿಧಿಗಳಿಗೆ ಸಂದರ್ಶನವನ್ನು ನೀಡಿದರು. ಹಝ್ರತ್ ಹಾಫಿಝ್ ರೋಶನ್ ಅಲಿ ಸಾಹಿಬ್(ರ) ಅವರ ಸೂಫಿಸಂನ ಲೇಖನವನ್ನು ಪರಿಷ್ಕರಿಸಿ ಅಗತ್ಯ ಸೂಚನೆಗಳೊಂದಿಗೆ ಅನುವಾದಕ್ಕಾಗಿ ಮೌಲ್ವಿ ಮುಹಮ್ಮದ್ ದೀನ್ ಸಾಹಿಬ್ ಅವರಿಗೆ ನೀಡಿದರು. ಈ ಲೇಖನವನ್ನು ಮೌಲ್ವಿ ಮುಹಮ್ಮದ್ ದಿನ್ ಅವರು ಸೆಪ್ಟೆಂಬರ್ 25, 1924 ರಂದು ಸಂಜೆ 5 ಗಂಟೆಗೆ ಸರ್ ಪ್ಯಾಟ್ರಿಕ್ ನ್ಯಾನ್ ಅವರ ಅಧ್ಯಕ್ಷತೆಯಲ್ಲಿ ಕೇಳಲಾಯಿತು ಮತ್ತು ಅದು ಬಹಳ ಪ್ರಸಿದ್ಧಿ ಪಡೆಯಿತು. ಮತ್ತು ಈ ವಾರ ಹುಝೂರ್(ರ) ಅವರು ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್ ಅವರೊಂದಿಗೆ ವೆಂಬ್ಲೆ ಮತ್ತು ಇಂಡಿಯಾ ಕಛೇರಿಗೆ ಭೇಟಿ ನೀಡಿದರು. ಇಂಗ್ಲೆಂಡಿನ ಪ್ರಚಾರಕರಾದ ಹಝ್ರತ್ ಮೌಲ್ವಿ ಅಬ್ದುರ್ ರಹೀಮ್ ಸಾಹಿಬ್(ರ) ಅವರು ಪತ್ರಿಕೆಗಳ ಪ್ರತಿನಿಧಿಗಳನ್ನು ಆಹ್ವಾನಿಸಿದರು. ಇದರಲ್ಲಿ ಸರ್ವಧರ್ಮ ಸಮ್ಮೇಳನದ ಆಡಳಿತ ಮಂಡಳಿಯ ಕೆಲ ಸದಸ್ಯರೂ ಭಾಗವಹಿಸಿದ್ದರು. ಈ ಆಹ್ವಾನದಲ್ಲಿ ಹುಝೂರ್(ರ) ಅವರು ಇಂಗ್ಲೆಂಡಿನ ಜನರಿಗೆ ವಿವರವಾದ ಸಂದೇಶವನ್ನು ನೀಡಿದರು. ಮುಕ್ರಂ ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್ ಅವರು ನಿರರ್ಗಳವಾದ ಮತ್ತು ಸ್ಪಷ್ಟವಾದ ಇಂಗ್ಲಿಷ್ ಭಾಷೆಯಲ್ಲಿ ಹೇಳಿ ತಿಳಿಸಿದರು. ಈ ಸಂದೇಶದ ಒಂದು ಭಾಗವು ಈ ಕೆಳಗಿನಂತಿರುತ್ತದೆ.

"ನಾನು ಮನುಕುಲದ ಮೇಲಿನ ಪ್ರೀತಿ ಮತ್ತು ಪ್ರಾಮಾಣಿಕತೆಯಿಂದ ಇಂಗ್ಲೆಂಡಿಗೆ ಆಗಮಿಸಿದ್ದೇನೆ ಮತ್ತು ಇದು ಅಹ್ಮದೀಯ ಸಂಸ್ಥಾಪಕರ ಒಡನಾಟ ಮತ್ತು ಇಸ್ಲಾಂ ಧರ್ಮದ ಬೋಧನೆಯ ಫಲಿತಾಂಶ ಎಂದು ನಾನು ನಂಬುತ್ತೇನೆ. ಅಹ್ಮದೀಯ ಸಂಸ್ಥಾಪಕರು ಮಾಡಿದ ಭವಿಷ್ಯವಾಣಿಯ ಕಾರಣದಿಂದಾಗಿ ಅಹ್ಮದೀಯ ಸ್ಥಾಪಕರು ತಾನು ವಾಗ್ದತ್ತ ಮಸೀಹ್ ಮತ್ತು ಮಹದಿ ಎಂದು ಹೇಳಿಕೊಂಡ ಸತ್ಯಗಳನ್ನು ಶೀಘ್ರದಲ್ಲೇ ಪಾಶ್ಚಿಮಾತ್ಯರು ಸ್ವೀಕರಿಸುತ್ತಾರೆ ಎಂದು ನಾನು ನಂಬುತ್ತೇನೆ ಏಕೆಂದರೆ ಅವರು ಶಾಂತಿಯ ರಾಜಕುಮಾರ ಮತ್ತು ಜಗತ್ತು ಅವರ ಕೈಯಲ್ಲಿ ಒಟ್ಟುಗೂಡುವುದು ಮತ್ತು ಜಗತ್ತಿನಲ್ಲಿ ಶಾಂತಿ ನೆಲೆಸುವುದು, ಆದ್ದರಿಂದ ಪ್ರತಿಯೊಬ್ಬ ಶಾಂತಿಪ್ರಿಯ ನಾಗರೀಕನ ಕರ್ತವ್ಯವಾಗಿದೆ. ಈ ವಾಸ್ತವತೆಯ ಮೇಲೆ ಗಂಭೀರವಾಗಿ ಚಿಂತನೆ ಮಾಡಬೇಕು. ನಿಮ್ಮ ಸೋಮಾರಿತನವು ಈ ಗುರಿಯನ್ನು ಹಿಮ್ಮೆಟ್ಟಿಸುವಂತೆ ಆಗಬಾರದು. ದೇವರೊಂದಿಗಿನ ಸಂಬಂಧವನ್ನು ಆಧರಿಸಿರದ ಯಾವುದೇ ನಿಜವಾದ ಭ್ರಾತೃತ್ವವನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಸಹೋದರರ ಸಂಬಂಧವು ತಂದೆಯ ಮೂಲಕವಾಗಿದೆ ಮತ್ತು ತಂದೆಯನ್ನು ತಿಳಿದಿರುವವನು ತಂದೆಯ ಹಕ್ಕನ್ನು ಗುರುತಿಸಬಲ್ಲನು ಮತ್ತು ಈ ಯುಗದಲ್ಲಿ ಒಬ್ಬ ವ್ಯಕ್ತಿಯು ತನ್ನ ತಂದೆಯೊಂದಿಗೆ ಸಂಬಂಧ ಕಲ್ಪಿಸಿ ಕೊಡುವ ಗುರಿಹೊಂದಿರುವವರು ವಾಗ್ದಾತ್ತ ಮಸೀಹರು ಮಾತ್ರ ಆಗಿರುವರು. ಇದು ಕೇವಲ ನಾಮ ಮಾತ್ರಕ್ಕೆ ಸಾಧಿಸುವ ಮಾತಲ್ಲ ಬದಲಿಗೆ ಅವರ ಬೋಧನೆಗಳ ಮೂಲಕ ಸಾವಿರಾರು ಅವರ ಅನುಯಾಯಿಗಳು ತಮ್ಮ ಪ್ರಭುವಿನ ವಾಣಿಯನ್ನು ಗತಿಸಿಹೋದ ಎಲ್ಲಾ ಪ್ರವಾದಿಗಳಂತೆಯೇ ಆಲಿಸಿದರು. ಆದ್ದರಿಂದ ಅವರಲ್ಲಿ ಈ ಲೇಖಕನು ಒಬ್ಬನಾಗಿದ್ದಾನೆ. ನಮ್ಮ ಗುರಿ ದೇವರ ಮತ್ತು ಅವನ ದಾಸರ ನಡುವೆ ಮತ್ತು ಅವನ ಸೃಷ್ಟಿಯೊಡನೆ ಉತ್ತಮ ಸಂಬಂಧ

ಸಾಧಿಸುವ ಗುರಿಯಾಗಿರುವುದರಿಂದ ನಾವೆಲ್ಲರೂ ಸುಧಾರಣೆಗಾಗಿ ಶ್ರಮಿಸೋಣ ಮತ್ತು ವಿಧ್ವಂಸಕರಾಗುವ ಬದಲು ನೆಲೆಸೋಣ."
(ತಾರೀಖೆ ಅಹ್ಮದಿಯ್ಯತ್, ಸಂಪುಟ–4, ಪುಟ–447)

ಲಂಡನ್‌ನಲ್ಲಿ ವಾಸ್ತವ್ಯದ ಎರಡನೇ ವಾರದಲ್ಲಿ, ಆಗಸ್ಟ್ 29 ರಿಂದ ಸೆಪ್ಟೆಂಬರ್ 4, 1924 ರವರೆಗೆ, ಹುಝೂರ್(ರ) ಬ್ರೈಟನ್ ಪಟ್ಟಣಕ್ಕೆ ಭೇಟಿ ನೀಡಿದರು ಮತ್ತು ಮಹಾಯುದ್ಧದಲ್ಲಿ ಪ್ರಾಣ ತ್ಯಾಗ ಮಾಡಿದ ಸೈನಿಕರ ಸ್ಮಾರಕದಲ್ಲಿ ಛತ್ರಿಯ ಅಡಿಯಲ್ಲಿ ಪ್ರಾರ್ಥಿಸಿದರು, ಯಾವ ರೀತಿ ಇದು ಲೌಕಿಕ ಕಾರಣಗಳಿಗಾಗಿ ಒಟ್ಟಾಗುವ ಪ್ರದೇಶವಾಗಿದೆ ಅದೇ ರೀತಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವ್ಯವಾದ ಛತ್ರಿಯಡಿಯಲ್ಲಿ ಪೂರ್ವ ಮತ್ತು ಪಶ್ಚಿಮವನ್ನು ಒಟ್ಟುಗೂಡಿಸಲು ಬಯಸುತ್ತಾನೆ. ಹುಝೂರ್(ರ) ಪ್ರಾರ್ಥನೆಗೂ ಮುನ್ನ ಭಾಷಣ ಮಾಡಿದರು. ಈ ದೃಶ್ಯಗಳನ್ನು ಚಲನಚಿತ್ರಗಳಲ್ಲಿ ತುಂಬಿ ಚಿತ್ರಮಂದಿರಗಳಿಗೆ ಕಳುಹಿಸಲಾಯಿತು. ಅದು ಇರಾಖ್, ಅರೇಬಿಯಾ, ಈಜಿಪ್ಟ್, ಸೀರಿಯಾ, ಅಮೇರಿಕ ಮತ್ತು ಆಫ್ರಿಕಾದಲ್ಲಿ ಪ್ರಪಂಚದಾದ್ಯಂತ ಪ್ರಚಲಿತಗೊಳ್ಳುತ್ತಿದೆ.

ಸೆಪ್ಟೆಂಬರ್ 7, 1924 ರಂದು, ಅನೇಕ ಬ್ರಿಟಿಷ್ ಪುರುಷರು, ಮಹಿಳೆಯರು, ಭಾರತೀಯ ವಿದ್ಯಾರ್ಥಿಗಳು, ಟರ್ಕಿಯ ರಾಯಭಾರ ಕಚೇರಿ ಮತ್ತು ಇತರ ಪ್ರತಿಷ್ಠಿತ ಮುಸ್ಲಿಮರನ್ನು ಆಹ್ವಾನಿಸಲಾಯಿತು, ಇದರಲ್ಲಿ ಹುಝೂರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಪ್ರೀತಿಯ ಮತ್ತೊಂದು ಸಂದೇಶವನ್ನು ಚೌಧರಿ ಝಫರುಲ್ಲಾ ಖಾನ್ ಸಾಹಿಬ್ ಅವರು ಬಹಳ ಸಮರ್ಥವಾಗಿ ಓದಿದರು. ನಿರೂಪಿಸಿದರು. ಸೆಪ್ಟೆಂಬರ್ 9, 1924 ರ ಸಂಜೆ, "East and West Union" ನ ಸಭೆಯಲ್ಲಿ (ಗಿಲ್ಡ್ ಹೌಸ್‌ನಲ್ಲಿ ನಡೆದ) ಮೊದಲ ಇಂಗ್ಲಿಷ್ ಉಪನ್ಯಾಸವನ್ನು ಹುಝೂರ್(ರ) ಅವರು ಮಾಡಿದರು, ಅದು ಉತ್ತಮ ಪ್ರತಿಕ್ರಿಯೆಯನ್ನು ಪಡೆಯಿತು. ನಂತರ, ಸೆಪ್ಟೆಂಬರ್ 11, 1924 ರಂದು, ಅವರು ಲೀಗ್ ಆಫ್ ನೇಷನ್ಸ್‌ನ ಧರ್ಮ ಮತ್ತು ನೈತಿಕತೆಯ ವಿಭಾಗದ ಕಾರ್ಯದರ್ಶಿ ಸನ್ಮಾನ್ಯ ಎಲ್‌ಸನ್ ಮತ್ತು ಸನ್ಮಾನ್ಯ ರೀನ್ ಅವರೊಂದಿಗೆ ವಿವರಾತ್ಮಕವಾಗಿ ಚರ್ಚೆಯನ್ನು ನಡೆಸಿದರು ಮತ್ತು ಬುದ್ಧಿವಂತ ರೀತಿಯಲ್ಲಿ ಹೇಳಿದರು. ಲೀಗ್ ಆಫ್ ನೇಶನ್ಸ್‌ನ ಅಡಿಪಾಯವು ಇಸ್ಲಾಮಿಕ್ ತತ್ವಗಳ ಮೇಲೆ ಸ್ಥಾಪಿತವಾಗಾದೆ ಅದು ಎಂದಿಗೂ ತನ್ನ ಗುರಿಗಳನ್ನು ಸಾಧಿಸಲು ಸಾಧ್ಯವಿಲ್ಲ.

(ಅಲ್‌ಫಝಲ್, 14 ಅಕ್ಟೋಬರ್ 1924, ಪುಟ–3 ರಿಂದ 4)

ಸೆಪ್ಟೆಂಬರ್ 12, 1924 ರಂದು, ಹುಝೂರ್(ರ) ಅವರು ಜುಮುಅ ನಮಾಝ್ ಅನ್ನು ನಿರ್ವಹಿಸಿದರು ಮತ್ತು ಹುಝೂರ್(ರ) ಅವರು ಅಫ್‌ಘಾನಿಸ್ತಾನದ ಹುತಾತ್ಮರಾದ ಮೌಲ್ವಿ ನಿಮತುಲ್ಲಾ ಖಾನ್ ಸಾಹಿಬ್ ಅವರಂತೆ ಎಲ್ಲಾ ಸಮಯದಲ್ಲೂ ಹುತಾತ್ಮರಾಗಲು ಸಿದ್ಧರಾಗಿರಬೇಕು ಎಂದು ಜಮಾಅತ್ತಿನ ಸದಸ್ಯರಿಗೆ ನೆನಪಿಸಿದರು, ಸೆಪ್ಟೆಂಬರ್ 13, 1924 ರಂದು, ಹುಝೂರ್(ರ) ಪೋರ್ಟ್ ಸ್ಮಿತ್‌ನಲ್ಲಿ ಎರಡು ಉಪನ್ಯಾಸಗಳನ್ನು ನೀಡಿದರು. "ಮಸೀಹ್ ಕೀ ಆಮದ್ ಸಾನಿ" ಮತ್ತು ಇನ್ನೊಂದು "ಪೈಗಾಮೆ ಆಸ್ಮಾನಿ." ಸೆಪ್ಟೆಂಬರ್ 15 ರಂದು, ಹುಝೂರ್(ರ) ಅವರು ಸೆಪ್ಟೆಂಬರ್ 16, 1924 ರಂದು ಸಮ್ಮೇಳನದ ಉದ್ದೇಶಿತ ಲೇಖನದ ಸಾರಾಂಶವನ್ನು ಬರೆದರು. ಸೆಪ್ಟೆಂಬರ್ 17, 1924 ರಂದು, ಅವರು ಮೌಲ್ವಿ ನಿಮತುಲ್ಲಾ ಖಾನ್ ಸಾಹಿಬ್ ಶಹೀದ್ ಕಾಬುಲ್ ಅವರ ಹುತಾತ್ಮರ ಬಗ್ಗೆ ಪ್ರತಿಭಟನಾ ಸಭೆಯಲ್ಲಿ ಭಾಷಣ ಮಾಡಿದರು.

ಸೆಪ್ಟೆಂಬರ್ 19 ರಂದು, ಶುಕ್ರವಾರದ ನಂತರ, ವೆಂಬ್ಲೆ ಸಮ್ಮೇಳನದ ಅಧ್ಯಕ್ಷ ಸರ್ ಇ. ಡಿ. ರಾಸ್ ಅವರನ್ನು ಭೇಟಿಯಾದರು. ನೀವು ಇಂಗ್ಲೆಂಡ್‌ನ ಅತ್ಯಂತ ಪ್ರಸಿದ್ಧ ಓರಿಯೆಂಟಲಿಸ್ಟ್‌ಗಳಲ್ಲಿ ಒಬ್ಬರು. ಸಂದರ್ಶನದ ನಂತರ, ನಿಮ್ಮ ಭೇಟಿಯ ಬಗ್ಗೆ ಇಂಗ್ಲಿಷ್ ಪತ್ರಿಕೆಗಳು ತುಂಬಾ ಆಸಕ್ತಿ ವಹಿಸುತ್ತವೆ ಎಂದು ಹೇಳಿದರು. ಅದೇ ಸಂಜೆ ಅವರು ಸೇಂಟ್ ಲ್ಯೂಕ್ಸ್ ಹಾಲ್‌ನಲ್ಲಿ "ಸಾವಿನ ನಂತರದ ಜೀವನ" ಕುರಿತು ಅದ್ಭುತವಾದ ಉಪನ್ಯಾಸವನ್ನು ನೀಡಿದರು, ಲಾಗೋಸ್ (ನೈಜೀರಿಯಾ) ನಿಂದ ಇಬ್ಬರು ಹಾಜಿ ಸಾಹಿಬ್‌ಗಳು (ಅವರಲ್ಲಿ ಒಬ್ಬರು ಅಹ್ಮದಿ) ಹುಝೂರ್(ರ) ಅವರ ಸೇವೆಯಲ್ಲಿ ಆಗಮಿಸಿದರು.

**ಕರ್ನಲ್ ಡೌಗ್ಲಸ್ ಅವರೊಂದಿಗೆ ಭೇಟಿ:**

ಸೆಪ್ಟೆಂಬರ್ 21, 1924 ರ ಸಂಜೆ ಹುಝೂರ್(ರ) ಅವರು ಕರ್ನಲ್ ಡಿಗ್ಲಸ್ ಅವರನ್ನು ಭೇಟಿಯಾದರು. ಗುರುದಾಸ್‌ಪುರ ಜಿಲ್ಲೆಯ (ಪಂಜಾಬ್, ಭಾರತ) ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಡಿಗ್ಲಸ್ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿರುದ್ಧ ಹೆನ್ರಿ ಮಾರ್ಟಿನ್ ಕ್ಲಾರ್ಕ್‌ನ ಪ್ರಕರಣವನ್ನು ಆಧಾರರಹಿತವೆಂದು ವಜಗೊಳಿಸಿದ್ದರು ಮತ್ತು ನ್ಯಾಯದ ಮಾದರಿಯನ್ನು ತೋರಿದರು.

**ಯುರೋಪ್‌ನಲ್ಲಿ ಇಸ್ಲಾಂನ ಆಧ್ಯಾತ್ಮಿಕ ವಿಜಯದ ಆಧಾರ:**

ಸೆಪ್ಟೆಂಬರ್ 22, 1924 ರಂದು, ವೆಂಬ್ಲೆ ಸಮ್ಮೇಳನವನ್ನು ಉದ್ಘಾಟಿಸಲಾಯಿತು ಮತ್ತು ಹುಝೂರ್(ರ) ತಮ್ಮ ಸಹಚರರೊಂದಿಗೆ ಈ ಸಮ್ಮೇಳನದಲ್ಲಿ ಭಾಗವಹಿಸಲು ತೆರಳಿದ್ದರು. ಸೆಪ್ಟೆಂಬರ್ 23, 1924 ರಂದು ಯುರೋಪಿಯನ್ ಪ್ರವಾಸದ ಐತಿಹಾಸಿಕ ದಿನವಾಗಿತ್ತು ಏಕೆಂದರೆ ಅಂದು, ವೆಂಬ್ಲೆ ಸಮ್ಮೇಳನದಲ್ಲಿ ಹುಝೂರ್(ರ) ಅವರ ಅದ್ಭುತವಾದ ಲೇಖನವನ್ನು ಓದಲಾಯಿತು, ಅದು ಅಹ್ಮದಿಯಾ ಜಮಾಅತ್ತಿನ ಖ್ಯಾತಿಗೆ ಪ್ರಜ್ವಲ ನೀಡಿತು. ಯುರೋಪ್‌ನಲ್ಲಿ ಇಸ್ಲಾಂ ಧರ್ಮದ ಆಧ್ಯಾತ್ಮಿಕ ವಿಜಯಕ್ಕೆ ಅಡಿಪಾಯ ಇರಿಸಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಲಂಡನ್‌ನಲ್ಲಿ ಭಾಷಣ ಮಾಡುವ ದೇವಸ್ವಪ್ನವು ಈಡೇರಿತು.

ಸೆಪ್ಟೆಂಬರ್ 26 ರಂದು, ಸಂಪ್ರದಾಯವಾದಿಗಳ ಕೋರಿಕೆಯ ಮೇರೆಗೆ, ಹುಝೂರ್(ರ) ಅವರು ಲಂಡನ್‌ನ ಡಚ್ ಹಾಲ್‌ನಲ್ಲಿ ಭಾರತದ ಪ್ರಸ್ತುತ ಪರಿಸ್ಥಿತಿ ಮತ್ತು ಏಕತೆಯನ್ನು ನಿರ್ಮಿಸುವ ವಿಧಾನಗಳ ಕುರಿತು ತಿಳಿವಳಿಕೆ ಉಪನ್ಯಾಸ ನೀಡಿದರು. ಸೆಪ್ಟೆಂಬರ್ 28 ರಂದು, ಲಿಂಡೆನ್‌ಫೀಲ್ಡ್‌ನಲ್ಲಿ ಹುಝೂರ್(ರ) ಅವರ "ಹಝ್ರತ್ ಪೈಗಂಬರ್(ಸ)ರ ಜೀವನ ಮತ್ತು ಬೋಧನೆಗಳಿಂದ ಚಿಕ್ಕ ಮಕ್ಕಳು ಹೇಗೆ ಪ್ರಯೋಜನ ಪಡೆಯಬಹುದು" ಎಂಬ ವಿಷಯದ ಕುರಿತು ಅವರ ಪ್ರಮುಖ ಲೇಖನಗಳಲ್ಲಿ ಒಂದನ್ನು ಓದಲಾಯಿತು. ಅದೇ ವಾರದಲ್ಲಿ ಅವರು "Review Of Religion" (ಧರ್ಮಗಳ ವಿಮರ್ಶೆ)ನ ಇಂಗ್ಲಿಷ್ ಆವೃತ್ತಿಯನ್ನು ಶೀಘ್ರದಲ್ಲೇ ಲಂಡನ್‌ನಲ್ಲಿ ಪ್ರಕಟಿಸಲಾಗುವುದು ಎಂದು ನಿರ್ಧರಿಸಿದರು.

**ವಿಜಯಿ ಜರ್ನಲ್:**

ಅಕ್ಟೋಬರ್ 2 ರಂದು, ಹುಝೂರ್(ರ) ಅವರು "ವಿಲಿಯಂ ದಿ ಕಾಂಕರರ್" ನ ಕನಸನ್ನು ನನಸಾಗಿಸಲು ಮುನ್ನಿ ಕೊಲ್ಲಿಗೆ ಆಗಮಿಸಿದರು ಮತ್ತು ಒಂದು ದೋಣಿಯ ಮೂಲಕ "ವಿಲಿಯಂ ದಿ ಕಾಂಕರರ್" ಬಂದಿಳಿದ ಸ್ಥಳಕ್ಕೆ ಬಂದಿಳಿದರು. ಆ ಸಮಯದಲ್ಲಿ ಅವರ ಮುಖದಲ್ಲಿ ವೈಭವ ಮತ್ತು ವೈಭವವಿತ್ತು ಮತ್ತು ಅದರೊಂದಿಗೆ ನಮ್ರತೆಯ ಭಾವವೂ ಇತ್ತು ಎಂದು ಹಝ್ರತ್ ಭಾಯಿ ಅಬ್ದುಲ್ ರಹಮಾನ್ ಸಾಹಿಬ್(ರ) ಖಾದಿಯಾನಿ ಹೇಳುತ್ತಾರೆ. ತದನಂತರ, ನೀವು ಮೌನವಾಗಿ ಪ್ರಾರ್ಥಿಸಿದರು. ಹುಝೂರ್(ರ) ಅವರು ನಮಾಝನ್ನು ಖಸರ್ ಮಾಡಿ ನಿರ್ವಹಿಸಿ ಅದರಲ್ಲಿ ದೀರ್ಘವಾದ ಪ್ರಾರ್ಥನೆಯನ್ನು ಮಾಡಿದರು ಮತ್ತು ನೆಲದ ಮೇಲೆ ಕಾಲು ಮಡಿಚಿ ಕುಳಿತುಕೊಂಡು ತಮ್ಮ ಮುಷ್ಟಿಯನ್ನು ಕಲ್ಲಿನ ಉಂಡೆಗಳಿಂದ ತುಂಬಿಸಿ ಹೇಳಿದರು, ಕಸ್ರಾ(ಇರಾನ್)ದ ಆಸ್ಥಾನದಲ್ಲಿ ಓರ್ವ ಸಹಾಬಿಗೆ ಜೇಡಿಮಣ್ಣು ನೀಡಲಾಯಿತು. ಆ ಸಹಾಬಿಯು ಅದರಿಂದ ಶುಭಲಕ್ಷಣ ಎಂದು ಭಾವಿಸಿ ಕಸ್ರಾ (ಇರಾನ್) ನಮ್ಮದಾಯಿತು ಎಂದು ಹೇಳಿ ಅಲ್ಲಿಂದ ಮರಳಿದರು. ಇರಾನ್ ಚಕ್ರವರ್ತಿಯು ಅವರಿಂದ ಮಣ್ಣು ತರಲು ಜನರನ್ನು ಕಳುಹಿಸಿದನು, ಆದರೆ ಸಹಾಬಿ ಅದನ್ನು ಹಿಂದಿರುಗಿಸಲಿಲ್ಲ, ಮತ್ತು ಅಲ್ಲಾಹನು ಅದನ್ನು ಶುಭಗೊಳಿಸಿ ಆ ನೆಲವನ್ನು ಸಹಾಬಿಗೆ ದಯಪಾಲಿಸಿದನು. ಭಾಯಿ ಅಬ್ದುಲ್ ರಹಮಾನ್ ಸಾಹಿಬ್ ಖಾದಿಯಾನಿ(ರ) ಮತ್ತು ದರ್ದ್ ಸಾಹಿಬ್(ರ) ಈ ಕಲ್ಲುಗಳಲ್ಲಿ ಎರಡು ಹಿಡಿ ತುಂಬಿ ತಮ್ಮ ಜೇಬಿಗೆ ಹಾಕಿಕೊಂಡರು. ಅವರು ಇಲ್ಲಿಂದ ಮುಗಿಸಿದ ತಕ್ಷಣ, ಭಾಯಿ ಜೀ ಅವರ ಮನಸ್ಸಿನಲ್ಲಿ ಬಲವಾದ ಭಾವನೆ ಉಕ್ಕಿ ಬಂತು ಮತ್ತು ಅವರು ಜೋರಾಗಿ ಅಭಿನಂದನೆಗಳನ್ನು ನೀಡಿದರು

ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ಕವನವನ್ನು ಬಹಳ ಉತ್ಸಾಹದಿಂದ ಓದಿದರು.

'ತೊ ಸಚ್ಚೆ ವಹ್ದೋಂ ವಾಲಾ ಮುನ್ಕರ್ ಕಹಾಂ ಕಿಧರ್ ಹೇಂ'

ಹಾಗಾದರೆ ನಿಜವಾದ ಭರವಸೆಗಳನ್ನು ನಿರಾಕರಿಸುವವರು ಎಲ್ಲಿದ್ದಾರೆ? (ಅಲ್-ಫಝ್ಲ್, ನವೆಂಬರ್ 20, 1924, ಪುಟ-5)

ಅಕ್ಟೋಬರ್ 3, 1924 ರಂದು, ಹುಝೂರ್(ರ) ಅವರು ಉರ್ದುವಿನಲ್ಲಿ ಧಾರ್ಮಿಕ ವಿದ್ವಾಂಸರ ಸಮ್ಮೇಳನದ ಕೊನೆಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಬಗ್ಗೆ ಸಾಕಷ್ಟು ಸಂತಸ ವ್ಯಕ್ತವಾಯಿತು. ಉಪನ್ಯಾಸ ಸಭಾಂಗಣವು ಸಂಪೂರ್ಣವಾಗಿ ತುಂಬಿತ್ತು.

(ಅಲ್-ಫಝ್ಲ್ 6, 15 ನವೆಂಬರ್ 1924)

ಅಕ್ಟೋಬರ್ 4, 1924 ರಂದು, ಹುಝೂರ್(ರ) ಅವರು ತಮ್ಮ ಸಹಚರರೊಂದಿಗೆ, ಇಂಗ್ಲೆಂಡ್‌ನ ಹೊಸ ಬೋಧಕ (ಮುಬಲ್ಲಿಗ್) ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ದರ್ದ್(ರ) ಅವರೊಂದಿಗೆ, ಉದ್ದೇಶಿತ ಮಸೀದಿಯಲ್ಲಿ ತೆರೆಯಲು ಹೊರಟಿದ್ದ ಪಟ್ನಿಯ ಮನೆಯ ಬಾಗಿಲಿಗೆ ಹೋದರು. ಈ ಸ್ಥಳದಲ್ಲಿ ನಿಂತು, ಹುಝೂರ್(ರ) ಅವರು ಮಸೀದಿಯ ನಿರ್ಮಾಣದ ಯೋಜನೆಯನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದರು. ನಂತರ ಅವರು ಆ ದಿನಗಳಲ್ಲಿ ನಮಾಝ್‌ಗಳನ್ನು ನಿರ್ವಹಿಸಲಾಗುತ್ತಿದ್ದ ಮನೆಯ ಕೋಣೆಗೆ ಹೋಗಿ ಬಹಳ ಹೊತ್ತು ಸುದೀರ್ಘ ದುಆ ಮಾಡಿದರು. ನಂತರ ಅವರು ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ದರ್ದ್(ರ) ಅವರಿಗೆ ತಮ್ಮ ಅನುಗ್ರಹದಾಯಕ ಹಸ್ತದಿಂದ ಈ ಮನೆಯ ಕೀಲಿಯನ್ನು ನೀಡಿದರು ಮತ್ತು ನಂತರ ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ದರ್ದ್ ಮತ್ತು ಅವರ ನಾಯಿಬ್ ಮಲಿಕ್ ಗುಲಾಂ ಫರೀದ್ ಸಾಹಿಬ್ ಎಂ.ಎ ಅವರಿಗೆ ವಿವರವಾದ ಸೂಚನೆಗಳನ್ನು ನೀಡಿದರು. ಅಕ್ಟೋಬರ್ 7 ರಂದು, ಹುಝೂರ್(ರ) ಅವರು ಹೌಸ್ ಆಫ್ ಲಾರ್ಡ್ಸ್ ಸಭೆಯನ್ನು ನೋಡಿದರು ಮತ್ತು ಅಕ್ಟೋಬರ್ 8 ಮತ್ತು 9 ರಂದು ಅವರು ಹೌಸ್ ಆಫ್ ಕಾಮನ್ಸ್ ಸಭೆಯನ್ನು ನೋಡಲು ಹೋಗಿದ್ದರು.

ಅಕ್ಟೋಬರ್ 12 ರಂದು, ಅವರು ಒಂಬತ್ತು ಮುಸ್ಲಿಮರಿಗೆ ಐದು ಗಂಟೆಗಳ ಕಾಲ ತಬ್ಲೀಗ್ ಮತ್ತು ಬೋಧನೆಯಲ್ಲಿ ತೊಡಗಿದ್ದರು ಮತ್ತು ಅಕ್ಟೋಬರ್ 15 ರಂದು, ಹುಝೂರ್(ರ) ಅವರು "ಓರಿಯಂಟಲ್ ಸ್ಕೂಲ್ ಆಫ್ ಸ್ಟಡೀಸ್" ಗೆ ಭೇಟಿ ನೀಡಿದರು.

(ಅಲ್-ಫಝ್ಲ್, ನವೆಂಬರ್ 11, 1924)

**ಅಕ್ಟೋಬರ್ 19, 1924: ಸ್ಮರಣೀಯ ದಿನ:**

ಅಕ್ಟೋಬರ್ 19, 1924 ಒಂದು ಸ್ಮರಣೀಯ ದಿನವೆಂದು ಸಾಬೀತಾಯಿತು. ಹುಝೂರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರು ತಮ್ಮ ಅನುಗ್ರಹದಾಯಕ ಹಸ್ತದಿಂದ "ಮಸ್ಜಿದ್ ಫಝ್ಲ್" ನ ಶಿಲಾನ್ಯಾಸವನ್ನು ಸಂಜೆ 4 ಗಂಟೆಗೆ ಬೃಹತ್ ಸಮಾವೇಶದಲ್ಲಿ ನೆರವೇರಿಸಿದರು. (ಅಲ್-ಫಝ್ಲ್, ಅಕ್ಟೋಬರ್ 25, 1924)

ಲಂಡನ್‌ನಲ್ಲಿ ಮೊದಲ ಮಸೀದಿಯ ಅಡಿಪಾಯವನ್ನು ಇರಿಸಿದಾಗ, ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ದರ್ದ್(ರ) ಅವರು ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್(ರ) ಅವರ ತಂತಿ ಸಂದೇಶವನ್ನು ಗಟ್ಟಿಯಾಗಿ ಓದಿ ತಿಳಿಸಿದರು, ಅವರು ಆ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಭಾರತದ ವತಿಯಿಂದ ಅಭಿನಂದಿಸಿದರು. ಬಳಿಕ ಹುಝೂರ್(ರ) ಸುದೀರ್ಘ ಪ್ರಾರ್ಥನೆ ಮಾಡಿದರು. ನಂತರ ಅದೇ ಸ್ಥಳದಲ್ಲಿ ಅಸರ್ ನಮಾಝ್ ನಿರ್ವಹಿಸಲಾಯಿತು ಮತ್ತು ಈ ಮಸೀದಿಯ ಅಡಿಪಾಯವನ್ನು ಇರಿಸಲಾಗಿದೆ ಎಂದು ನಾನು ಘೋಷಿಸುತ್ತೇನೆ ಎಂದು ಹುಝೂರ್(ರ) ಅವರು ಘೋಷಿಸಿದರು. ನಮಾಝಿನ ನಂತರ, ಎಲ್ಲಾ ಕಡೆಯಿಂದ ಅಭಿನಂದನೆಗಳು ಮೊಳಗಿದವು ಮತ್ತು ಮಸೀದಿಯ ಮಿಹ್ರಾಬ್ ಮೇಲೆ ಧ್ವಜವನ್ನು ಹಾರಿಸಲಾಯಿತು, ಇದನ್ನು ಹೈದರಾಬಾದ್‌ನ ಗೃಹ ಕಾರ್ಯದರ್ಶಿ ನವಾಬ್ ಅಕ್ಬರ್ ನವಾಝ್ ಜಂಗ್ ಸಾಹಿಬ್ ಅವರು ನೀಡಿದ್ದರು.

(ಅಲ್-ಫಝ್ಲ್, ನವೆಂಬರ್ 20, 1924)

*(ಪುಟ ಸಂಖ್ಯೆ 15 ರಲ್ಲಿ ಮುಂದುವರಿಸಲಾಗಿದೆ)*

*(ಪುಟ ಸಂಖ್ಯೆ 28ರ ಉಳಿದ ಭಾಗ)*

ಮಾರ್ಗವೆಂದರೆ ದರ್ಶನಗಳು, ಸ್ಫೂರ್ತಿಗಳು ಮತ್ತು ಬಹಿರಂಗಪಡಿಸುವಿಕೆಯ ಮೂಲಕ ಜನರಿಗೆ ಅವರ ಸತ್ಯವನ್ನು ಬಹಿರಂಗಪಡಿಸುತ್ತಾನೆ. ಹೀಗೆ ಸ್ವಾತ್ವಿಕ ಸ್ವಭಾವದವರು ಸಾಕ್ಷ್ಯವನ್ನು ನೋಡಿ ಸತ್ಯತೆಯನ್ನು ಒಪ್ಪಿ ಅದನ್ನು ಸ್ವೀಕರಿಸುತ್ತಾರೆ. ಇಂದು ನಾನು ಅದೇ ರೀತಿಯ ಒಂದು ದೈವಿಕ ಸಾಕ್ಷ್ಯ ನಿಮಗೆ ಹೇಳುತ್ತೇನೆ. ಹಲವು ವರ್ಷಗಳ ಹಿಂದೆ ಪ್ರಕಟವಾದ ನಿಯತಕಾಲಿಕೆಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ಈ ಪತ್ರಿಕೆಯ ಹೆಸರು ಸೂಫಿ. ಇದು ಅಹ್ಮದಿ ಪತ್ರಿಕೆಯಲ್ಲ. ಬದಲು ಅಹ್ಮದಿಯೇತರದ್ದಾಗಿದೆ. ಅದರಲ್ಲಿ ಒಂದು ಲೇಖನವಿದೆ. ಈ ಲೇಖನವನ್ನು ಬರೆದವರು ಅಹ್ಮದಿಯರಲ್ಲ. ಬದಲು ಅಹ್ಮದಿಯರ ವಿರೋಧಿಯಾಗಿದ್ದರು ಮತ್ತು ನಮ್ಮ ಜಮಾಅತಿನ ವಿಷಯ ಎಲ್ಲಾ ಗೊತ್ತಿದೆ. ಏಕೆಂದರೆ ಸ್ವಲ್ಪ ಸಮಯದ ಹಿಂದೆ ಹಝ್ರತ್ ಖಲೀಫತುಲ್ ಮಸೀಹರಿಗೆ ಮುಬಾಹಲದ ಪಂಥ್ವಾನ ನೀಡಿದ್ದರು ಹಾಗೂ ಅದಕ್ಕೆ ಖಲೀಫರು ಒಪ್ಪಿಗೆ ಸೂಚಿಸಿದಾಗ ಮೌನವಹಿಸಿದರು. ಅವರು ಖಾಜಾ ಹಸನ್ ನಿಝಾಮಿಯಾಗಿದ್ದರು. ಆ ಪತ್ರಿಕೆಯಲ್ಲಿ ಅವರ ಒಂದು ಲೇಖನ ಪ್ರಕಟವಾಗಿದೆ. ಅದರಲ್ಲಿ ಅವರು ಈ ಭೌತಿಕ ಪ್ರಪಂಚದಲ್ಲಿ ಲೋಕದ ಮೇಲೆ ದಿವ್ಯ ಸ್ವಪ್ನ ಹಾಗೂ ಕನಸುಗಳ ಯಥಾರ್ಥತೆಯ ಬಗ್ಗೆ ಕೆಲವು ಸಾಲುಗಳನ್ನು ಬರೆದಿದ್ದಾರೆ. ಮೊದಲ ಕನಸಿನಲ್ಲಿ ಬರೋದ ರಾಜ್ಯದ ಮುಖ್ಯಸ್ಥ ನವಾಬ್ ಸಯ್ಯದ್ ಸದ್ರುದ್ದೀನ್ ಖಾನ್ ಸಾಹಿಬ್‌ರದ್ದಾಗಿದೆ. ಅವರು ತಮ್ಮ ಸಾಮಾನುಗಳನ್ನು ಮನೆಯಲ್ಲಿ ಇರಿಸಿದ್ದಾರೆ ಮತ್ತು ಕುಟುಂಬವು ಸಹ ಸಾಮಾನು ಜೋಡಿಸವುದರಲ್ಲಿ ಮಗ್ನವಿದೆ. ಕೊನೆಯಲ್ಲಿ ಅವರು ಹೇಳಿದರು. ಹಡಗು ಸಿದ್ಧಪಡಿಸಿರಿ ಮತ್ತು ಈ ಸಾಮಾನುಗಳನ್ನು ಇರಿಸಿರಿ. ಕೇಳಲಾಯಿತು. ಹುಝೂರ್ ಎಲ್ಲಿಗೆ ಹೊರಡಬೇಕಾಗಿದೆ? ಹೇಳಿದರು. ಯೂರೋಪ್ ಹೋಗುವುದಿದೆ. ರೋಗ ನಿವಾರಿಸಬೇಕಾಗಿದೆ. ಆಗ ಅವರಲ್ಲಿ ಕೇಳಲಾಯಿತು. ನಿಮ್ಮ ಹೆಸರೇನು? ಹೇಳಿದರು. ನನ್ನ ಹೆಸರು ಉಮರ್ ಬಿನ್ ಖತ್ತಾಬ್. ಕನಸಿನ ಉಲ್ಲೇಖ ಖಿದ್ದುಹಸನ್ ನಿಝಾಮಿ ಸಾಹಿಬ್ ಬರೆದಿದ್ದಾರೆ. ನವಾಬರ ಈ ಕನಸಿನಲ್ಲಿ ಪರಿಗಣಿಸಬೇಕಾದ ಒಂದು ಅಂಶವಿದೆ. ಅದೇನೆಂದರೆ ಉಮರ್ ಫಾರೂಖ್ ಅವರ ಈ ಹೇಳಿಕೆ "ನಾನು ಚಿಕಿತ್ಸೆಗಾಗಿ ಯೂರೋಪ್‌ಗೆ ಹೋಗುತ್ತಿದ್ದೇನೆ. ಎಂದಿನಂತೆಯೇ ಅಥವಾ ಯೂರೋಪಿಯನ್ನರ ಚಿಕಿತ್ಸೆಗಾಗಿ ಯೂರೋಪ್ ಹೋಗುತ್ತಿದ್ದಾರೆ. ಆದರೆ ಎರಡೂ ಸಂದರ್ಭಗಳೂ ವಿಜ್ಞಾನ ಮತ್ತು ಭೌತವಾದಕ್ಕೆ ವಿರುದ್ಧವಾಗಿದೆ. ಮೊದಲನೆ ಪ್ರಕರಣ ನೋಡಿದರೆ ಹಝ್ರತ್ ಖಿದ್ದು ಚಿಕಿತ್ಸೆಗಾಗಿ ಯೂರೋಪ್ ಹೋಗುತ್ತಿದ್ದಾರೆ ಎಂದರೆ ಆಧ್ಯಾತ್ಮಿಕ ಜನರು ತಮ್ಮ ಅಜ್ಞಾನದ ಕಾಯಿಲೆಗೆ ಚಿಕಿತ್ಸೆ ಪಡೆಯಲು ಯೂರೋಪ್‌ಗೆ ಹೋಗುವವರು. ಅಲ್ಲಿ ಮಾಹಿತಿ ಪಡೆದು ಭೌತಿಕತೆಯ ಕಾಯಿಲೆಗಳನ್ನು ಸರಿಪಡಿಸುವರು. ಎರಡನೆ ಪ್ರಕರಣವು ಭೌತಿಕ ಕಾಯಿಲೆಗೆ ತುತ್ತಾದ ಯೂರೋಪ್ ಆಧ್ಯಾತ್ಮಿಕ ಚಿಕಿತ್ಸೆಗಾಗಿ ತಯಾರಿ ನಡೆಸುತ್ತಿದೆ. ಈ ಕನಸು ಎಷ್ಟು ಸ್ಪಷ್ಟವಾಗಿದೆ ಎಂದರೆ ಅದಕ್ಕೆ ಯಾವುದೇ ವ್ಯಾಖ್ಯಾನದ ಅವಶ್ಯಕತೆ ಇಲ್ಲ. ಇದೀಗ ನೀವು ಒಂದು ಕಡೆ ಈ ಸ್ವಪ್ನವನ್ನು ಮತ್ತು ಅದರ ಉಲ್ಲೇಖವನ್ನು ಓದಿ, ಮತ್ತೊಂದೆಡೆ ಹಝ್ರತ್ ಖಲೀಫತುಲ್ ಮಸೀಹ್ ಅವರ ಘೋಷಣೆಯನ್ನು ನೋಡಿ, ಯೂರೋಪ್ ಪ್ರವಾಸಕ್ಕೆ ನೀಡಿದ ಉದ್ದೇಶಗಳೇ ಆ ಸ್ವಪ್ನದ ತಿರುಳಾಗಿದೆ. ಅಂದರೆ ಅದು ನಿಜವಾದ ಕನಸು. ಅದು ಈ ಸಂಘಟನೆಯ ಸತ್ಯತೆಗೆ ಒಂದು ಬಲವಾದ ದೃಷ್ಟಾಂತವಾಗಿದೆ. (ವಿಶೇಷವಾಗಿ ಹುಝೂರ್(ರ) ಅವರ ದೇವವಾಣಿಯ ಹೆಸರು "ಉಮರ್" ಎಂದಾಗಿದೆ).

(ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 9 ಅಕ್ಟೋಬರ್ 1924, ಪುಟ-8)

ಈ ದೈವಿಕ ಪ್ರಯಾಣವು ಅಹ್ಮದಿಅತ್‌ಗೋಸ್ಕರ ವಿಜಯದ ಒಂದು ಬೀಜರೂಪವಾಗಿತ್ತು. ಅದನ್ನು ಬೆಳೆಯುತ್ತಿರುವುದನ್ನು ನಾವು ಲೋಕಕದಾದ್ಯಂತ ನೋಡುತ್ತಿದ್ದೇವೆ. ನಾವು ಇದರಲ್ಲಿ ನಮ್ಮ ಕೊಡುಗೆಯನ್ನು ನೀಡುವಂತೆ ಅಲ್ಲಾಹನು ಸೌಭಾಗ್ಯ ದಯಪಾಲಿಸಲಿ. ಅಲ್ಲಾಹನು ನಮಗೆ ಜನಪ್ರಿಯ ಸೇವೆಗಳನ್ನು ಮಡಲು ಅನುಗ್ರಹಿಸಲಿ. ಆಮೀನ್. **(ಮನ್ಸೂರ್ ಅಹ್ಮದ್ ಮಸ್ರೂರ್)**

-------------*****-------------

"ಇದೊಂದು ಮಹತ್ತರವಾದ ಕಾರ್ಯವಾಗಿದ್ದು ಇದ್ದು ಉತ್ತಮ ಫಲಗಳು ಪೀಳಿಗೆಯಿಂದ ಪೀಳಿಗೆಗೆ ಹುಟ್ಟುತ್ತಲೇ ಇರುತ್ತವೆ. ಮತ್ತು ಇತಿಹಾಸವು ಅದರ ಸ್ಮರಣೆಯನ್ನು ತಾಜಾವಾಗಿರಿಸುತ್ತದೆ."

"ಈ ಮಸೀದಿಯು ಕೇಂದ್ರಬಿಂದುವಾಗಿರುತ್ತದೆ. ಇದರಿಂದ ದೈವಪ್ರಕಾಶದ ಕಿರಣಗಳು ಹೊರಬರುತ್ತವೆ ಮತ್ತು ಇಡೀ ಇಂಗ್ಲೆಂಡ್ ಅನ್ನು ಬೆಳಗಿಸುತ್ತದೆ."

# ಮಸ್ಜಿದ್ ಫಝುಲ್ ಲಂಡನ್‌ನ ಶಂಕುಸ್ಥಾಪನೆ, ನಿರ್ಮಾಣ ಮತ್ತು ಉದ್ಘಾಟನೆ

*ಮನ್ಸೂರ್ ಅಹ್ಮದ್ ಮಸ್ರೂರ್*

ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್[ರ] 6 ಜನವರಿ 1920 ಸೋಮವಾರ ದಿನದಂದು ಜಮಾಅತ್‌ನ ಬಾಂಧವರ ಹೆಸರಿನಲ್ಲಿ ಒಂದು ಸಂದೇಶವನ್ನು ರವಾನಿಸಿದರು. ಅದರಲ್ಲಿ ಅವರು ಲಂಡನ್‌ನಲ್ಲಿ ಒಂದು ಮಸೀದಿ ನಿರ್ಮಾಣದ ಅಗತ್ಯತೆ ಮತ್ತು ಅದರ ಪ್ರಾಮುಖ್ಯತೆಯ ಮೇಲೆ ಬೆಳಕು ಚೆಲ್ಲುತ್ತಾ ಅದಕ್ಕಾಗಿ ಮೂವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಲು ಮನವಿ ಮಾಡಿದರು. ಕೇವಲ ಖಾದಿಯಾನ್ ಜಮಾಅತ್ ಹನ್ನೆರಡು ಸಾವಿರ ರೂಪಾಯಿಗಳ ಚಂದವನ್ನು ನೀಡಿದರು. ಅಂದಹಾಗೆ ಇದನ್ನು ನೋಡಿ ಹೀಗೆ ಗುರುದಾಸಪುರ, ಅಮೃತ್ಸರ ಮತ್ತು ಲಾಹೋರ್‌ನಿಂದಲೇ ಮುವತ್ತು ಸಾವಿರ ರೂಪಾಯಿಗಳು ವಸೂಲಾಗಬಹುದು ಮತ್ತು ಉಳಿದ ಜಮಾಅತ್‌ಗಳು ಈ ಪುಣ್ಯಕಾರ್ಯದಿಂದ ವಂಚಿತರಾಗಬಹುದು, ಆದ್ದರಿಂದ ಅವರು[ರ] ಮೂವತ್ತು ಸಾವಿರ ಬದಲು ಒಂದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವ ಯೋಜನೆಯ ಘೋಷಣೆ ಮಾಡಿದರು. ಅಲ್ಲಾಹನ ವಿಧಿಯು ಹುಝೂರ್[ರ] ಅವರಿಗೆ 1924 ರಲ್ಲಿ ಯೂರೋಪ್ ವಿಶೇಷವಾಗಿ ಲಂಡನ್ ಪ್ರವಾಸದ ಭಾಗ್ಯ ನೀಡಿತು. ಮತ್ತು ಇದು ಆದಿಯಿಂದಲೂ ವಿಧಿಯಲ್ಲಿತ್ತು. ಮಸೀಹರ ಖಲೀಫ ಮಸೀಹರ ಉತ್ತರಾಧಿಕಾರಿಯಾಗಿ ಯೂರೋಪ್ ಮತ್ತು ಸೀರಿಯಾದ ಪ್ರವಾಸ ಕೈಗೊಳ್ಳುವನು. ಅದರಿಂದ ಹಲವು ಭವಿಷ್ಯವಾಣಿಗಳು ಪೂರ್ತಿಯಾಗುವುದು. ಹೀಗೆ ಅಲ್ಲಾಹನು ಹುಝೂರ್[ರ] ಅವರ ಶುಭಹಸ್ತದಿಂದಲೇ ಮಸ್ಜಿದ್ ಫಝುಲ್‌ನ ಶಂಕುಸ್ಥಾಪನೆ ನೆರವೇರಿಸಿದನು. 6 ಜನವರಿ 1920 ಕ್ಕೆ ಹೊರಡಿಸಲಾದ ಹುಝೂರ್[ರ] ಅವರ ಐತಿಹಾಸಿಕ ಸಂದೇಶ ಅದು ಮಸ್ಜಿದ್ ಫಝುಲ್ ಲಂಡನ್‌ನ ಚಂದಾಗಾಗಿ ಇತ್ತು. ಅದನ್ನು ಅಲ್ ಫಝುಲ್ ಖಾದಿಯಾನ್ ದಾರುಲ್ ಅಮಾನ್ 22 ಜನವರಿ 1920 ರಲ್ಲಿ ನೋಡಬಹುದಾಗಿದೆ.

9 ಜನವರಿ ಶುಕ್ರವರ ದಿನದಂದು ಇದೇ ವಿಷಯದ ಮೇಲೆ ಹುಝೂರ್[ರ] ಖುತ್‌ಬ ಜುಮುಅ ನೀಡಿದರು. ಜಮಾಅತ್ ಬಾಂಧವರಿಗೆ ಲಂಡನ್‌ನಲ್ಲಿ ಮಸೀದಿ ನಿಮಾಣದ ಅಗತ್ಯ ಮತ್ತು ಪ್ರಾಮುಖ್ಯತೆಯ ಬಗ್ಗೆ ತಿಳಿಸಿದರು. ಅದಕ್ಕಾಗಿ ಚಂದಾ ಸಂಗ್ರಹಿಸಲು ಕರೆ ನೀಡಿದರು. ಈ ಖುತ್‌ಬಬದಿಂದ ಕೆಲವು ಅಧ್ಯಾಪನೆಗಳನ್ನು ನಾವು ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ.

ಹುಝೂರ್[ರ] ಹೇಳಿದರು: ಅಲ್ಲಾಹನ ಅನುಗ್ರಹದಿಂದ ಮತ್ತು ಅವನು ನೀಡಿದ ಭಾಗ್ಯಾನುಸಾರವಾಗಿ ನಾವು ಬಯಸುವುದು ಅದು ಮಿತ್ರರಿಗೆ ತಿಳಿದ ವಿಷಯವೇ ಆಗಿದೆ. ವಿಶೇಷವಾಗಿ ಲಂಡನ್ ಅಥವಾ ಲಂಡನ್ ಬಳಿ ಒಂದು ಮಸೀದಿಯು ನಿರ್ಮಾಣ ಮಾಡಬೇಕು. ಈ ಕುರಿತು ಇಂದಿನಿಂದ ಮೂರು ದಿನಗಳ ಮೊದಲು ಮಗ್ರಿಬ್ ನಂತರ ನಾನು ಖಾದಿಯಾನ್‌ನಲ್ಲಿ ಕರೆ ನೀಡಿದ್ದೆ. ಮತ್ತು ಮೊನ್ನೆಯ ದಿನ ಎಲ್ಲ ಮಿತ್ರರಿಗೆ ಒಟ್ಟುಗೂಡಿಸಿ ವಿಧಿಬದ್ಧ ರೀತಿಯಲ್ಲಿ ವಿನಂತಿಸುತ್ತೇನೆ. ಜುಮುಅ ದಿವಸ ವಿವಿಧ ಪ್ರದೇಶಗಳಿಂದ ಅಹ್ಮದಿ ಮಿತ್ರರು ಜುಮುಅದಲ್ಲಿ ಭಾಗವಹಿಸಲು ಬರುತ್ತಾರೆ. ಆದ್ದರಿಂದ ಅವರ ಗಮನಕ್ಕಾಗಿ ಮತ್ತು ಯಾರಿಗೆ ಇಲ್ಲಿಯವರೆಗೆ ಅವರ ಗಮನಕ್ಕೆ ಬರಲಿಲ್ಲ, ಬಂದರೂ ಸರಿಯಾಗಿ ಆಲಿಸಲಿಲ್ಲ. ಆಲಿಸಿದರೂ ಸರಿಯಾದ ರೀತಿಯಲ್ಲಿ ಆ ಬಗ್ಗೆ ಗಮನಿಸಲಿಲ್ಲ, ಅವರೆಲ್ಲರೂ ಈ ವಿಷಯ ಸರಿಯಾಗಿ ಮನದಟ್ಟು ಮಾಡಲು ಇಂದು ನಾನು ಖುತ್‌ಬ ಜುಮುಅದ ಮೂಲಕ ಗಮನ ಸೆಳೆಯಬಯಸುತ್ತೇನೆ."

ಅವರು[ರ] ಹೇಳಿದರು: ನಾನು ಮಾಡಲು ಖಾದಿಯಾನ್ ಮಿತ್ರರಲ್ಲಿ ಸದರಿ ಚಂದಕ್ಕಾಗಿ ಮನವಿ ಮಾಡಿದ್ದೇನೆ. ಅಂದಹಾಗೆ ಇಲ್ಲಿಯುವರೆಗೆ ಹನ್ನೊಂದು ಸಾವಿರ ರೂಪಾಯಿ ಚಂದಾ ಸಂಗ್ರಹಗೊಂಡಿದೆ. ಅಂದರೆ ಇಡೀ ಲೋಕದ ಅಹ್ಮದಿಯರಿಗೆ ಎಷ್ಟು ಚಂದಾ ನಿಗದಿ ಮಾಡಿದೆವು. ಅದರ ಮೂರನೇ ಭಾಗ ಖಾದಿಯಾನ್‌ನವರು ನೀಡಿದ್ದಾರೆ. ಇದು ಸಂತೋಷದ ವಿಷಯವಾಗಿದೆ. ಮತ್ತು ಈ ಕೇಂದ್ರದ ಜಮಾಅತ್ ಯಾರಿಂದಲೂ ಹಿಂದೆ ಇಲ್ಲ ಎಂಬುದು ಸಾಬೀತುಪಡಿಸಿದಂತಾಗಿದೆ. ಮತ್ತು ಕೇಂದ್ರಬಿಂದುವಾಗಿರುವ ಜಮಾಅತ್‌ನಲ್ಲಿ ನಿಷ್ಠೆ ಪ್ರಧಾನವಾಗಿರುವುದು ಮತ್ತು ಕೇಂದ್ರದಿಂದಲೇ ನಿಷ್ಠೆ ಉತ್ಪನ್ನವಾಗತ್ತದೆ ಎಂಬುದು ತತ್ವವಾಗಿದೆ."

ಅವರು[ರ] ಹೇಳಿದರು: ಇದರಲ್ಲಿ ಯಾವ ಸಂದೇಹವು ಇಲ್ಲ. ನನಗೆ ಪೂರ್ಣ ವಿಶ್ವಾಸವಿದೆ. ಈ ಕಾರ್ಯ ಅಲ್ಲಾಹನು ಬಯಸಿದಂತೆಯೇ ನಡೆಯತೊಡಗಿದೆ. ನನಗೆ ಇಂದಿನವರೆಗೆ ಮೂರು ಪ್ರಮುಖ ಕಾರ್ಯಗಳಲ್ಲಿ ಅಲ್ಲಾಹನ ಸಹಕಾರ ಭಾವನೆ ಮೂಡಿ ಬಂದಿದೆ..... ಮೂರನೇ ಬರಿಗೆ ಇಂದು ಅಲ್ಲಾಹನ ಕೃಪೆ ವ್ಯಕ್ತವಾಗಿದೆ. ಅದರಿಂದ ನನಗೆ ಈ ಕಾರ್ಯ ಅಲ್ಲಾಹನ ಸ್ವೀಕೃತಿ ಪಡೆದಿದೆ ಎಂಬುದು ಖಚಿತವಾಗಿದೆ. ನನಗೆ ನೆನಪಿರುವ ಮಟ್ಟಿಗೆ, ಅದೇನೆಂದರೆ ನಾನು ಮಸ್ಜಿದ್ ಲಂಡನ್‌ನ ವಿಷಯುವನ್ನು ಸರ್ವಶಕ್ತನಾದ ಅಲ್ಲಾಹ್‌ನಲ್ಲಿ ಪ್ರಸ್ತಾಪಿಸುತ್ತಿದ್ದೆ. ನಾನು ಅಲ್ಲಾಹನ ಮುಂದೆ ಕುಳಿತುಕೊಂಡಿದ್ದೇನೆ ಅಲ್ಲಾಹನು ಹೀಗೆ ನುಡಿದನು: ಜಮಾಅತ್‌ಗೆ "ಜದ್" (ಕಷ್ಟಪಟ್ಟು) ಕೆಲಸ ಮಾಡಬೇಕೇ ಹೊರತು "ಹಝುಲ್" (ಆಲಸ್ಯ) ದಿಂದ ಕೆಲಸ ಮಾಡಬಾರದು. "ಜದ್" (ಕಷ್ಟಪಟ್ಟು) ಪದವು ನನಗೆ ಸರಿಯಾಗಿ ನೆನಪಿದೆ. ಅದರ ಎದುರು ಎರಡನೇ ಪದ "ಹಝುಲ್" (ಆಲಸ್ಯ) ಅದೇ ಅವಸ್ಥೆಯಲ್ಲಿ ತಕ್ಷಣವಾಗಿ ನನ್ನ ಹೃದಯದಲ್ಲಿ ಬಂದಿತ್ತು. ಅದರ ಅರ್ಥವೇನೆಂದರೆ ಜಮಾಅತ್ ಈ ಕೆಲಸವನ್ನು ಗಂಭೀರವಾಗಿ ಪರಿಗಣಿಸಬೇಕು. ಮತ್ತು ಉತ್ತಮ ಉದ್ದೇಶ ಹೊಂದಿರಬೇಕು. ಹಗುರವಾಗಿ ಅಥವಾ ಕೇವಲ ಜನರ ಹೊಗಳಿಕೆ (ವಾಹ್ ವಾಹ್) ಗೋಸ್ಕರ ಪ್ರಯತ್ನವಾಗಬಾರದು. ಆದ್ದರಿಂದ ಪ್ರತಿಯೊಬ್ಬ ಉತ್ತಮ ಉದ್ದೇಶ ಹೊಂದಿ ಕೆಲಸ ಮಾಡಬೇಕಾಗಿದೆಯೇ ಹೊರತು ಜನರ ವಾಹ್ ವಾಹ್‌ಗೋಸ್ಕರ ಅಲ್ಲ. ಅಂದಹಾಗೆ ಎಲ್ಲಾ ಮಿತ್ರರು ತಮ್ಮ ನಿಯತ್ತುಗಳನ್ನು ಶುದ್ಧವಾಗಿರಿಸಿಕೊಳ್ಳಬೇಕು. ಮತ್ತು ಪ್ರಾರ್ಥಿಸಬೇಕು, ಅಲ್ಲಾಹನು ಈ ಕಾರ್ಯವನ್ನು ಅನರ್ಥಗೊಳಿಸಬಾರದು. ಬದಲು ಸಾರ್ಥಕಗೊಳಿಸಬೇಕು. ಮತ್ತು ಪ್ರಾರ್ಥಿಸಿರಿ. ಹೆ ಅಲ್ಲಾಹ್, ಈ ಮಸೀದಿ ನಿನ್ನ ಆರಾಧನೆಗಾಗಿ ಸ್ವೀಕೃತಗೊಳ್ಳಲಿ ಮತ್ತು ಲೋಕದ ಜನರ ಸಂಘಟಿತರಾಗಲಿ ಮತ್ತು ಈ ಮೂಲಕ ಇಸ್ಲಾಮ್ ಧರ್ಮ ಪ್ರಚಲಿತಗೊಳ್ಳಲಿ, ನಮ್ಮ ಪ್ರಯತ್ನಗಳು ವ್ಯರ್ಥವಾಗದಿರಲಿ ಮತ್ತು ಇದು ಕೇವಲ ಮಣ್ಣು ಇಟ್ಟಿಗೆಯ ಮಸೀದಿಯಗದಿರಲಿ. "ಹೇ ಅಲ್ಲಾಹ್! ನಮ್ಮ ನಿಯತ್ತುಗಳನ್ನು ಸರಿಪಡಿಸು ಮತ್ತು ನಮಗೆ ನಿನ್ನ ಕೆಲಸವೇ ನೆರವೇರಿಸುವ ಧೈರ್ಯ ಬರುವಂತಾಗಲಿ ಮತ್ತು ಇಸ್ಲಾಂ ಧರ್ಮಕ್ಕೆ ಒಳ್ಳೆಯ ಫಲಗಳನ್ನು ದೊರೆಯುವಂತಾಗಲಿ, ಇಸ್ಲಾಂ ಧರ್ಮ ಲೋಕದಲ್ಲಿ ಎಲ್ಲೆಡೆಯೂ ನಾವು ಹರಡುವುದನ್ನು ನೋಡುವವಮತಾಗಲಿ. ಆಮೀನ್

(ಅಲ್‌ಫಝುಲ್ 22 ಜನವರಿ 1920)

ಈಗ ನಾವು ಮಸೀದಿಯ ಶಂಕುಸ್ಥಾಪನೆ, ನಿರ್ಮಾಣ ಮತ್ತು

ಉದ್ಘಾಟನೆ ಇತ್ಯಾದಿ ಕುರಿತು ಸುದ್ಧಿಗಳು ಅಲಫಝುಲ್‌ನಿಂದ ಕ್ರಮವಾಗಿ ಪ್ರಸ್ತುತಪಡಿಸುವೆವು.

**ಶಂಕು ಸ್ಥಾಪನೆಯ ನಿರ್ಣಯ**

ಲಂಡನ್‌ನಿಂದ ಹಝ್ರತ್ ಮೌಲಾನ್ ಶೇರ್ ಅಲಿ ಸಾಹಿಬ್[ರ] ಅವರಿಗೆ ಹುಝೂರ್[ರ] ರವರ ತಂತಿ ಸಂದೇಶ ತಲುಪಿತು:

"ಪಟ್ನಿಯಲ್ಲಿ ಮಸೀದಿಯ ಶಂಕುಸ್ಥಾಪನೆ ಮಾಡಲು ನಿರ್ಣಯ ಕೈಗೊಳ್ಳಲಾಗಿದೆ. ಸದ್ಯ ಬರ್ಲಿನ್ ಫಂಡ್‌ನಿಂದ ಹಣ ಸಾಲ ರೂಪದಲ್ಲಿ ಪಡೆಯಲಾಗಿದೆ. ನನ್ನ ಭಾವನೆಯಲ್ಲಿ ಅಲ್ಲಾಹನು ನನಗೆ ಈ ದೇಶಗಳಲ್ಲಿ ಕಳುಹಿಸುವ ಉದ್ದೇಶಗಳಲ್ಲಿ ಒಂದು ಉದ್ದೇಶ ಲಂಡನನಲ್ಲಿ ಮಸೀದಿಯ ಶಂಕುಸ್ಥಾಪನೆಯು ಒಂದಾಗಿದೆ."
(ಅಲ್‌ಫಝುಲ್ 23, ಅಕ್ಟೋಬರ್ 24 ಪುಟ-1)

**19 ಅಕ್ಟೋಬರ್ ಶಂಕುಸ್ಥಾಪನೆ ನೆರವೇರಿಸುವ ಯೋಜನೆ**

16 ಅಕ್ಟೋಬರ್ 1924, 12 ಗಂಟೆ 15 ನಿಮಿಷಕ್ಕೆ ಲಂಡನ್‌ನಿಂದ ಹಝ್ರತ್ ಖಲೀಫತುಲ್ ಮಸೀಹ್ ಎರಡನೇ ಅವರ ತಂತಿ ಸಂದೇಶ ಹಝ್ರತ್ ಮೌಲಾನ ಶೇರ್ ಅಲಿ ಸಾಹಿಬ್ ಅವರಿಗೆ ರವಾನೆಯಾಯಿತು. ಅದು 17 ಅಕ್ಟೋಬರ್ ರಂದು ಬಟಾಲ ಮತ್ತು ಅದೇ ದಿನ ಖಾದಿಯಾನ್‌ಗೆ ತಲುಪಿತು.

ಹುಝೂರ್[ರ] ಬರೆದಿದ್ದರು: ಅಲ್ಲಾಹನ ಅನುಗ್ರಹದಿಂದ ಲಂಡನ್‌ನಲ್ಲಿ ಮೊದಲ ಮಸೀದಿಯ ಶಂಕುಸ್ಥಪನೆ 19 ಅಕ್ಟೋಬರ್ ರವಿವಾರದಂದು ಸಂಜೆ 4 ಗಂಟೆಗೆ ನೆರವೇರಲಿದೆ. ಎಲ್ಲಾ ಅಹ್ಮದಿಯರಲ್ಲಿ ಪ್ರಾರ್ಥಿಸಲು ಕೋರಲಾಗುತ್ತದೆ. (ಅಲ್‌ಫಝಲ್ ಖಾದಿಯಾನ್, 21 ಅಕ್ಟೋಬರ್ 1924, ಪುಟ-2)

"ಮಸ್ಜಿದ್ ಫಝುಲ್ ಲಂಡನ್ ಶಂಕುಸ್ಥಾಪನೆಯ ಸಮಾರಂಭ ದಿನ 19 ಅಕ್ಟೋಬರ್ ರಾತ್ರಿ 9 ಗಂಟೆಗೆ ಖಾದಿಯಾನ್ ದಾರುಲ್ ಅಮಾನ್‌ನ ಎಲ್ಲಾ ಮಸೀದಿಗಳಲ್ಲಿ ಅತ್ಯಂತ ನಿಷ್ಠೆ, ಆತ್ಮೀಯತೆಯಿಂದ ಪ್ರಾರ್ಥನೆ ಮಾಡಲಾಯಿತು.
(ಅಲಫಝುಲ್, 23 ಅಕ್ಟೋಬರ್ 1924, ಪುಟ-1)

**ಶಂಕುಸ್ಥಾಪನೆ ಮತ್ತು ಹುಝೂರರ್ ಭಾಷಣ ಗಣ್ಯರ ಭಾಗವಹಿಸುವಿಕೆ ಮತ್ತು ಅವರ ಅನಿಸಿಕೆಗಳು**

ಮೇಲಿನ ಶೀರ್ಷಿಕೆ ಅದನ್ನು ನಾವು ಸಂಕ್ಷಿಪ್ತಗೊಳಿಸಿದ್ದೇವೆ. ಅದರನ್ವಯ ಅಲ್‌ಫಝುಲ್ ಖಾದಿಯಾನ್ 25 ಅಕ್ಟೋಬರ್ 1924 ರಲ್ಲಿ ಹೀಗೆ ಸುದ್ಧಿ ಪ್ರಸಾರವಾಯಿತು.

"ಹಝ್ರತ್ ಖಲಿಫತುಲ್ ಮಸೀಹ್[ಅತಬಿಅ] ರವಿವಾರ ದಿನಾಂಕ: 19 ಅಕ್ಟೋಬರ್ 1924, 63 ಮೇಲ್ ರೋಝ್ ರೋಡ್ ಲಂಡನ್‌ನಲ್ಲಿ ಮೊದಲ ಮಸೀದಿಯ ಅಡಿಗಲ್ಲು 4 ಗಂಟೆ ಸಂಜೆ ಹಾಕಲಾಯಿತು. ಮೊಟ್ಟ ಮೊದಲಾಗಿ ಇಮಾಮ್ ಮಸ್ಜಿದ್ ಅವರು ಒಂದು ಸಂಕ್ಷಿಪ್ತ ಸ್ವಾಗತ ಭಾಷಣ ಓದಿದರು. ನಂತರ ಜನರು ಅಡಿಗಲ್ಲು ಹಾಕುವದೆಡೆಗೆ ಆಗಮಿಸಿದರು. ಅಲ್ಲಿ ಸಂಕ್ತಿಪ್ತ ಪವಿತ್ರ ಖುರ್‌ಆನ್‌ನ ಪಾರಾಯಣದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಭಾಷಣ ಮಾಡಿದರು. ಹೇಳಿದರು: ಮಸೀದಿಯು ದೇವರ ಮನೆಯಾಗಿದೆ, ಇಲ್ಲಿ ವಿಶ್ವಾಸ ಭಿನ್ನತೆಯ ಕಾರಣದಿಂದ ಯಾರಿಗೂ ತೊಂದರೆ ಕೊಡುವ ಅಥವಾ ಇಲ್ಲಿಂದ ಹೊರದೂಡುವ ಹಕ್ಕಿರುವುದಿಲ್ಲ. ನಾನು ಬಯಸುವುದು ಮತ್ತು ಇಡೀ ಲೋಕದಲ್ಲಿ ಘೋಷಿಸಬಯಸುವುದೇನೆಂದರೆ ಈ ಮಸೀದಿಯು ಏಕದೇವನ ಆರಾಧನೆಗಾಗಿ ನಿರ್ಮಿಸಲಾಗಿದೆ, ನಾವು ಯಾವ ವ್ಯಕ್ತಿಯನ್ನು ಸಹ ಅಲ್ಲಾಹನ ಆರಾಧನೆ ಮಾಡುವುದರಿಂದ ತಡೆಯಲಾರೆವು, ಶರತ್ತೇನೆಂದರೆ ಈ ಮಸೀದಿಯ ವ್ಯವಸ್ಥೆಗೋಸ್ಕರ ಗುರುತಿಸಲಾದ ನಿಯಮಗಳನ್ನು ಉಲ್ಲಂಘಿಸಬಾರದು. ಮತ್ತು ಜನರ ಆರಾಧನೆಯಲ್ಲಿ ಆತಂಕ ಒಡ್ಡಬಾರದು ಮತ್ತು ಮಸೀದಿ ನಿರ್ವಾಹಕರಿಗೆ ತೊಂದರೆಯಾಗಬಾರದು.

ಅನಂತರ ಹುಝೂರ್[ರ] ಹೇಳಿದರು. ನನ್ನ ವಿಶ್ವಾಸ ಮತ್ತು ನಂಬಿಕೆ ಇದೆ. ಈ ಮಸೀದಿಯ ಎಲ್ಲಾ ಜಗಳ ತಂಟೆಗಳನ್ನು ದೂರ ಮಾಡಲು ಮತ್ತು ಜನರಲ್ಲಿ ಪ್ರೀತಿ, ಶಾಂತಿ ಉಂಟು ಮಾಡಲು ಸಹಾಯಕವಾಗುವುದು. ಅಹ್ಮದಿಯಾ ಜಮಾಅತ್ ಅಲ್ಲಾಹನ ಕೃಪೆಯಿಂದ ಎಲ್ಲಿಯವರೆಗೆ ಎಲ್ಲಾ ರೀತಿಯ ಸಾಂಸ್ಕೃತಿಕ ಮತ್ತು ರಾಜಕೀಯ ಜಗಳಗಳನ್ನು ಕೊನೆಗೊಳಿಸಿ ಪ್ರೀತಿಯನ್ನು ಉಂಟು ಮಾಡುವುದಿಲ್ಲವೋ, ಅಹಮಿದಯಾ ಜಮಾಅತ್ ಎಲ್ಲಾ ರೀತಿಯ ತ್ಯಾಗ ಮಾಡಲು ಸಿದ್ಧವಿದೆ.

ಈ ಸಮಾವೇಶದಲ್ಲಿ ವಿವಿಧ ದೇಶಗಳ ಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು. ಉದಾಹರಣೆಗೆ ಬ್ರಿಟಿಷರು, ಜಪಾನಿಯರು, ಜರ್ಮನ್, ನರ್ವಿಯನ್, ಝೆಕೋಸ್ಲೋವಿಯಾ, ಎಸ್ಥೋನಿಯಾ, ಈಜಿಪ್ಟ್, ಅಮೇರಿಕಾ, ಇಟಲಿ, ಹಂಗೇರಿ, ಮತ್ತು ಭಾರತೀಯರು, ಅದಲ್ಲದೇ ವಿವಿಧ ಧರ್ಮಗಳ ಜನರು ಕ್ರೈಸ್ತರು, ಮುಸಲ್ಮಾನರು, ಪಾರ್ಸಿ ಮತ್ತು ಯಹೂದಿಯರೂ ಇದ್ದರು. ಮಳೆಯಿಂದ ದಿನಗಳಿದ್ದರು ಎರಡು ನೂರಕ್ಕಿಂತ ಹೆಚ್ಚು ಗಣ್ಯ ಮಾನ್ಯ ವ್ಯಕ್ತಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಹೆಚ್ಚಿನವರು ಬ್ರಿಟಿಷರಾಗಿದ್ದರು. ಅವರಲ್ಲಿ ಕೆಳಗೆ ನಮೂದಿಸಿದ ಜನರು ವಿಶೇಷವಾಗಿ ವಿವರಕ್ಕೆ ಅರ್ಹರಾಗಿದ್ದಾರೆ. ಸರ್ ಇಲೆಕ್ಸಡರ್ ಡೆಕ್, ಏರ್ಡ್‌ಸವರ್ಥ್ ಮೇಯರ್‌ರು, ಲೇಡಿ ಬಾಸೋಕ್, ಮಿಸ್ಟರ್. ಎನ್.ಸಿ ಸೇನ್. ಡಾ॥ ಲೆವಿನ್ ಮತ್ತು ಲೆಡಿ ಲೆವಿನ್. ಇವರುಗಳಲ್ಲದೆ ಬೇರೆ ರಾಜ್ಯಗಳಿಂದ ಕೆಳಗೆ ನಮೂದಿಸಿದ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ ಹೆಚ್ಚಿನವರು ಬ್ರಿಟಿಷರಾಗಿದ್ದರು. ಅವರಲ್ಲಿ ಕೆಳಗೆ ನಮೂದಿಸಿದ ಜನರು ವಿಶೇಷವಾಗಿ ವಿವರಕ್ಕೆ ಅರ್ಹರಾಗಿದ್ದಾರೆ. ಸರ್ ಇಲೆಕ್ಸಡರ್ ಡೆಕ್, ವರ್ಡ್‌ಸಮರ್ಥ್ ಮೇಯರ್, ಲೆಡಿ ಬಾಸೋಕ್, Mrs. N.C.ಸೇನ್, ಡಾ॥ ಲೆವಿನ್ ಮತ್ತು ಲೆಡಿ ಲೆವೀನ್. ಇವರುಗಳಲ್ಲದೆ ಬೇರೆ ರಾಜ್ಯಗಳಿಂದ ಕೆಳಗೆ ನಮೂದಿಸಿದ ಪ್ರತಿನಿಧಿಗಳು ಭಾಗವಹಿಸಿದ್ದರು. ಬೇರನ್ ಹಮಾಫಿ ತನ್ನ ಮಗಳೊಂದಿಗೆ, ಜರ್ಮನ್ ರಾಯಭಾರಿ ಎಸ್ಥೋನಿಯಾ ಮತ್ತು ಸರ್ವೆಯ ಮಂತ್ರಿ ಮತ್ತು ಝೆಕೋ ಸಲ್ವೆಯ ಪ್ರತಿನಿಧಿ,ಮ ತುರ್ಕಿ, ಅಲ್ಬಾನಿಕಯಾ ಮತ್ತು ಫಿನ್‌ಲ್ಯಾಂಡ್‌ನ ಮಂತ್ರಿಗಳು ತಮ್ಮ ಸಂದೇಶಗಳನ್ನು ಕಳುಹಿಸುವ ಮೂಲಕ ಸಹಾನುಭೂತಿ ವ್ಯಕ್ತಪಡಿಸಿದರು. ಅವರುಗಳ ಅನಾರೋಗ್ಯದ ಕಾರಣ ಭಾಗವಹಿಸಲಾಗಲಿಲ್ಲ. ಇಂಗ್ಲೆಂಡಿನ ಮೂರು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಹ ಸಹಾನುಭೂತಿಉ ವ್ಯಕ್ತಪಡಿಸಿದರು. ಅವರು ಚುನಾವಣೆ ಕಾರ್ಯ ನಿಮಿತ್ತ ಬರಲಾಗಲಿಲ್ಲ. ಪ್ರಧಾನ ಮಂತ್ರಿಗಳು ಆಮಂತ್ರಣದ ನಿಮಿತ್ತ ಕೃತಜ್ಞತೆ ವ್ಯಕ್ತಪಡಿಸುತ್ತಾ ಬರೆದರು. ಈ ದಿನ ಲಂಡನ್‌ನಲ್ಲಿ ಇರದ ಕಾರಣ ಭಾಗವಹಿಸದಿದ್ದುದಕ್ಕೆ ವಿಷಾದವಿದೆ.

ತಮ್ಮ ಭಾಷಣದ ನಂತರ ಹಝ್ರತ್ ಖಲೀಫತುಲ್ ಮಸೀಹ್[ರ] ಅವರು ಶಂಕುಸ್ಥಾಪನೆ ಕಾರ್ಯ ನೆರವೇರಿಸಿದರು. ಈ ಸಂದರ್ಭದಲ್ಲಿ 12 ಕ್ಕಿಂತ ಹೆಚ್ಚು ಪೋಟೋಗ್ರಾಫರ್‌ಗಳ ಫೋಟೋ ಪಡೆದರು. ಅನಮತರ ಸಿನಿಮಾ ಕಂಪನಿಯವರು ಮೊದಲು ಮಾತನಾಡಿದರು. ಪ್ರಾರ್ಥನೆ ಆದ ನಂತರ ಫೋಟೋ ಪಡೆದರು. ಅದೇ ಸಮಯ ಅದೇ ಜಾಗದಲ್ಲಿ ಉಪಸ್ಥಿತರಿಗೆ ಚಹಾ ಆಮಂತ್ರಣ ನೀಡಲಾಯಿತು.

ಹಝ್ರತ್ ಖಲೀಫತುಲ್ ಮಸೀಹ್[ರ] ಅವರು ಶಂಕುಸ್ಥಾಪನೆ ನೆರವೇರಿಸಿದ ಮೇಲೆ ನಾನು ಅವರ ತಂತಿಸಂದೇಶ ಎತ್ತರದ ಧ್ವನಿಯಲ್ಲಿ ಓದಿ ಹಝ್ರತ್ ಖಲಿಫತುಲ್ ಮಸೀಹರಿಗೆ ತಿಳಿಸಿದೆ. (ಈ ತಂತಿಸಂದೇಶ ಹಝ್ರತ್ ಮೌಲಾನಾ ಶೇರ್ ಅಲಿ ಸಾಹಿಬ್, ಜಮಾಅತ್ ವತಿಯಿಂದ ಈ ಸಮಾರಂಭದ ಶುಭಾಶಯಕ್ಕಾಗಿ ಕಳುಹಿಸಿದ್ದರು. ಜನರಲ್ಲಿ ಎಂತಹ ಆಸಕ್ತಿ ಮೂಡಿತು ಎಂದರೆ ಎಷ್ಟೋ ಹೊತ್ತಿನವರೆಗೆ ಜನರು ಅಲ್ಲೇ ನಿಂತಿದ್ದರು. ಅವರಲ್ಲಿ ಮಂತ್ರಿಗಳು ಸಹ ಭಾಗವಿಸಿದ್ದರು. ಅವರು ಹಝ್ರತ್ ಸಾಹಿಬ್ ಮತ್ತು ಹುಝೂರ್[ರ] ಅವರ ಸಹಾಯಕರೊಂದಿಗೆ ಮಾತನಾಡುತ್ತಿದ್ದರು. ಅವರು ಸಂಘಟನೆಯ ಪ್ರತಿ ಆಳವಾದ ಆಸಕ್ತಿ ವ್ಯಕ್ತಪಡಿಸಿದರು ವರ್ಡ್‌ವರ್ಥ್‌ನ ಮೇಯರ್‌ರು ಹೇಳಿದರು. ಯಾವ ಧರ್ಮವೇ ಇರಲಿ. ಈ ಭಾಷಣದ ಯಾವ ಭಾಗದ ಮೇಲೂ ಆಕ್ಷೇಪವೆತ್ತದೆ ಅದು ಧರ್ಮವೇ ಆಗಿರಲಿಕ್ಕಿಲ್ಲ. ಬರೆಯುವ

ದೇವದೂತರು ಈ ಭಾಷಣವನ್ನು ಅಳಿಸಲಾಗದ ಶಾಯಿಯಲ್ಲಿ ಮುಳುಗಿಸಿ ಬರೆಯುವನು. ರ್ಯುಕೋ ಸೆಲ್ವಿಯದ ಪ್ರತಿನಿಧಿ ಹೇಳಿದರು: ನನಗೆ ಅತೀವ ಸಂತೋಷವಾಗುತ್ತಿದೆ. ನಾನು ಇಂತಹ ಅದ್ಭುತ ವಿಚಾರಗಳನ್ನು ಮೊದಲ ಬಾರಿಗೆ ಆಲಿಸುವ ಅವಕಾಶ ದೊರೆತಿದೆ."

(ಅಲ್‌ಫಝಲ್ ಖಾದಿಯಾನ್ 25 ಅಕ್ಟೋಬರ್ 1924)

ಹುಝೂರ್(ರ) ಅವರು ಇಂಗ್ಲೀಷ್‌ನಲ್ಲಿ ಪ್ರಬಂಧ ಓದಿದ್ದರು. ಪ್ರಬಂಧದ ಸಂಪೂರ್ಣ ಉರ್ದು ಅನುವಾದ 20 ನವೆಂಬರ್ 2024 ರ ಅಲ್‌ಫಝಲ್ ಖಾದಿಯಾನ್‌ನಲ್ಲಿ ಪುಟ-4 ರಲ್ಲಿ ನೋಡಬಹುದಾಗಿದೆ.

**ಲಂಡನ್‌ನಲ್ಲಿ ಮಸೀದಿಯ ಶಂಕುಸ್ಥಾಪನೆ**

ಈ ಶೀರ್ಷಿಕೆಯೊಂದಿಗೆ ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್ 15 ನವೆಂಬರ್ 1924 ಪುಟ 6 ರಲ್ಲಿ ಈ ಸುದ್ದಿ ಪ್ರಸಾರಗೊಂಡಿದೆ.

19 ಅಕ್ಟೋಬರ್ 1924 ರಂದು 4 ಗಂಟೆಗೆ ಹಝ್‌ರತ್ ಖಲೀಫತುಲ್ ಮಸೀಹ್ ಲಂಡನ್‌ನಲ್ಲಿ ಅಹ್ಮದಿಯಾ ಮಸೀದಿಗೆ ಅಡಿಗಲ್ಲು ಹಾಕಿದರು. ಇದು ಲಂಡನ್‌ನಲ್ಲಿ ಅಲ್ಲ, ಇಂಗ್ಲೆಂಡ್‌ನಲ್ಲಿ ಅಲ್ಲ, ಬದಲು ಯೂರೋಪ್‌ನಲ್ಲಿ ಮೊದಲ ಮಸೀದಿ ಆಗಿರುವುದು. ಈ ಪೈಕಿ ಇದಕ್ಕಿಂತ ಮೊದಲು ಯಾವುದೇ ಮಸೀದಿ ಇದ್ದರೂ ಅದು ಮುಸಲ್ಮಾನರು ನಿರ್ಮಿಸಿದ ಮಸೀದಿ ಅಲ್ಲ. ವೋಕಿಂಗ್‌ನ ಮಸೀದಿ ಡಾ. ಮಾನ್ವೇಝ್ ಅವರು ಒಂದು ಅದ್ಭುತ ಎಂದೆಣಿಸಿ ನಿರ್ಮಿಸಿದ್ದನು. ಹೊರತು ಮಸೀದಿಯ ಅಗತ್ಯಕ್ಕಲ್ಲ. ಆದ್ದರಿಂದ ಒಟ್ಟಿನಲ್ಲಿ ಇದು ಮೊದಲನೇ ಇಸ್ಲಾಮಿ ಮಸೀದಿಯಾಗಿದೆ. ಆ ಮಸೀದಿಯ ಗೋಡೆಬರಹ ಹೀಗಿದೆ. ಈ ಬರಹ ಹಝ್‌ರತ್ ಅಖದ್ದಸ್ ಅವರು ಸ್ವತಃ ತಮ್ಮ ಕೈಯಿಂದ ಇಂಗ್ಲೀಷ್ ಅನುವಾದದೊಂದಿಗೆ ಬರೆದಿದ್ದಾರೆ. (ಇರ್ಫಾನಿ).

ಬಿಸ್ಮಿಲ್ಲಾಹಿರ್ರಾಹ್ಮಾನ್ ನಿರ್ರಹೀಮ್

**ನಹ್ಮದಹೂ ವ ನುಸಲ್ಲಿ ಅಲಾ ರಸೂಲಿಹಿಲ್ ಕರೀಮ್**

ಖುದಾ ಕೆ ಫಝಲ್ ಔರ್ ರೆಹೆಮ್ ಕೆ ಸಾಥ್

ಹುವನ್ನಾಸಿರ್

**ಖುಲ್ ಇನ್ನಸ್ಸಲಾತಿ ವ ನುಸುಕಿ ವ ಮಹ್‌ಯಾಯಾ ವ ಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್-**

ನಾನು ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ ಖಲೀಫರು), ಇಮಾಮ್ ಜಮಾಅತ್ ಅಹ್ಮದಿಯ ಕೇಂದ್ರ ಖಾದಿಯಾನ್ (ಪಂಜಾಬ್) ಭಾರತ ಆಗಿರುತ್ತೇನೆ. ಅಲ್ಲಾಹನ ಸಂತೃಪ್ತಿ ಪಡೆಯಲು ಮತ್ತು ಇಂಗ್ಲೆಂಡಿನಲ್ಲಿ ಅಲ್ಲಾಹನ ನಾಮ ಉತ್ತುಂಗಕ್ಕೇರಿಸುವ ಉದ್ದೇಶಕ್ಕಾಗಿ ಮತ್ತು ಇಂಗ್ಲೆಂಡಿನ ಜನರೂ ಸಹ ನಾವು ಪಡೆದ ಅಲ್ಲಾಹನ ಅನುಗ್ರಹದಿಂದ, ಅನುಗ್ರಹಗಳನ್ನು ಪಡೆಯಲು ಇಂದು 11 ರಬೀಉಲ್ ಅವ್ವಲ್ 1343 ಹಿಜರಿ ರಂದು ಈ ಮಸೀದಿಗೆ ಅಡಿಗಲ್ಲು ಹಾಕುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ. ಅಹ್ಮದಿಯಾ ಜಮಾಅತಿನ ಎಲ್ಲಾ ಪುರುಷರ ಮತ್ತು ಮಹಿಳೆಯರ ಈ ವಿನಮ್ರ ಪ್ರಯತ್ನವನ್ನು ಸ್ವೀಕಾರವಾಗಲಿ. ಈ ಮಸೀದಿಯ ಜನಸಂಖ್ಯೆ ಹೆಚ್ಚಿಸುವಂತಾಗಲಿ ಮತ್ತು ಈ ಮಸೀದಿಯನ್ನು ಶಾಶ್ವತವಾಗಿ ಒಳ್ಳೆಯತನ, ಧರ್ಮನಿಷ್ಠೆ, ನ್ಯಾಯ ಮತ್ತು ಪ್ರೀತಿಯ ಭಾವನೆಗಳನ್ನು ಹರಡುವ ಕೇಂದ್ರವಾಗಿರಲಿ, ಮತ್ತು ಈ ಸ್ಥಳವು ಹಝ್‌ರತ್ ಮುಹಮ್ಮದ್ ಮುಸ್ತಫಾ ಖಾತಮನ್ನ ಬಿಯೀನ್(ಸ) ಮತ್ತು ಅವರ ಪ್ರತ್ಯಕ್ಷರೂಪವಾಗಿರುವ ಹಝ್‌ರತ್ ಅಹ್ಮದ್ ಮಸೀಹ್ ಮೌಊದ್ ನಬಿಯುಲ್ಲಾಹ್ ಅಲೈಹಿಸ್ಸಲಾಮ್ ಅವರ ಪ್ರಕಾಶಿತ ಕಿರಣಗಳನ್ನು ಈ ದೇಶ ಹಾಗೂ ಇತರ ದೇಶಗಳಲ್ಲಿ ಹರಡುವ ಸಲುವಾಗಿ ಆಧ್ಯಾತ್ಮಿಕ ಸೂರ್ಯನ ಕಾರ್ಯ ಮಾಡುವಂತಾಗಲಿ. ಹೇ ಅಲ್ಲಾಹ್ ಹಾಗೆಯೇ ಮಾಡು. 19 ಅಕ್ಟೋಬರ್ 1924. ಇಂತಿ." (ಅಲ್‌ಫಝಲ್ ಖಾದಿಯಾನ್ 15 ನವೆಂಬರ್ 1924, ಪುಟ-6)

**ಮಸೀದಿಯ ಸಲುವಾಗಿ ಹುಝೂರ್(ರ) ಅವರ ಪ್ರಾರ್ಥನೆ**

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ವೆನ್ಸ್ (ಇಟಲಿ) ಯಲ್ಲಿ ಹಡಗಿನಲ್ಲಿ ಕುಳಿತುಕೊಳ್ಳುವುದಕ್ಕಿಂತ ಕೆಲವು ಗಂಟೆ ಮುಂಚೆ, ಅಲ್‌ಫಝಲ್‌ನಲ್ಲಿ ಪ್ರಕಟಿಸಲು ತಮ್ಮ ಹಸ್ತದಿಂದ ಬರೆದ ಬರಹದ ಒಂದು ತುಣುಕು ಅದು ಮಸ್ಜಿದ್ ಫಝಲ್ ಲಂಡನ್ ಪೈಕಿಯಾಗಿದೆ ಓದುಗರಿಗೆ ಅರ್ಪಿಸುತ್ತಿದ್ದೇನೆ. ಹುಝೂರ್(ರ) ಬರೆಯುತ್ತಾರೆ:

ಹೇ ಅಲ್ಲಾಹ್, ನಾನು ಲಂಡನ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದ ಆ ಮಸೀದಿಯನ್ನು ಅನುಗ್ರಹಿತನನ್ನಾಗಿ ಮಾಡು ಮತ್ತು ಅದನ್ನು ಶೀಘ್ರ ಪೂರ್ಣಗೊಳಿಸುವ ಭಾಗ್ಯ ದಯಪಾಲಿಸು, ಮತ್ತು ಈ ಕಟ್ಟಡದ ಸ್ಥಳವು ಉನ್ನತ ದರ್ಜೆ ಅನುಗ್ರಹಕ್ಕೆ ಪಾತ್ರರಾಗಿರಲಿ, ಜನರಿಗೆ ಇದರಿಂದ ನಿಜವಾದ ಸಾತ್ವಿಕತೆ ಮತ್ತು ನಿಜವಾದ ಶಾಂತಿ ದೊರೆಯುವಂತಾಗಲಿ, ಅದರಲ್ಲಿ ಯಾವುದೇ ರೀತಿಯ ಅಸಮಾಧಾನ ಅಥವ ಅನುಮಾನಗಳು ಇರದಿರಲಿ.

(ಅಲ್‌ಪಝಲ್, ಖಾದಿಯಾನ್ 30 ಏಪ್ರಿಲ್ 1925, ಪುಟ-2)

**ನಿರ್ಮಾಣ ಕಾರ್ಯ**

ಮಸ್ಜಿದ್ ಲಂಡನ್‌ನ ನಿರ್ಮಾಣದ ಪ್ರಾರಂಭಿಕ ಕಾರ್ಯಗಳು ಆರಂಭವಾಗಿವೆ. (ಅಲ್‌ಫಝಲ್ ಖಾದಿಯಾನ್ 13, 15 ಆಗಸ್ಟ್ 1925, ಪುಟ-1)

**ಮಸೀದಿಯ ನಿರ್ಮಾಣ ಪ್ರಾರಂಭಗೊಂಡಿದೆ**

ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್ 3 ಅಕ್ಟೋಬರ್ 1925 ಪುಟ 2 ರಲ್ಲಿ ಈ ಸುದ್ದಿ ಪ್ರಸಾರಗೊಂಡಿದೆ.

"ಅಲ್ಲಾಹನ ಅನುಗ್ರಹದಿಂದ ಮಸ್ಜಿದ್ ಅಹ್ಮದಿಯಾ ಲಂಡನ್‌ನ ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದೆ. ಆ ಸುದ್ದಿಯ ವರದಿಗಾರನು ಈ ನಿಗದಿತ ಪದಗಳಲ್ಲಿ ಕೆಳಗಿನ ಪತ್ರಿಕೆಗಳಿಗೆ ಕಳುಹಿಸಿದೆ.

"ಲಂಡನ್ 18 ಸೆಪ್ಟೆಂಬರ್ ಇಂದು ಮುಂಜಾನೆ ಈ ಮೊದಲನೇ ಮಸೀದಿಯ ನಿರ್ಮಾಣ ಸೌಥ್‌ಫೀಲ್ಡ್ ಲಂಡನ್‌ನಲ್ಲಿ ಪ್ರಾರಂಭವಗಿದೆ. ಅದರ ಅಡಿಗಲ್ಲು ಹಿಂದಿನ ದಿನಗಳಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ತಮ್ಮ ಹಸ್ತದಿಂದ ಹಾಕಿದ್ದರು. ಈ ಸಂದರ್ಭದಲ್ಲಿ ಇಮಾಮ್ ಜಮಾಅತ್ ಅಹ್ಮದಿಯಾ ಲಂಡನ್ ಈ ಕಾರ್ಯದ ಪ್ರಾರಂಭಕ್ಕಿಂತ ಮುಂಚೆ ಅರಬಿ ಭಾಷೆಯಲ್ಲಿ ಒಂದು ಖುತ್‌ಬ ನೀಡಿದರು. ಅದರಲ್ಲಿ ವಿಶೇಷವಾಗಿ ಅಬ್ದುಲ್ ಮಿಲ್ಲತ್ ಹಝ್‌ರತ್ ಇಬ್ರಾಹಿಂ ಅಲೈಹಿಸ್ಸಲಾಮ್ ಕಅಬ ಭವನದ ನಿಮಾಣದ ಸಮಯ ಓದಿದ್ದನ್ನು ಓದಿದರು. ಅನಂತರ ಇಮಾಮ್ ಜಮಾಅತ್ ಲಂಡನ್ ಮತ್ತು ಇತರ ಅಹ್ಮದಿ ಸದಸ್ಯರು ತಮ್ಮ ಹಸ್ತಗಳಿಂದ ಅರ್ಧ ತಾಸಿನವರೆಗೆ ಬುನಾದಿಯನ್ನು ತೋಡುವುದರ ಜೊತೆಯಲ್ಲಿ ಈ ಪ್ರಾರ್ಥನೆಗಳನ್ನು ಸಹ ಪಠಿಸುತ್ತಿದ್ದರು. ಅದು ಮುಹಮ್ಮದ್(ಸ) ಮತ್ತು ಅವರ ಸಹಾಬಿಗಳು(ರ) ಮದೀನಾ ಮಸೀದಿಯ ನಿರ್ಮಾಣ ಸಮಯದಲ್ಲಿ ಪಠಿಸಿದ್ದರು. (ಅಲ್‌ಫಝಲ್ ಖಾದಿಯಾನ್ 3 ಅಕ್ಟೋಬರ್ 1925, ಪುಟ-2)

**ಬುನಾದಿ ತೋಡುವ ಕಾರ್ಯ ಪ್ರಾರಂಭಿಸಲಾಯಿತು**

ಅಲ್‌ಫಝಲ್ ಖಾದಿಯಾನ್ 22, 24 ಅಕ್ಟೋಬರ್ 1925 ಪ್ರಥಮ ಪುಟದ ಮೇಲೆ ಮಾನ್ಯ ಮೌಲಾನ ಅಬ್ದುರ್ ರಹೀಮ್ ನೈಯರ್ ಸಾಹಿಬ್ ಅವರಿಂದ ಈ ವರದಿ ಪ್ರಕಟಣೆಗೊಂಡಿತು.

ಅಲ್ಲಾಹನ ಅಪಾರ ಅನುಗ್ರಹದಿಂದ 28 ಸೆಪ್ಟೆಂಬರ್ 1925 ಸೋಮವಾರ ದಿನದ 11 ಗಂಟೆಗೆ ಮಸ್ಜಿದ್ ಲಂಡನ್‌ನ ಬುನಾದಿ ತೋಡುವ ಕಾರ್ಯ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಪತ್ರಿಕೆಗಳ ವರದಿಗಾರರು ಹಾಜರಾಗಿದ್ದರು. ಕಾರ್ಯ ಪ್ರಾರಂಭಗೊಳ್ಳುವ ಮುಂಚೆ ನಾನು ಈ ಶುಭ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರೊಂದಿಗೆ ಖಿಬ್ಲದ ಕಡೆಗೆ ತಿರುಗಿ ದುಆ ಮಾಡಿರುವೆನು. ನಾನು ದುಆ ಮಾಡುತ್ತಿರುವಾಗ ಜೊತೆಯಲ್ಲಿರುವವರು ಆಮೀನ್ ಎಂದು ಉಚ್ಚರಿಸುತ್ತಿದ್ದರು. ಅನಂತರ ನಾವು ತಮ್ಮ ಕೈಗಳಿಂದ ನೆಲ ತೋಡುತ್ತಿದ್ದೆವು. ಮತ್ತು ಜೊತೆ ಜೊತೆಯಲ್ಲಿ ಪ್ರಾರ್ಥಿಸುತ್ತಿದ್ದೆವು. ಹಝ್‌ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಮತ್ತು ಹಝ್‌ರತ್ ಇಸ್ಮಾಯಿಲ್ ಅಲೈಹಿಸ್ಸಲಾಮ್

ಅವರುಗಳು ಬೈತುಲ್ಲಾಹ್‌ದ ನಿರ್ಮಾಣದ ಸಮಯ ಬುನಾದಿ ಹಾಕುತ್ತಾ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಮಸ್ಜಿದ್ ನಬವಿಯ ನಿರ್ಮಾಣದ ಸಮಯ ಮಾಡಿದ ಪ್ರಾರ್ಥನೆಗಳು ಮಾಡುತ್ತಿದ್ದವು. ಕೆಲವು ನೆಲ ಅಗೆಯುತ್ತಿದ್ದರು ಮತ್ತು ಕೆಲವರು ಮಣ್ಣು ಎತ್ತಿ ಬೇರೆ ಕಡೆ ಹಾಕುತ್ತಿದ್ದರು, ಮತ್ತು ಹೀಗೆ ಪ್ರಾರ್ಥಿಸುತ್ತಿದ್ದರು.

**ಹಾಝುಲ್ ಜಮಾಲು ಲಾ ಹಿಮಾಲ ಖೈಬರು**
**ಹಾಝಾ ಅಬರ್ರು ರಬ್ಬನಾ ವ ಅತ್‌ಹರು**

ಫ್ಯಾಷನ್ ಮತ್ತು ಭೌತಿಕ ಸೌಂದರ್ಯಕ್ಕೆ ಮರುಳಾದವರಿಗೆ ಲಂಡನ್‌ನಲ್ಲಿ ಈ ರೀತಿ ತಮ್ಮ ಕೈಗಳಿಂದ ಮಣ್ಣು ಎತ್ತುವುದು ಮತ್ತು ಬೇರೆ ಕಡೆ ಹಾಕುವ ದೃಶ್ಯ ವಿಶೇಷವಾಗಿತ್ತು. ಅದರಲ್ಲೂ ಒಬ್ಬ ಆಂಗ್ಲ ಮಹಿಳೆ (ಶ್ರೀಮತಿ ಅಝೀಝುದ್ದೀನ್) ಅವರೂ ಸಹ ನಾವು ಕಾರ್ಯವೆಸಗುವಂತೆಯೇ ಕಾರ್ಯನಿರತವಾಗಿದ್ದವು. ಲಂಡನ್‌ನ ಅನೇಕ ಪತ್ರಿಕೆಗಳು ಕೆಲಸದ ಸ್ಥಳದ ಛಾಯಾ ಚಿತ್ರಗಳನ್ನು ಪ್ರಕಟಿಸಿದವು. ಕೆಲವು ಸಂಕ್ಷಿಪ್ತವಾಗಿ ಮತ್ತು ಇತರರು ವಿವರವಾಗಿ ಮಸಿದಿಯ ಅಡಿಪಾಯವನ್ನು ಅಗೆಯುವ ಸುದ್ದಿ ಪ್ರಕಟಿಸಿದರು. ಅವರು ಹೆಸರುಗಳು ಇಂತಿವೆ:-

1) ಶೇಖ್ ಯಾಖೂಬ್ ಅಲಿ ಸಾಹಿಬ್ (2) ಸಯ್ಯದ್ ವಝಾರತ್ ಹುಸೇನ್ ಸಾಹಿಬ್ (3) ಶೇಖ್ ಝುಫರ್ ಹಖ್ ಖಾನ್ ಸಾಹಿಬ್ (4) ಮಲಿಕ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ (5) ಖಾನ್ ಅಬ್ದುರ್ ರಹೀಮ್ ಖನ್ ಖಾಲಿದ್ ಸಾಹಿಬ್. (6) ಮಿಸ್ಟರ್ ಜಿಬ್ರೀಲ್ ಮಾರ್ಟಿನ್ ಸಾಹಿಬ್ (7) ಮಿಸ್ಟರ್ ಷರ್ಫುದ್ದೀನ್ ಸಾಹಿಬ್ (8) ಮಿಸ್ಟರ್ ಅಝೀಝುದ್ದೀನ್ ಸಾಹಿಬ್ (ಅಮತುಸ್ಸಲಾಮ್ ಸಾಹಿಬಾ) (9) ಮಿಸ್ಟರ್ ಹೇರಿ ಹೆಂಟಿನ್ ಸಾಹಿಬ್ (10) ಅಬ್ದುಲ್ ಅಝೀಝ್, ಅಬ್ದುಲ್ಲಾ ಮಾಲಿಕ್ ಹೋಟಲ್ ಲಂಡನ್‌ನ ಪುತ್ರ (11) ಮಿಸ್ಟರ್ ಕುಂದನ್ ಲಾಲ್ ಸಾಹಿಬ್ ಅವರು ಮುಫ್ತಿ ಸಾಹಿಬ್ ಅವರ ಕಾಲಾವಧಿಯಲ್ಲಿ ಮುಸಲ್ಮಾನರಾದರು (12) ಮಲಿಕ್ ಗುಲಾಮ್ ಫರೀದ್ ಸಾಹಿಬ್ (13) ವಿನೀತನು ಅಬ್ದುರ್ರಹೀಮ್ ದರ್ದ್. (ಅಲ್‌ಫಝುಲ್ ಖಾದಿಯಾನ್ 22, 24, ಅಕ್ಟೋಬರ್ 25, ಪುಟ-1)

**ಲಂಡನ್‌ನ ಪ್ರತಿಷ್ಠ ಪತ್ರಿಕೆಗಳಲ್ಲಿ ಲಂಡನ್‌ನ ಪ್ರಥಮ ಮಸೀದಿಯ ವಿವರ**

ಅಲ್‌ಫಝುಲ್ ಖಾದಿಯಾನ್ ದಾರುಲ್ ಅಮಾನ್ 14 ನವೆಂಬರ್ 1925 ಪುಟ 3 ರಲ್ಲಿ ಮೂರು ಪತ್ರಿಕೆಗಳ ಸುದ್ದಿ ಪ್ರಸಾರ (1) ಡೈಲಿಗ್ರಾಫಿಕ್ (2) ಟೈಮ್ಸ್ ಆಫ್ ಲಂಡನ್ (3) ಡೈಲಿ ಟೆಲಿಗ್ರಾಫ್, ಕಿರಿದಾದ ಪುಟಗಳಿಂದಾಗಿ ನಾವು ಡೈಲಿ ಗ್ರಾಫಿಕ್ ಪ್ರಕಟಿಸಿದ ಸುದ್ದಿ ಮಾತ್ರ ಈ ಕೆಳಗೆ ಪ್ರಕಟಿಸುತ್ತಿದ್ದೇವೆ.

"ನಿನ್ನೆ ಈ ಮಸೀದಿಯ ಬುನಾದಿ ತೋಡುವಾಗ ಮುಸಲ್ಮಾನರ ಆಧ್ಯಾತ್ಮವು ಅನಾವರಣಗೊಳ್ಳುತ್ತಿತ್ತು. ಈ ಆಧ್ಯಾತ್ಮದ ಸಣ್ಣ ವರ್ಚಸ್ಸು ಎಂದರೆ ಈ ಜನ ಕಾರ್ಮಿಕರಂತೆ ಖುದ್ದು ಮಣ್ಣು ಅಗೆಯುತ್ತಿದ್ದರು ಮತ್ತು ಇತರರು ಕಾರ್ಯ ನಿರ್ವಹಿಸುತ್ತಿದ್ದರು. ಭಾರತೀಯರಲ್ಲದೆ ಅವರಲ್ಲಿ ಓರ್ವ ಆಂಗ್ಲರು ಅವರ ಜೊತೆ ಶಾಮೀಲಾಗಿದ್ದರು. ಬಿಳಿ ಕೂದಲು ಅವರ ವೃದ್ಧ ಅವಸ್ಥೆಗೆ ಸಾಕ್ಷಿಯಾಗಿದ್ದವು. ತುಂಬಾ ಉತ್ಸಾಹದಿಂದ ಭಾರತೀಯ ಸಹವಿಶ್ವಾಸಿ ಸಹೋದರರೊಂದಿಗೆ ಕಾರ್ಯನಿರತರಾಗಿದ್ದರು.

**ನಿರ್ಮಾಣ ಕಾರ್ಯ ನಡೆಯುತ್ತಿದೆ.**
**ಕಮಾನಿನ ಗೋಡೆಗಳು ಪೂರ್ಣಗೊಂಡಿವೆ.**

"ಮಸೀದಿ ನಿರ್ಮಾಣ" ಸಹ ಶೀರ್ಷಿಕೆಯೊಂದಿಗೆ ಅಲ್‌ಫಝುಲ್ ಖಾದಿಯಾನ್ 8 ಜನವರಿ 1926 ಪುಟ-2 ರಲ್ಲಿ ಈ ಸುದ್ದಿ ಪ್ರಕಟಿಸಲಾಗಿದೆ.

"ಅಲ್ಲಾಹನ ಅನುಗ್ರಹದಿಂದ ಮಸೀದಿ ನಿರ್ಮಾಣ ಕಾರ್ಯ ಮುಂದುವರೆದಿದೆ. ಕಮಾನಿನ ಗೋಡೆಗಳು ಬಹುತೇಕ ಪೂರ್ಣಗೊಂಡಿವೆ. ಉತ್ತರ ಮತ್ತು ದಕ್ಷಿಣ ಗೋಡೆಗಳನ್ನು ನಿರ್ಮಿಸಲಾಗುತ್ತಿದೆ. ಗುಮ್ಮಟವನ್ನು ನಿರ್ಮಿಸುವ ದೊಡ್ಡ ಕಬ್ಬಿಣದ ಕಾರ್ಯಗಳನ್ನು ನಿರ್ಮಿಸಲಾಗಿದೆ. ಮಸೀದಿಯ 1/3 ಭಾಗವನ್ನು ಪೂರ್ತಿಕರಿಸಲಾಗಿದೆ. ಹವಾಮಾನ ಉತ್ತಮವಾಗಿದ್ದರೆ ಅಲ್ಲಾಹನ ಅನುಗ್ರಹದಿಂದ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ನಿರ್ಮಾಣ ಕಾರ್ಯ ಕೊನೆಗೊಳ್ಳಬಹುದು. (ಅಲ್‌ಫಝುಲ್ ಖಾದಿಯಾನ್ 8 ಜನವರಿ 1926, ಪುಟ-2)

**ನಿರ್ಮಾಣವಾಗುತ್ತಿರುವ ಮಸೀದಿಯು ನಿಧಾನವಾಗಿ ಎತ್ತರಕ್ಕೆ ಹೋಗುತ್ತದೆ**

ಇಲಾಹಬಾದಿನ ಆಂಗ್ಲ ಪತ್ರಿಕೆ ಪಾಯನೀರ್ ತನ್ನ 20 ಜನವರಿ 1926 ರ ಸಂಚಿಕೆಯಲ್ಲಿ ಭಾನುವಾರದಂದು ಹೀಗೆ ಉಲ್ಲೇಖಿಸಿದೆ, ಎಕ್ಸ್‌ಪ್ರೆಸ್ ಬರೆಯುತ್ತದೆ:

"ಸೌತ್‌ಫೀಲ್ಡ್‌ನಲ್ಲಿರುವ (ವೆಂಬಲ್ಡನ್ ಬಳಿಯಿರುವ) ಉಧ್ಯಾನದಲ್ಲಿ ಲಂಡನ್‌ನ ಮೊದಲ ಬಾರಿಗೆ ನಿರ್ಮಾಣಗೊಳ್ಳುತ್ತಿರುವ ಮಸೀದಿ ನಿಧಾನಕ್ಕಾಗಿ ಎತ್ತರಕ್ಕೆ ಬೆಳೆಯುತ್ತಿದೆ. ಅದು ಮುಸ್ಲಮಾನರ ಅಹ್ಮದಿಯಾ ಪಂಥದವರಿಂದ ಧಾರ್ಮಿಕ ಉದ್ದೇಶಗಳಿಗಾಗಿ ಕಟ್ಟಲಾಗುತ್ತಿದೆ. ಇಂಗ್ಲೆಂಡಿನಲ್ಲಿ ಒಟ್ಟು ಮುಸ್ಲಿಮರ ಸಂಖ್ಯೆ ಸುಮಾರು 1000 ಅದರಲ್ಲಿ ಬಹುಪಾಲು ಬ್ರಿಟಿಷ್ ಮುಸ್ಲಿಮರು ಮಸೀದಿಯ ಈ ಕಟ್ಟಡದ ವಾಸ್ತುಶೈಲಿಯಲ್ಲಿ ಅಧ್ಯಾನ್ ನೀಡಲು ಯಾವುದೇ ಮಿನಾರ್ ಇಲ್ಲ. ಮಸೀದಿಯ ಆವರಣದಲ್ಲಿ ಅದ್ಹಾನ್ ನೀಡಲಾಗುವುದು." (ಅಲ್‌ಫಝುಲ್ ಖಾದಿಯಾನ್ 5 ಫೆಬ್ರವರಿ 1926)

**ಮಸೀದಿಗೆ ಕಾರ್ಪೆಟ್ ನೆಲ**
**ಖಾನ್ ಬಹದ್ದೂರ್ ಅಹ್ಮದ್ ಅಲ್ಲಾದೀನ್ ಚಿರುಕಾಲ ಬಾಳಲಿ**

ಮೇಲಿನ ಶೀರ್ಷಿಕೆಯಡಿಯಲ್ಲಿ ಈ ಕೆಳಗಿನ ಸುದ್ದಿಯನ್ನು ಶೇಖ್ ಯಾಖೂಬ್ ಅಲಿ ಸಾಹಿಬ್ ಇರ್ಫಾನಿ ಅವರು ಜುಲೈ 1926 ರಂದು ಅಲ್‌ಫಝುಲ್ ಖಾದಿಯಾನ್ ದಾರುಲ್ ಅಮಾನ್‌ನ ಮುಖಪುಟದಲ್ಲಿ ಪ್ರಕಟಿಸಿದರು.

ಲಂಡನ್‌ನಲ್ಲಿ ಮೊದಲ ಮತ್ತು ಏಕೈಕ ಮಸೀದಿಯು ಈಗ ಪೂರ್ಣಗೊಳ್ಳುವ ಹಂತದಲ್ಲಿದ್ದು ಶೀಘ್ರದಲ್ಲೇ ಉದ್ಘಾಟನೆಗೊಳ್ಳಲಿದೆ. ಈ ಮಸಿದಿಯ ಬಗ್ಗೆ ಲಂಡನ್ ಮತ್ತು ಯೂರೋಪಿಯನ್ನರಲ್ಲಿ ಎಷ್ಟೊಂದು ಆಸಕ್ತಿ ಮೂಡಿದೆ. ಅಂದರೆ ಹತ್ತು ಹಲವು ಪತ್ರಿಕೆಗಳು ಅದರ ವಿವಿಧ ಫೋಟೋಗಳು ಮತ್ತು ಅದಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು ಪ್ರಕಟಿಸಿದರು. ಹೊರ ರಾಜ್ಯಗಳಿಂದ ದಿನಪತ್ರಿಕೆ ವರದಿಗಾರರು ಮತ್ತು ಪ್ರವಾಸಿಗರು ಬಂದು ಒಂದು ವಿಶೇಷ ವಾತಾವರಣವನ್ನು ನಿರ್ಮಿಸುತ್ತಾರೆ. ಇದು ಟ್ರಿನಿಟಿಯ ವಿಗ್ರಹಾರಾಧನೆಯಲ್ಲಿ ಮತ್ತು ಪ್ರಪಂಚದ ಭೌತಿಕ ಕೇಂದ್ರದಲ್ಲಿ ಅಲ್ಲಾಹನ ಮೊದಲ ಮನೆಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದು ಇಸ್ಲಾಮಿನ ಹಿರಿಮೆ ಮತ್ತು ವೈಭವ ಮತ್ತು ಹಝ್ರತ್ ನಬಿಕರೀಮ್(ಸ) ರವರ ವೈಭವ ಮತ್ತು ಸೌಂದರ್ಯದ ಘೋಷಣೆಯ ಕೇಂದ್ರವಾಗುವುದು.

ಮಾನ್ಯ ಸೇಠ್ ಅಹ್ಮದ್ ಅಲ್ಲಾದೀನ್ ಸಾಹಿಬ್ ಅವರಿಗೆ ಮಸೀದಿ ಪೂರ್ಣಗೊಂಡ ವರದಿ ನೀಡುತ್ತಾ ನಾನು ಮಸೀದಿಗೆ ಕಾರ್ಪೆಟ್ ನೀಡಲು ಮನವಿ ಮಾಡಿದ್ದೆ. ಸೇಠ್ ಸಾಹಿಬ್ ಒಳ್ಳೆಯ ಕಾರ್ಯಗಳಿಗೆ ತಮ್ಮ ಹೃದಯ ಮತ್ತು ಕೈಗಳನ್ನು ಯಾವಾಗಲೂ ತೆರೆದಿರುವ ಕೃಪೆಯನ್ನು ಹೊಂದಿದ್ದಾರೆ. ನನ್ನ ಈ ಮನವಿ ಓದುತ್ತಲೇ ಲಂಡನ್‌ನ ಈ ಮಸೀದಿಗಾಗಿ ಅವರು ಒಂದು ನೂರು ಪೌಂಡ್‌ಗಳನ್ನು ಕಾರ್ಪೆಟ್ ಸಲುವಾಗಿ ಪ್ರಸ್ತುತಪಡಿಸುತ್ತಾರೆ. ಅತ್ಯಂತ ಬೆಲೆ ಬಾಳುವ ಕಾರ್ಪೆಟ್ ಈ ನೆಲಕ್ಕಾಗಿ ದೊರೆಯಬಹುದು. ಆದರೆ ಸೇಠ್ ಅಹ್ಮದ್ ಅಲ್ಲಾದೀನ್‌ರು ಪ್ರಸ್ತುತಪಡಿಸಿದ ಕಾಪೇಟ್‌ಗೆ ಲಭಿಸಿದ ಗೌರವ ಇನ್ಯಾರಿಗೂ ಲಭಿಸದು. ಮಸೀದಿಯಲ್ಲಿ ಬೆಳಕಿಗೋಸ್ಕರ ಹೈದರಾಬಾದ್ ಜಮಾಅತ್ ಒಂದು ವರ್ಷದವರೆಗಿನ ಖರ್ಚು ಒಪ್ಪಿಕೊಂಡಿತು. ಅಲ್ಲಾಹನು ಅವರೆಲ್ಲಾ ಮಿತ್ರರ ಹೃದಯಗಳನ್ನು ಮತ್ತು ಅವರ ಮನೆಗಳನ್ನು ತನ್ನ ಪ್ರಕಟದಿಂದ ಪ್ರಕಾಶಿತಗೊಳಿಸಲಿ. ಆಮೀನ್. (ಅಲ್‌ಫಝುಲ್ ಖಾದಿಯಾನ್ ದಾರುಲ್ ಅಮಾನ್ 2 ಜುಲೈ 1926, ಪುಟ-1)

**ನಿರ್ಮಾಣ ಪೂರ್ಣಗೊಂಡಿದೆ.**

ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 8 ಅಕ್ಟೋಬರ್ 1926 ಪುಟ 2 ರಲ್ಲಿ ಈ ಸುದ್ದಿ ಪ್ರಕಟಿಸಿದೆ.

"ಲಂಡನ್‌ನಲ್ಲಿ ಮೊಟ್ಟ ಮೊದಲಾಗಿ ನಿರ್ಮಾಣಗೊಂಡ ಮಸೀದಿ, ಅಹ್ಮದಿಯಾ ಸಮುದಾಯದವರ ತ್ಯಾಗ ಮತ್ತು ಬಲಿದಾನಗಳ ಪ್ರತೀಕ ಭವ್ಯ ಮಸೀದಿ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಶುಭಹಸ್ತದಿಂದ ಅಕ್ಟೋಬರ್ 1924 ರಂದು ಅಡಿಗಲ್ಲು ಹಾಕಲ್ಪಟ್ಟ ಮಸೀದಿ, ಸಾತ್ವಿಕರನ್ನು, ಮತಪಂಡಿತರನ್ನು, ವಿದ್ವಾಂಸರನ್ನು ಅಡಿಗಲ್ಲು ಸಮಾರಂಭಕ್ಕೆ ಎಳೆದು ತಂದ ಮಸೀದಿ, ಅಲ್‌ಹಮ್ದುಲಿಲಾಹ್ ಸುಮ್ಮ ಅಲ್‌ಹಮ್ದುಲಿಲ್ಲಾಹ್ ಅಲ್ಲಾಹನ ಕೃಪೆಯಿಂದ, ಕರುಣೆಯಿಂದ ಪೂರ್ಣಗೊಂಡಿದೆ. ಅಲ್ಲಾಹನ ಹೆಸರು ಹಿರಿಮೆಯನ್ನು ಕೊಂಡಾಡಲು ಈ ಮಸೀದಿಯ ನಿರ್ಮಾಣವಾಗಿದೆ. (ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 8 ಅಕ್ಟೋಬರ್ 26 ಪುಟ-2)

**ಮಸೀದಿಯ ಉದ್ಘಾಟನೆ**

ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 12, ಅಕ್ಟೋಬರ್ 1926 ಪುಟ 3 ರ ಮೇಲೆ ಅಲ್‌ಫಝ್ಲ್ ಸಂಪಾದಕರು ಮಸೀದಿಯ ಉದ್ಘಾಟನೆಯ ಶುಭಸುದ್ದಿ ನೀಡುತ್ತಾ ಬರೆಯುತ್ತಾರೆ.

"ಹೇ ಅಹ್ಮದಿ ಜಮಾಅತ್‌ನ ಮಹಿಳೆಯರೇ ಮತ್ತು ಹೇ ಅಹ್ಮದಿ ಜಮಾಅತ್‌ನ ಪುರುಷರೇ! ಹೇ ಅಹ್ಮದಿ ಜಮಾಅತ್‌ನ ಮಕ್ಕಳೇ ಮತ್ತು ಹೇ ಅಹ್ಮದಿ ಜಮಾಅತ್‌ನ ವೃದ್ಧರೇ! ಶುಭಾಶಯಗಳು ನಿಮಗೆ ಶತ ಶುಭಾಶಯಗಳು. ಇಂದು ಈ ಮಸೀದಿ ನಿಮ್ಮ ಸರ್ವಶಕ್ತನಾದ ಅಲ್ಲಾಹನ ಮುಂದೆ ಸಾಷ್ಟಾಂಗ ನಮಸ್ಕಾರ (ಸರ್‌ಬಸಜೂದ್) ಮಾಡುವವರಿಗಾಗಿ ತೆರೆಯಲ್ಪಟ್ಟಿದೆ. ಅದರ ಉದ್ಘಾಟನೆ 3 ಅಕ್ಟೋಬರ್ 1926 ರಂದು ಪೂರ್ಣ ವೈಭವದೊಂದಿಗೆ ನೆರವೇರಿಸಲ್ಪಟ್ಟಿದೆ."

ಹಮ್‌ದಮ್ ಹೆಸರಿನ ದಿನಪತ್ರಿಕೆ ಲಕ್ನೋ ತನ್ನ 7 ಅಕ್ಟೋಬರ್ ಲೇಖನದಲ್ಲಿ ಬರೆಯುತ್ತಾರೆ. "ಲಂಡನ್ 3 ಅಕ್ಟೋಬರ್ 1926 ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬಹಳ ಸಮಯದಿಂದ ತಮ್ಮ ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿತ್ತು. ಹೀಗಾಗಿ ಇಂದು ಆ ದೀರ್ಘಾವಧಿಯ ಬಯಕೆ ಈಡೇರಿದೆ. ಮತ್ತು ಸೌಥ್‌ಫೀಲ್ಡ್‌ನಲ್ಲಿರುವ ನೈರುತ್ಯ ಲಂಡನ್‌ನಲ್ಲಿರುವ ಮಸೀದಿಯನ್ನು ಅತ್ಯಧಿಕ ಮುಸ್ಲಿಮರ ಸಂಸತ್ ಸದಸ್ಯರ ಮತ್ತು ಗಣ್ಯಾತಿಗಣ್ಯ ವ್ಯಕ್ತಿಗಳ ಮುಂದೆ ಅತ್ಯಂತ ವೈಭವದಿಂದ ಉದ್ಘಾಟಿಸಲಾಯಿತು.

ಕೊನೆಯವರೆಗೂ ಮಸೀದಿಯ ಉದ್ಘಾಟನೆ ಅಮೀರ್ ಫೈಸಲ್ ಬಿನ್ ಸುಲ್ತಾನ್ ಇಬ್ನು ಸಊದ್ ಮಾಡುವರು ಎಂಬ ಭರವಸೆ ಇತ್ತು. ಆದರೆ ಇಮಾಮ್ ಮಸೀದಿ ಮೌಲಾನ ದರ್ದ್ ಸಾಹಿಬರ ಬಾಗಿಲಿಗೆ ಅಂಟಿಸಲಾದ ನೋಟಿಸ್ ಅನ್ನು ಜನರು ನಿರಾಶೆಯಿಂದ ಓದಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಮೀರ್ ಅವರ ತಂದೆ ಅವರನ್ನು ಈ ಸಮಾರಂಭದಲ್ಲಿ ಭಾಗವಹಿಸಲು ಅನುಮತಿ ನೀಡಲಿಲ್ಲ. ಈ ಕಾರ್ಯಕ್ರಮವು ಶೇಖ್ ಅಬ್ದುಲ್ ಖಾದರ್ ಸಾಹಿಬ್ ಪಂಜಾಬ್ ಪ್ರಾಂತದ ಮಾಜಿ ಸಚಿವರು ನೆರವೇರಿಸುವರು. ಹವಾಮಾನವು ಸ್ಪಷ್ಟವಾಗಿರಲಿಲ್ಲ. ಆದರೆ ಮೋಡಗಳು ಚದುರಿಹೋಗಿದ್ದವು. ಕೆಲವೊಮ್ಮೆ ಪ್ರಕಾಶಮಾನವಾದ ಸೂರ್ಯ ಸ್ಪಷ್ಟವಾಗಿ ಮೂಡುತ್ತಿತ್ತು. ಉದ್ಘಾಟನಾ ಸಮಾರಂಭ ಪ್ರಾರಂಭವಾಗುವುದಕ್ಕಿಂತ ಮೊದಲು ಬಿಳಿ ಮಿನಿಕಗಳ ಮುಂದೆ ವಧುವಿನ ರೀತಿ ಅಲಂಕರಿಸಲಾಗಿತ್ತು. ರಸ್ತೆಗಳು ಜನನಿಬಿಡವಾಗಿದ್ದವು.

ಶೇಖ್ ಅಬ್ದುಲ್ ಖಾದರ್ ಅವರಿಗಿಂತ ಮೊದಲ ಬುರುದಾಸ್‌ನ ಮಹಾರಾಜರು ಆಗಮಿಸಿದರು. ತಕ್ಬೀರ್ ಘೋಷಣೆಗೊಂದಿಗೆ ಅವರನ್ನು ಸ್ವಾಗತಿಸಲಾಯಿತು. ಇಮಾನ್ ಮಸ್ಜಿದ್ ಇಮಾಮ್ ಜಮಾಅತ್ ಅಹ್ಮದಿಯಾ ಹಝ್ರತ್ ಸಾಹಿಬ್‌ಝಾದ ಸಾಹಿಬರು ಭಾರತದಿಂದ ಕಳುಹಿಸಿದ ದೀರ್ಘವಾದ ಸಂದೇಶ ಓದಿ ಹೇಳಿದರು. ಅದಲ್ಲದೆ ಇನ್ನು ಹಲವು ಅಭಿನಂದನಾ ಸಂದೇಶಗಳು ಜಗತ್ತಿನಾದ್ಯಂತ ಬಂದಿದ್ದವು. ಓದಿ ಹೇಳಲಾಯಿತು. ಇಮಾಮ್ ಸಾಹಿಬ್ ತಮ್ಮ ವಿವರಾದ ಭಾಷಣದಲ್ಲಿ ಅಮಿರ್ ಫೈಸಲ್ ಭಾಗವಹಿಸದೇ ಇರುವ ಬಗ್ಗೆ, ಅದೊಂದು ತಪ್ಪು ಕಲ್ಪನೆಯ ಮೇಲೆ ಉಂಟಾದ ಕಾರ್ಯವಾಗಿದೆ ಎಂದರು.

ಶೇಖ್ ಅಬ್ದುಲ್ ಖಾದರ್ ಸಾಹಿಬ್ ಮಸೀದಿಯ ಬಾಗಿಲು ತೆರೆಯುತ್ತಿದ್ದಂತೆಯೇ "ಅಲ್ಲಾಹನು ಅಕ್ಬರ್" ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ನಂತರ ಎಲ್ಲಾ ಸದಸ್ಯರು ಮಸೀದಿ ಒಳಗೆ ಪ್ರವೇಶಿಸಿದರು. ಅಲ್ಲಿ ಭಾಷಣಗಳಾದವು. ಶೇಖ್ ಅಬ್ದುಲ್ ಖಾದರ್ ಅಮಿರ್ ಫೈಸಲ್ ಬಾರದಿರುವುದಕ್ಕೆ ವಿಷಾದಿಸುತ್ತಾ ಹೇಳಿದರು. ನಾನು ಅಹ್ಮದಿಯಲ್ಲ. ಆದರೂ ನಾನು ಅತ್ಯಂತ ಸಂತೋಷದಿಂದ ಮಸೀದಿಯನ್ನು ಉದ್ಘಾಟಿಸುತ್ತಿದ್ದೇನೆ. ಅವರು ತಮ್ಮ ದೀರ್ಘವದ ಭಾಷಣದಲ್ಲಿ ಅಹ್ಮದಿಯಾ ಜಮಾಅತ್‌ನ ವಿಶೇಷತೆಗಳು ಉತ್ತಮ ರೀತಿಯಲ್ಲಿ ವಿವರಿಸಿದರು. ಯಾವ ಧರ್ಮವೂ ಇಲ್ಲ, ಇಸ್ಲಾಂ ಧರ್ಮವು ಅದಕ್ಕೆ ಹೊರತಾಗಿಲ್ಲ.

ಮಹಾರಾಜ ಬುರುದಾನ್ ಹೇಳಿದರು. ನಾನು ಮುಸಲ್ಮಾನ ಅಲ್ಲ. ಆದರೂ ಈ ಸಮಾರಂಭದಲ್ಲಿ ಭಾಗವಹಿಸುವುದು ನನ್ನ ಹಕ್ಕು ಮತ್ತು ತನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಭಾಷಣಗಳ ನಂತರ ಚಹಾ ಕೂಟದ ಏರ್ಪಾಟಾಯಿತು. ಅನಂತರ ಲಂಡನ್‌ನ ಮೊಟ್ಟ ಮೊದಲ ಮಸೀದಿಯಲ್ಲಿ ತಕ್ಬೀರ್ ಘೋಷಣೆಗಳು ಮೊಳಗಿದವು. ಅಂದರೆ ಬಿಲಾಲ್(ರ) ನಬವಿ(ಸ)ಯ ಉತ್ತರಾಧಿಕಾರಿ ಮುಅಝ್ಝಿನ್ "ಅಲ್ಲಾಹು ಅಕ್ಬರ್" ಅದಾನ್ ಘೋಷಿಸಲಾಯಿತು. ಮುಸಲ್ಮಾನರು ವುಝು ಮಾಡಿ.

ಏಕ್ ಹೀ ಸಫ್ ಮೇ ಖಡೇ ಹೋಗಯೇ ಮಹ್ಮೂದ್ ವ ಅಐಆಝ್

ನ ಕೋಯಿ ಬಂದಾ ರಹಾ ನ ಕೋಯಿ ಬಂದ ನವಾಝ್

(ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 12 ಅಕ್ಟೋಬರ್ 1926, ಪುಟ-12)

**ಕಲ್ಕತ್ತಾದ ಸಿನಿಮಾ ಮಂದಿರಗಳಲ್ಲಿ ಉದ್ಘಾಟನೆಯ ದೃಶ್ಯಗಳನ್ನು ತೋರಿಸಲಾಯಿತು.**

ಸಯ್ಯದ್ ಕರೀಮ್ ಬಕ್ಷ್ ಅಹ್ಮದಿ ಆಫ್ ಕಲ್ಕತ್ತ ಕಡೆಯಿಂದ ಈ ಸುದ್ದಿ ಪ್ರಕಟಗೊಂಡಿತು.

ಈ ವಾರ ಕಲ್ಕತ್ತಾದ ದೊಡ್ಡ ದೊಡ್ಡ ಚಲನಚಿತ್ರ ಮಂದಿರಗಳಲ್ಲಿ ಮಸ್ಜಿದ್ ಅಹ್ಮದಿಯಾ ಲಂಡನ್‌ನ ಉದ್ಘಾಟನೆಯ ದೃಶ್ಯಗಳನ್ನು ತೋರಿಸಲಾಗುತ್ತಿದೆ. ಅದರ ಶೀರ್ಷಿಕೆ "ಲಂಡನ್‌ನಲ್ಲಿ ಇಸ್ಲಾಂ" ಎಂದಾಗಿತ್ತು. ಅದರಲ್ಲಿ ಖಾನ್ ಬಹದ್ದೂರ್ ಅಬ್ದುಲ್ ಖಾದರ್ ಸಾಹಿಬ್ ಅವರ ಸ್ವಾಗತ, ಮಸೀದಿಯ ಬಾಗಿಲು ತೆರೆಯುವುದು, ಜನನಿಬಿಡ ಇತ್ಯಾದಿ, ಇತ್ಯಾದಿ ತೋರಿಸಲಾಗುತ್ತಿದೆ. ನಾನು ನಿನ್ನೆ ಇಲ್ಲಿ ಗ್ಲೋಬ್ ಥೇಟರ್‌ಗೆ ಹೋಗಿದ್ದೆ. ಅಲ್ಲಿ ಮುಸಲ್ಮಾನರು ಅತಿ ಹೆಚ್ಚು ಸಂಖ್ಯೆಯಲ್ಲಿ ಸೇರಿದ್ದರು. ಮಸೀದಿಯ ಉದ್ಘಾಟನೆಯ ದೃಶ್ಯಗಳು ತೋರಿಸಿದಾಗ ಎಲ್ಲಾ ಮುಸಲ್ಮಾನರು ಸಂತೋಷದಿಂದ ಚಪ್ಪಾಳೆ ಬಾರಿಸತೊಡಗಿದರು.

(ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 23, ನವೆಂಬರ್ 1926, ಪುಟ-2)

**ಅಹ್ಮದಿಯಾ ಮಸೀದಿಯ ಭವ್ಯ ಉದ್ಘಾಟನೆ**

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ದುಷ್ಕರ್ಮಿಗಳು ಲಂಡನ್ ಮಸೀದಿಯನ್ನು ನಿರ್ಮಿಸಿರುವುದನ್ನು ಬಯಸುತ್ತಿರಲಿಲ್ಲ. ಆದರೆ ಅಲ್ಲಾಹನು ಮಸೀದಿಯನ್ನು ನಿರ್ಮಿಸುವ ಭಾಗ್ಯ ಮಾತ್ರ ನೀಡಿದ್ದಲ್ಲದೇ ಅದು ಪೂರ್ಣಗೊಂಡ ನಂತರ ಅದರ ಭವ್ಯ ಉದ್ಘಾಟನೆಯ ಸಾಧನಗಳು ಸಹ ಒದಗಿಸಿಕೊಟ್ಟನು. ಅದು ಎಷ್ಟರಮಟ್ಟಿಗೆ ಭವ್ಯವಾಗಿತ್ತೆಂದರೆ ಪ್ರತಿಯೊಬ್ಬರು ಒಪ್ಪಿಕೊಂಡರು. ಹಿಂದೆ ಇಂತಹ ಭವ್ಯ ಸಮಾರಂಭ ನಡೆದ ಉದಾಹರಣೆ ಇಲ್ಲ. ಇದನ್ನು ಇನ್ನೂರಕ್ಕೂ ಹೆಚ್ಚು ಪ್ರಾಂತಿಯ ಪತ್ರಿಕೆಗಳು ಬಲವಾದ ಪದಗಳೊಂದಿಗೆ ಉಲ್ಲೇಖಿಸಿದರು. ಈ ಪತ್ರಿಕೆ ಇಂಗ್ಲೆಂಡ್‌ನದ್ದಾಗಿವೆ. ಇವುಗಳ ಹೊರತಾಗಿ ಬೇರೆ ಬೇರೆ ದೇಶಗಳಲ್ಲಿ

ಇದರ ಚರ್ಚೆಯಾಗುತ್ತಿವೆ. ಮತ್ತ ಅವರ ವರದಿಗಳು ಬರುತ್ತಿವೆ. ಹೀಗೆ ಇಲ್ಲಿಯತನಕ ಸುಮಾರು 25 ಕೋಟಿ ಜನರು, ಲಂಡನ್‌ನಲ್ಲಿ ಒಂದು ಮಸೀದಿ ರಚನೆಗೊಂಡಿದೆ. ಅದರ ಉದ್ಘಾಟನೆಯು ಆಗಿದೆ. ಅದನ್ನು ಅಹ್ಮದಿಯಾ ಜಮಾಅತ್ ನಿರ್ಮಿಸಿದೆ. "ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಅವರ ಇಮಾಮ್ ಆಗಿದ್ದಾರೆ. ಅಲಾಹನು ಅವರಿಗೆ ವಾಗ್ದತ್ತ ಮಸೀಹನಾಗಿ ಮತ್ತು ಪ್ರವಾದಿ ಎಂದು ಕರೆದನು. ಅವರ ಕಾರ್ಯ ಇಸ್ಲಾಂ ಧರ್ಮದ ಪ್ರಚಾರ ಮಾಡುವುದಾಗಿದೆ. ಲೋಕದ ಪ್ರತಿ ಮೂರು ಜನರಲ್ಲಿ ಒಬ್ಬನಿಗೆ ಈ ಸುದ್ದಿ ತಲುಪಿದೆ ಮತ್ತು ಖುದ್ದು ಇಂಗ್ಲೆಂಡಿನ ವರದಿಗಾರರ ಹಾಗೂ ಗಣ್ಯವ್ಯಕ್ತಿಯ ಈ ಅಭಿಪ್ರಾಯವಾಗಿದೆ. ನಾವು ಎರಡು ಕೋಟಿ ಖರ್ಚು ಮಾಡುತ್ತಿದ್ದರೂ ಈ ರೀತಿಯ ಪ್ರಚಾರ ಗಿಟ್ಟಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲದೆ ಕೆಲವರು ಹೇಳಿದ್ದಾರೆ.

ಎರಡು ಕೋಟಿ ರೂಪಾಯಿಗಷ್ಟೇ ಅಲ್ಲ, ಎರಡು ಕೋಟಿ ಪೌಂಡ್ ಸಹ ಖರ್ಚು ಮಾಡಿದರೂ ಇವರು ಮಾಡಿ ತೋರಿಸಿದ ಸಾಧನೆ ಸಾಧ್ಯವಿರಲಿಲ್ಲ. ಈ ಮಸೀದಿಯ ಉದ್ಘಾಟನೆಯಲ್ಲಿ ಗಣ್ಯಾತಿಗಣ್ಯ ವ್ಯಕ್ತಿಗಳು ಪಾಲ್ಗೊಂಡರು. ಮೂರು ಲಾರ್ಡ್‌ಗಳು, 13 ಸಂಸತ್ ಸದಸ್ಯರು, ವಿವಿಧ ದೇಶಗಳ ರಾಯಭಾರಿಗಳು, ನವಾಬ್‌ಗಳು ಮತ್ತು ಗೌರವಾನ್ವಿತ ಮುಖಂಡರು ಒಂದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಕೇವಲ ಭಾಗವಹಿಸಲಿಲ್ಲ. ಬದಲು ತುಂಬಾ ಆಸಕ್ತಿ ತೋರಿಸಿದರು. ಮತ್ತು ಸಂತೋಷವನ್ನು ವ್ಯಕ್ತಪಡಿಸಿದರು. ಕೆಲವರಂತೂ ಕೆಲಸಗಳಲ್ಲೂ ಸಹಾಯ ಮಾಡುವುದು ಹೆಮ್ಮೆಯ ವಿಷಯ ಎಂದರು. ಭಾರತದ ಗಣ್ಯಾಧಿಗಣ್ಯ ಜನರು ಸಹ ಇದರಲ್ಲಿ ಭಾಗವಹಿಸಿದರು. ಮಹಾರಾಜ ಬುರುದಾನರು ಸಹ ಭಾಗವಹಿಸಿದರು. ಅವರು ಈ ಸಂದರ್ಭದಲ್ಲಿ ಭಾಷಣ ಮಾಡಲು ಅನುಮತಿ ಕೋರಿದರು ಮತ್ತು ಸಂತೋಷವನ್ನು ವ್ಯಕ್ತಪಡಿಸಿದರು. ಹೇಳಿದರು. ನಾನು ಹಿಂದೂ ಆಗಿದ್ದರೂ ಇದರಲ್ಲಿ ಭಾಗವಹಿಸುವುದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಅಲ್ಲದೇ 11 ಸರಕಾರಗಳ ಪ್ರತಿನಿಧಿಗಳು ಸಹ ಈ ಸಂದರ್ಭದಲ್ಲಿ ಹಾಜರಾಗಿದ್ದರು. ಜರ್ಮನಿ, ಇಟಲಿ. ಚೀನಾ, ಇತ್ಯಾದಿ ದೇಶಗಳಿಂದಲೂ ಮಂತ್ರಿಗಳು ಬಂದಿದರು. ಹಣ ಎಲ್ಲಿ ಹೋಗಿದೆ ಎಂದು ಕೇಳುವ ಜನರಿಗೆ ಇದು ತಕ್ಕ ಉತ್ತರವಾಗಿದೆ. ಅವರು ಸರಿಯಾಗಿ ಆಲಿಸಿಕೊಳ್ಳಲಿ. ಹಣ ಇಲ್ಲಿಯೇ ಹೋಗಿದೆ. (ಅಲ್ ಫಝುಲ್ ಖಾದಿಯಾನ್ ದಾರುಲ್ ಅಮಾನ್ 9 ನವೆಂಬರ್ 1926)

**ಮುಸ್ಲಿಮರ ವಿಫಲ ಪ್ರಯತ್ನಗಳು**

ಹುಝೂರ್(ರ) ಇಂಗ್ಲೆಂಡಿನ ಪತ್ರಿಕೆಗಳ ವೈಭವ ಮತ್ತು ವ್ಯಾಪಕ ಹರಡುವಿಕೆಯನ್ನು ಉಲ್ಲೇಖಿಸುತ್ತಾ ಹೇಳಿದರು:

"ಹೀಗೆ ದೊಡ್ಡ ವರ್ಗದ ಒಂದಲ್ಲ ಅನೇಕ ಪತ್ರಿಕೆಗಳಲ್ಲಿ ಬಂದಿರುತ್ತದೆ, 15 ವರ್ಷಗಳಿಂದ ಮುಸಲ್ಮಾನರು ಪ್ರಯತ್ನದಲ್ಲಿದ್ದರು. ಅದಕ್ಕೆ ಸರಕಾರಗಳ ಬೆಂಬಲವು ಇತ್ತು. ಶ್ರೀಮಂತರು ಅವರಲ್ಲಿ ಸಿದ್ಧರಾಗಿದ್ದರು, ಆದರೂ ಏನೂ ಮಾಡಲಗಲಿಲ್ಲ. ಮಸೀದಿ ಕಟ್ಟಲು ಸಾಧ್ಯವಾಗಲಿಲ್ಲ. ಆದರೆ ಅಹ್ಮದಿ ಸಮುದಾಯವು ಅಲ್ಲಿ ಮಸೀದಿ ನಿರ್ಮಿಸುವ ನಿರ್ಣಯ ಕೈಗೊಂಡಾಗ ಅದನ್ನು ಮಾಡಿ ತೋರಿಸಿದರು. ಸುಲ್ತಾನ್ ಅಬ್ದುಲ್ ಹಮೀದ್ ಟರ್ಕಿ ಮಾಜಿ ಅರಸರು, ಭಾರತದ ಶ್ರೀಮಂತ ವರ್ಗ ಮತ್ತು ಇತರ ಮುಸ್ಲಿಂ ಸರಕಾರಗಳು ಎಲ್ಲರೂ ಇದಕ್ಕೆ ಬೆಂಬಲವಾಗಿ ನಿಂತಿದ್ದರು. ಅವಶ್ಯವಾಗಿ ಲಂಡನ್‌ನಲ್ಲಿ ಒಂದು ಮಸೀದಿ ನಿರ್ಮಿಸಬೇಕಾಗಿದೆ ಎಂದು. ಇಷ್ಟೆಲ್ಲಾ ಹೊರತಾಗಿಯೂ ಅವರಿಂದ ಸಾಧ್ಯವಾಗಲಿಲ್ಲ. ಆದರೆ ಅಹ್ಮದಿಯರು ನಿರ್ಣಯ ಕೈಗೊಂಡಾಗ ಯಾವುದೇ ತಡವಾಗಲಿಲ್ಲ.

(ಅಲ್‌ಫಝುಲ್ ಖಾದಿಯಾನ್ ದಾರುಲ್ ಅಮಾನ್ 9 ನವೆಂಬರ್ 1926)

ಅಂತಿಮವಾಗಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರ ಈ ಪದಗಳೊಂದಿಗೆ ವಿಷಯವು ಮುಕ್ತಾಯಗೊಳಿಸುತ್ತೇನೆ. ಅಲ್ಲಾಹನು ಈ ಮಸೀದಿಯ ಹಕ್ಕುಗಳನ್ನು ಪಾಲಿಸುವ ಭಾಗ್ಯ ನಮ್ಮೆಲ್ಲರಿಗೂ ನೀಡುವಂತಾಗಲಿ. ಹಾಗೆಯೇ ಪ್ರತಿಯೊಂದು ಮಸೀದಿಯ ಹಕ್ಕನ್ನು ಪಾಲಿಸುವಂತಾಗಲಿ, ತನ್ನ ಆರಾದನೆಗಳ ಹಕ್ಕನ್ನು ಪಾಲಿಸುವಂತಾಗಲಿ, ಅಲ್ಲಾಹನ ಸಂದೇಶವನ್ನು ತಲುಪಿಸುವ ಹಕ್ಕು ಪಾಲಿಸುವಂತಾಗಲಿ. ಮತ್ತು ಇಸ್ಲಾಂ ಧರ್ಮದ ಪ್ರಚಾರದ ಹಕ್ಕು ಪಾಲಿಸುವಂತಾಗಲಿ, ಮತ್ತು ನಿಜವಾದ ಅರ್ಥದಲ್ಲಿ ಮುಸಲ್ಮಾನ ಆಗಿರುವಂತೆ, ಯಾವ ಕಾರಣಕ್ಕಾಗಿ ಅಲ್ಲಾಹನು ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರನ್ನು ಕಳುಹಿಸದನೋ ಮತ್ತು ಈ ಕಾಲಘಟ್ಟದಲ್ಲಿ ಅವರ ಸತ್ಯಸಾಧಕರನ್ನು ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿ, ಲೋಕದಲ್ಲಿ ಇಸ್ಲಾಂ ಮತ್ತು ಏಕದೇವನ ಪ್ರಭುತ್ವ ಸ್ಥಾಪಿಸಲಿಕ್ಕಾಗಿ ಮತ್ತು ಪವಿತ್ರ ಪ್ರವಾದಿ ಮುಹಮ್ಮದ್(ಸ) ರವರ ಧ್ವಜ ಲೋಕದಾದ್ಯಂತ ಹಾರಾಡಲಿಕ್ಕಾಗಿ ಕಳುಹಿಸಿದನು. ಅದನ್ನು ಈಡೇರಿಸುವ ಸೌಭಾಗ್ಯ ಸರ್ವಶಕ್ತನಾದ ಅಲ್ಲಾಹನು ನಮಗೆಲ್ಲರಿಗೂ ದಯಪಾಲಿಸಲಿ."

--------------*****--------------

(ಪುಟ ಸಂಖ್ಯೆ 09ರ ಉಳಿದ ಭಾಗ)

**ಲಂಡನ್‌ನಿಂದ ನಿರ್ಗಮನ ಮತ್ತು ಬಾಂಬೆಯಲ್ಲಿ ಆಗಮನ: ಮುಕ್ತಾಯ ಮಾತುಗಳು:**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಬಹಳಷ್ಟು ದುಆಗಳು ಮತ್ತು ಜಮಾಅತ್‌ನ ಸ್ನೇಹಿತರೊಂದಿಗೆ ಸಮಾಲೋಚನೆಯ ನಂತರ ಯುರೋಪಿನ ಪರಿಸ್ಥಿತಿಯನ್ನು ಪರಿಶೀಲಿಸಲು ಈ ಪ್ರವಾಸಕ್ಕೆ ತೆರಳಲು ನಿರ್ಧರಿಸಿದ್ದರು. ಲಂಡನ್‌ನಲ್ಲಿ, ಒಬ್ಬ ರೆವರೆಂಡ್‌ನ ಕಾರ್ಯದರ್ಶಿ ಹಝ್ರತ್ ಅಖುದ್ದಸ್ ಅವರನ್ನು ಕೇಳಿದರು, ನಿಮಗೆ ಈ ಪ್ರವಾಸದಿಂದ ಏನು ಪ್ರಯೋಜನವಾಯಿತು? ಅದಕ್ಕೆ ಹುಝೂರ್(ರ) ಅವರು ಹೇಳಿದರು: "ಮನುಷ್ಯನ ಮುಂದೆ ಹಗಲು ರಾತ್ರಿ ನೂರಾರು ಬಗೆಯ ಪರಿಸ್ಥಿತಿಗಳು ಮತ್ತು ಯೋಚನೆಗಳಿರುತ್ತವೆ ಆದರೆ ಎಲ್ಲದರ ಬಗ್ಗೆ ಆತನ ಮನಸ್ಸಿನಲ್ಲಿ ತನಿಖೆಯ ಕಲ್ಪನೆಯು ಉದ್ಭವಿಸುವುದಿಲ್ಲ. ನಿರ್ದಿಷ್ಟತೆ ಮತ್ತು ಪ್ರಾಮುಖ್ಯತೆಯ ಮಟ್ಟವನ್ನು ತಲುಪಿದ ಏನನ್ನಾದರೂ ಕಂಡುಕೊಂಡಾಗ ಮಾತ್ರ ವಿಚಾರಣೆಯ ಕಲ್ಪನೆಯು ಮನುಷ್ಯನ ಮನಸ್ಸಿನಲ್ಲಿ ಉದ್ಭವಿಸುತ್ತದೆ.

ಇದಕ್ಕು ಮುಂಚೆ ನಮ್ಮ ಸಂಘಟನೆಗೆ ಜನ ಮನ್ನಣೆ ನೀಡುವಷ್ಟು ಪ್ರಾಮುಖ್ಯತೆ ಇರಲಿಲ್ಲ ಕೆಲವರನ್ನು ಬಿಟ್ಟರೆ ಯಾರು ಸಹ ಹೆಸರಿನಿಂದಲೂ ಜ್ಞಾನ ಹೊಂದಿರಲಿಲ್ಲ ಆದರೆ ಈಗ ನಮ್ಮ ಆಗಮನದಿಂದ ಅಲ್ಲಾಹನು ಎಷ್ಟರ ಮಟ್ಟಿಗೆ ಪ್ರಚಾರ ಹೆಸರು, ಪ್ರಾಮುಖ್ಯತೆ ಪಡೆದಿದೆ ಎಂದರೆ ಎಲ್ಲಾ ಅಡೆ ತಡೆಗಳು ನಮ್ಮ ದಾರಿಯಿಂದ ದೂರವಾಗಿವೆ. ಮತ್ತು ಜನರು ಸಾಮಾನ್ಯವಾಗಿ ನಮ್ಮನ್ನು ತಿಳಿದುಕೊಳ್ಳಲು ಪ್ರಾರಂಭಿಸುತ್ತಿದ್ದಾರೆ ಮತ್ತು ಪ್ರಪಂಚದ ಗಮನವು ನಮ್ಮ ಕಡೆಗೆ ತಿರುಗಲು ಪ್ರಾರಂಭಿಸುತ್ತಿದೆ.

ಈ ಉತ್ತರವನ್ನು ಕೇಳಿದ ಪ್ರಾಂಶುಪಾಲರು ಮತ್ತು ಅವರ ಕಾರ್ಯದರ್ಶಿಗಳು "Very Great Achievement" (ಬಹಳ ದೊಡ್ಡ ಸಾಧನೆ) ಎಂದು ಹೇಳಿದರು.

ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಈ ಸಭೆಯಿಂದ ಹೆಚ್ಚಿನ ಪ್ರಯೋಜನಗಳು ಹೊರಬರುತ್ತವೆ.

ಸರ್ವಶಕ್ತನಾದ ಅಲ್ಲಾಹನ ಕೃಪೆ ಮತ್ತು ಅನುಗ್ರಹದಿಂದ, ಇಂದು, ನೂರು ವರ್ಷಗಳ ನಂತರ, ನಾವು ಯುರೋಪಿನಲ್ಲಿ ಅಹ್ಮದಿಯಾ ಇಸ್ಲಾಂ ಧರ್ಮದ ಪ್ರಚಾರ ಚಟುವಟಿಕೆಗಳನ್ನು ಪಕ್ಷಿನೋಟದಿಂದ ನೋಡಿದಾಗ, ಈ ಭೇಟಿಯ ಗುರಿಗಳು ಮತ್ತು ಉದ್ದೇಶಗಳು 100% ಈಡೇರುತ್ತಿವೆ ಎಂದು ನಾವು ದೃಢವಾಗಿ ಸಾಕ್ಷಿ ಹೇಳುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಭವಿಷ್ಯವಾಣಿಯು ಬಹಳ ವೈಭವದಿಂದ ನೆರವೇರುತ್ತಿದೆ.

ಕೊನೆಯಲ್ಲಿ ದುಆ ಮಾಡುವುದೇನೆಂದರೆ ಸರ್ವಶಕ್ತನಾದ ಅಲ್ಲಾಹನು ನಮಗೆ ಇಸ್ಲಾಮ್ ಅಹ್ಮದಿಯ್ಯತ್‌ನ ಬೋಧನೆಗಳನ್ನು ಯಥಾರ್ಥ ರೂಪದಲ್ಲಿ ಅನುಸರಿಸಲು ಸೌಭಾಗ್ಯ ನೀಡಲಿ. ಆಮೀನ್.

--------------*****--------------

**ಎಲ್ಲರಿಗೂ 129ನೇ ಜಲ್ಸ ಸಾಲಾನ**
**ಖಾದಿಯಾನ್‌ನ ಶುಭಾಷಯಗಳು**

# ವೆಂಬ್ಲೆ ಸಮ್ಮೇಳನದ ವರದಿ ಮತ್ತು ಹಝ್‌ರತ್ ಮುಸ್ಲೆಹ್ ಮೌಊದ್[ರ] ಅವರ ಲೇಖನದ ಕುರಿತು ವಿದ್ವಾಂಸರ ಮತ್ತು ಪತ್ರಿಕೆಗಳ ಪುನರ್‌ವಿಮರ್ಶೆ

(ಮುಸವ್ವಿರ್ ಅಹ್ಮದ್ ಮಸ್ರೂರ್ ಮುಬಲ್ಲಿಗ್ ಸಿಲ್‌ಸಿಲಾ)

ಆತ್ಮೀಯ ಓದುಗರೇ! 1924 ರ ವರ್ಷವು ಅಹ್ಮದಿಯಾ ಜಮಾಅತ್‌ನ ಇತಿಹಾಸದಲ್ಲಿ ಅದರ ಅಭಿವೃದ್ಧಿಯ ದೃಷ್ಟಿಯಿಂದ ಅದ್ಭುತ ಕ್ರಾಂತಿಯ ವರ್ಷವಾಗಿದೆ, ಅದಕ್ಕೆ ಕಾರಣ 1924 ರಲ್ಲಿ ಅಹ್ಮದಿಯಾ ಜಮಾಅತ್‌ನ ಎರಡನೇ ಖಲೀಫರಾದ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹಿಬ್[ರ], ಅವರು ಯುರೋಪ್‌ಗೆ ತಮ್ಮ ಮೊದಲ ಪ್ರವಾಸವನ್ನು ಕೈಗೊಂಡರು. ಈ ಐತಿಹಾಸಿಕ ಮತ್ತು ಅತ್ಯಂತ ಪ್ರಮುಖ ಪ್ರಯಾಣದ ಪರಿಣಾಮವಾಗಿ, ಅಹ್ಮದಿಯಾ ಜಮಾಅತ್ ಹೊಸ ಯುಗವನ್ನು ಪ್ರವೇಶಿಸಿತು ಮತ್ತು ಯುರೋಪ್‌ನಲ್ಲಿ ಇಸ್ಲಾಂನ ವಿಜಯದ ಅಡಿಪಾಯವನ್ನು ಇರಿಸಲಾಯಿತು.

ಆತ್ಮೀಯ ಓದುಗರೇ! ಹಝ್‌ರತ್ ಮುಸ್ಲೆಹ್ ಮೌಊದ್[ರ] ರವರು ಈ ಪ್ರವಾಸ ಕೈಗೊಂಡಿರುವುದಕ್ಕೆ ಮುಖ್ಯ ಮತ್ತು ಪ್ರಮುಖ ಕಾರಣವೆಂದರೆ ಲಂಡನ್‌ನಲ್ಲಿ ನಡೆದ ವೆಂಬ್ಲೆ ಧರ್ಮಗಳ ಸಮ್ಮೇಳನವಾಗಿತ್ತು. ಅದರಲ್ಲಿ ಹಝ್‌ರತ್ ಮುಸ್ಲೆಹ್ ಮೌಊದ್[ರ] ಅವರಿಗೆ ಇಸ್ಲಾಮ್ ಧರ್ಮದ ಪ್ರತಿನಿಧಿಯಾಗಿ ಉಪನ್ಯಾಸ ನೀಡಲು ಅಹ್ವಾನಿಸಲಾಗಿತ್ತು.

ಆದ್ದರಿಂದ, ಈ ಸಮ್ಮೇಳನದ ವರದಿ ಮತ್ತು ಅದರಲ್ಲಿ ಓದಿದ ಹಝ್‌ರತ್ ಮುಸ್ಲೆಹ್ ಮೌಊದ್[ರ] ಅವರ ಉಪನ್ಯಾಸದ ಬಗ್ಗೆ ವಿದ್ವಾಂಸರು ಮತ್ತು ಪತ್ರಿಕೆಗಳ ಕೆಲವು ಅಭಿಪ್ರಾಯಗಳನ್ನು ನಾವು ಈ ಲೇಖನದಲ್ಲಿ ಉಲ್ಲೇಖಿಸುತ್ತೇವೆ.

**ಸಮ್ಮೇಳನದ ಆಯೋಜನೆಯ ಸಂಕ್ಷಿಪ್ತ ಹಿನ್ನೆಲೆ**

ಈ ಸಮ್ಮೇಳನವನ್ನು ಹೇಗೆ ಆಯೋಜಿಸಲಾಯಿತು ಮತ್ತು ಹುಝೂರ್[ರ] ಅವರ ಸೇವೆಯಲ್ಲಿ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಹೇಗೆ ಆಹ್ವಾನವನ್ನು ಸ್ವೀಕರಿಸಿದರು ಎಂಬುದರ ಬಗ್ಗೆ ತಾರೀಖೆ ಅಹ್ಮದಿಯ್ಯತ್‌ನಲ್ಲಿ (ಅಹ್ಮದಿಯಾ ಇತಿಹಾಸದಲ್ಲಿ) ಈ ಕೆಳಕಂಡ ಪದಗಳಲ್ಲಿ ಉಲ್ಲೇಖಿಸಲಾಗಿದೆ:

1924 ರ ಆರಂಭದಲ್ಲಿ, ಇಂಗ್ಲೆಂಡ್‌ನ ಪ್ರಸಿದ್ಧ ವೆಂಬ್ಲೆ ಪ್ರದರ್ಶನದ ಸಮಯದಲ್ಲಿ, ಸಮಾಜವಾದಿ ನಾಯಕ ಶ್ರೀ ವಿಲಿಯಂ ಲೋಫ್ಟಸ್ ಹೇರ್ ಅವರು ಈ ವಿಶ್ವ ಪ್ರದರ್ಶನದೊಂದಿಗೆ ಧಾರ್ಮಿಕ ಸಮ್ಮೇಳನವನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು, ಇದರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಧರ್ಮಗಳ ಪ್ರತಿನಿಧಿಗಳನ್ನು ಈ ಸಮ್ಮೇಳನದಲ್ಲಿ ಭಾಗವಹಿಸಿ ಆಯಾ ಧರ್ಮದ ತತ್ವಗಳ ಮೇಲೆ ಬೆಳಕು ಚೆಲ್ಲಲಿ ಎಂದು ಆಯೋಜಿಸಲಾಗಿತ್ತು. ಓರಿಯಂಟಲಿಸ್ಟ್‌ಗಳು ಸೇರಿದಂತೆ ಪ್ರದರ್ಶನದ ಸಂಘಟಕರು ಈ ಕಲ್ಪನೆಯನ್ನು ಒಪ್ಪಿಕೊಂಡರು ಮತ್ತು ಲಂಡನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್ ಆಶ್ರಯದಲ್ಲಿ ಸಮ್ಮೇಳನವನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಲು ಸಮಿತಿಯನ್ನು ರಚಿಸಲಾಯಿತು.

ಸಮ್ಮೇಳನದ ಸ್ಥಳವನ್ನು ಲಂಡನ್‌ನ ಇಂಪೀರಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿ ನಿಗದಿಪಡಿಸಲಾಯಿತು ಮತ್ತು ದಿನಾಂಕಗಳನ್ನು 22 ಸೆಪ್ಟೆಂಬರ್ 1924 ರಿಂದ 3 ಅಕ್ಟೋಬರ್ 1924 ರವರೆಗೆ ಸೂಚಿಸಲಾಯಿತು. ಸಮಿತಿಯು ಈ ಕೆಳಕಂಡ ಧರ್ಮಗಳಿಂದ ಭಾಷಿಕರನ್ನು ಆಯ್ಕೆ ಮಾಡಿತು. ಹಿಂದೂ ಧರ್ಮ, ಇಸ್ಲಾಂ, ಬೌದ್ಧ ಧರ್ಮ, ಪಾರ್ಸಿ ಧರ್ಮ, ಜೈನ ಧರ್ಮ, ಸಿಖ್ ಧರ್ಮ, ಸೂಫಿಸಂ, ಬ್ರಹ್ಮ ಸಮಾಜ, ಆರ್ಯ ಸಮಾಜ, ಕನ್ಫ್ಯೂಷಿಯನಿಸಂ ಇತ್ಯಾದಿ.

ಹಝ್‌ರತ್ ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ನೈಯರ್ ಅವರು 1923 ರ ಆರಂಭದಿಂದ ಲಂಡನ್‌ನಲ್ಲಿದ್ದರೂ, ಈ ಮಹಾ ಸಮ್ಮೇಳನದ ಪ್ರಸ್ತಾಪದ ಬಗ್ಗೆ ಅವರಿಗೆ ಸಂಪೂರ್ಣ ಜ್ಞಾನವಿರಲಿಲ್ಲ. ಆದರೆ ಸಮಿತಿಯ ರಚನೆಯ ಹೊರತಾಗಿ, ಸ್ಪೀಕರ್‌ಗಳನ್ನು ಸಹ ಪ್ರಸ್ತಾಪಿಸಲಾಯಿತು ಮತ್ತು 1924 ನ ಸ್ವಲ್ಪ ಭಾಗವೂ ಕಳೆದುಹೋದಾಗ, ಯಾರೋ ಒಬ್ಬರು ಸೊಸೈಟಿಯಲ್ಲಿ ಬ್ರಿಸ್ಟಲ್ ಚರ್ಚೆಯನ್ನು ಪ್ರಸ್ತಾಪಿಸಿದರು, ಅದಕ್ಕೆ ಅವರು ಸಮಿತಿಯ ದ್ವೈತ್ಯ ಕಾರ್ಯದರ್ಶಿ ಎಂ. ಎಂ. ಶರಪುಲ್ಜ್ ಅವರನ್ನು ಭೇಟಿಯಾದರು. ಇಸ್ಲಾಮ್ ಧರ್ಮದ ಬಗ್ಗೆ ಅಹ್ಮದಿಯಾ ಜಮಾಅತ್‌ನ ದೃಷ್ಟಿಕೋನವನ್ನು ಪ್ರಸ್ತುತಪಡಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು. ಸಮಿತಿಯಲ್ಲಿ ಪ್ರಸ್ತಾಪಿಸಿದಾಗ, ಸಮಿತಿಯ ಉಪಾಧ್ಯಕ್ಷರಾದ ಡಾ. ಸರ್ ಥಾಮಸ್ ಡಬ್ಲ್ಯೂ. ಅರ್ನಾಲ್ಡ್ (Preaching Of Islamನ ಲೇಖಕ) ಭಾಷಣಕಾರರ ಆಯ್ಕೆಯಲ್ಲಿ ನೈಯರ್ ಸಾಹಿಬ್ ಅವರ ಸಲಹೆಯನ್ನು ಪಡೆಯಬೇಕು ಎಂದು ಸಮಿತಿಯ ಗಮನ ಸೆಳೆದರು. ಆದ್ದರಿಂದ ಉದ್ದೇಶಿತ ಕಾರ್ಯಕ್ರಮವನ್ನು ಹಝ್‌ರತ್ ನೈಯರ್ ಸಾಹಿಬ್ ಅವರೊಂದಿಗೆ ಪರಿಶೀಲಿಸಲಾಯಿತು. ಹಿಂದೂ ಧರ್ಮ ಮತ್ತು ಬೌದ್ಧ ಧರ್ಮದ ಪ್ರತಿನಿಧಿಗಳ ಹೆಸರನ್ನು ಸೂಚಿಸುವುದರ ಹೊರತಾಗಿ, ನೀವು ಸೂಫಿಸಂ ಅನ್ನು ಪ್ರತಿನಿಧಿಸಲು ಹಝ್‌ರತ್ ಸೂಫಿ ಹಾಫಿಝ್ ರೋಷನ್ ಅಲಿ ಸಾಹಿಬ್ ಅವರ ಹೆಸರನ್ನು ಬರೆಸಿದರು. ಆದರೆ ಅದೇ ಸಮಯದಲ್ಲಿ, ಅಹ್ಮದಿಯಾ ಜಮಾಅತ್‌ನ ಇಮಾಮ್ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್[ರ] ಖಲೀಫತುಲ್ ಮಸೀಹ್ ಅಲ್ ಸಾನಿ ಅವರ ಅನುಮತಿಯೊಂದಿಗೆ ಮಾತ್ರ ಹಾಫಿಝ್ ಸಾಹಿಬ್ ಬರಬಹುದು ಎಂದು ಅವರು ಹೇಳಿದರು, ಈ ಹೆಸರುಗಳನ್ನು ಸಮಿತಿಯಲ್ಲಿ ಪ್ರಸ್ತುತಪಡಿಸಿದ್ದಾಗ, ಡಾ. ಅರ್ನಾಲ್ಡ್ ಮತ್ತು ಪ್ರೋ. ಮಾರ್ಗೋಲಿಥ್ ಅವರು ಮತ್ತು ಸಮಿತಿಯ ಎಲ್ಲಾ ಸದಸ್ಯರು ತುಂಬಾ ಪ್ರಾಮಾಣಿಕತೆಯಿಂದ ಹಝ್‌ರತ್ ಖಲೀಫತುಲ್-ಮಸೀಹ್ ಅಲ್-ಸಾನಿ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ಸೇವೆಯಲ್ಲಿ ಭಾಗವಹಿಸಲು ಮತ್ತು ಸೂಫಿ ಸಾಹಿಬ್ ಅವರನ್ನು ಕರೆತರಲು ವಿನಂತಿಸಲು ಪ್ರೀತಿಯಿಂದ ನಿರ್ಧರಿಸಿದರು. ಅದೇ ರೀತಿಯಲ್ಲಿ, ಹಝ್‌ರತ್ ಖಲೀಫತುಲ್ ಮಸೀಹ್ ಅಲ್-ಸಾನಿ[ರ] ಅವರ ಸೇವೆಯಲ್ಲಿ ಇಂಗ್ಲೆಂಡಿನ ಮುಖ್ಯಸ್ಥ ಓರಿಯಂಟಲಿಸ್ಟ್‌ಗಳಿಂದ ಆಹ್ವಾನ ಪತ್ರ ಲಭಿಸಿತು. (ತಾರೀಖೆ ಅಹ್ಮದಿಯ್ಯತ್, ಸಂಪುಟ-4, ಪುಟ-422-423)

1924 ರಲ್ಲಿ ಲಂಡನ್‌ನಲ್ಲಿ ನಡೆದ ಈ ಧರ್ಮ ಸಮ್ಮೇಳನದ ಅಧ್ಯಕ್ಷರಾಗಿದ್ದ ಸರ್ ಇ ಡೆನಿಸನ್ ರಾಸ್ ಈ ಸಮ್ಮೇಳನದ ಸಂಘಟನೆಯ ಬಗ್ಗೆ ಹೇಳುತ್ತಾರೆ:

"ಸಾಮ್ರಾಜ್ಯದೊಳಗೆ ಕೆಲವು ಜೀವಂತ ಧರ್ಮಗಳು" ಎಂಬ ವಿಷಯದ ಮೇಲೆ ನಡೆದ ಈ ಸಮ್ಮೇಳನವು 1923 ರ ಆರಂಭದಲ್ಲಿ ಶ್ರೀ ಲೋಫ್ಟಸ್-ಹರೇ ಅವರಿಂದ ನಾನು ಸ್ವೀಕರಿಸಿದ ಪತ್ರಕ್ಕೆ ನನಗೆ ತುಂಬಾ ಖುಶಿಯಾಗಿದ್ದೇನೆ. ಈ ಪತ್ರದಲ್ಲಿ ಅವರು 1924ರಲ್ಲಿ ಆಯೋಜಿಸಬೇಕಾದ ಬ್ರಿಟಿಷ್ ಎಂಪೈರ್ ಎಕ್ಸಿಬಿಷನ್‌ನಲ್ಲಿ ಸರ್ವಧರ್ಮಗಳ ಬಗ್ಗೆ ಒಂದು ಸಮ್ಮೇಳನವನ್ನು ಆಯೋಜಿಸಬೇಕು ಎಂದು ಅಭಿರಾಪಟ್ಟಿದ್ದರು, ಅದರಲ್ಲಿ ಆಗ ವಿವಿಧ ವಿಷಯಗಳ ಮೇಲೆ ಸಮ್ಮೇಳನಗಳನ್ನು ಆಯೋಜಿಸಲು ಯೋಜಿಸಲಾಗುತ್ತಿತ್ತು. ನಾನು, ಪ್ರತ್ಯುತ್ತರವಾಗಿ, ಈ ವಿಚಾರವನ್ನು ಒಪ್ಪಿಕೊಂಡೆ, ಆದ್ದರಿಂದ, ಮೊದಲನೆಯದಾಗಿ, ಸಮ್ಮೇಳನದಲ್ಲಿ ಯಾವುದೇ ವಿವಾದಾತ್ಮಕ ಚರ್ಚೆಯಾಗಬಾರದು ಮತ್ತು ಎರಡನೆಯದಾಗಿ, ಪ್ರತಿಯೊಂದು ಧರ್ಮವನ್ನು ಆ ಧರ್ಮದ ಅನುಯಾಯಿಯಾದ ವ್ಯಕ್ತಿ ಪ್ರತಿನಿಧಿಸಬೇಕು.

ಶ್ರೀ. ಹರೇ ಮತ್ತು ಅವರ ಕೆಲವು ಸ್ನೇಹಿತರು ನಂತರ ಪ್ರದರ್ಶನದ ಅಧಿಕಾರಿಗಳನ್ನು ಸಂಪರ್ಕಿಸಿದರು ಮತ್ತು ಅಂತಿಮವಾಗಿ ನಮಗೆ ಸೆಪ್ಟೆಂಬರ್ ಅಂತ್ಯದಲ್ಲಿ ಮತ್ತು ಅಕ್ಟೋಬರ್ 1924 ರ

ಆರಂಭದಲ್ಲಿ ಹತ್ತು ದಿನಗಳ ಕಾಲ ಪ್ರದರ್ಶನದಲ್ಲಿ ಅವಕಾಶ ಕಲ್ಪಿಸಲಾಯಿತು.(Religions Of the Empire, Page No. 3)

**ವೆಂಬ್ಲೆ ಸಮ್ಮೇಳನದಲ್ಲಿ ಭಾಗವಹಿಸಲು ಹುಝೂರ್(ರ) ಅವರ ಸಲಹೆ ಮತ್ತು ಅವರ ಸ್ವಂತ ಅಭಿಪ್ರಾಯ**

ಸರ್ವಧರ್ಮ ಸಮ್ಮೇಳನಕ್ಕೆ ಸೇರುವ ಕರೆ ಹಝ್ರತ್ ಅಖದ್ದಸ್(ರ) ಅವರ ಸೇವೆಯನ್ನು ತಲುಪಿದಾಗ, ಹುಝೂರ್(ರ) ಅವರು ಮೇ 16, 1924 ರಂದು ಅಸರ್ ನಮಾಝ್ ನಂತರ ಮಜ್ಲಿಸ್ ಶುರಾ ಅನ್ನು ಕರೆದರು ಮತ್ತು ಸಮ್ಮೇಳನದಲ್ಲಿ ಭಾಗವಹಿಸಲು ಯಾರನ್ನು ಕಳುಹಿಸಬೇಕು ಎಂದು ಖಾದಿಯಾನ್‌ನ ಸ್ನೇಹಿತರಿಂದ ಸಲಹೆ ಕೇಳಿದರು. ಈ ಮಜ್ಲಿಸ್ ಶೂರಾದಲ್ಲಿ ಹಾಜರಿದ್ದ 16 ಸದಸ್ಯರಲ್ಲಿ ಖಮರುಲ್ ಅಂಬಿಯಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಮತ್ತು ಹಝ್ರತ್ ಮೌಲವಿ ಅಬ್ದುರ್ರಹೀಮ್ ಸಾಹಿಬ್ ದರ್ದ್ ಸೇರಿದಂತೆ 11 ಸದಸ್ಯರು ಹೀಗೆ ಸಲಹೆಯನ್ನು ನೀಡಿದರು: ಇಸ್ಲಾಂ ಧರ್ಮ ಮತ್ತು ಅಹ್ಮದಿಯ್ಯತ್‌ನ ಪ್ರಚಾರಕ್ಕೆ ಇದು ಬಹಳ ವಿಶೇಷವಾದ ಸಂದರ್ಭವಾಗಿದೆ, ಆದ್ದರಿಂದ, ಹುಝೂರ್(ರ) ಸ್ವತಃ ಖುದ್ದಾಗಿ ಹಾಜರಾಗಿದ್ದರೆ ಅದು ಸೂಕ್ತವಾಗಿರುತ್ತದೆ. ಮಜ್ಲಿಸ್ ಶೂರಾದಲ್ಲಿ ಹಾಜರಿದ್ದ ಅನ್ಯ ಸದಸ್ಯರೂ ಕೂಡ ಈ ಅಭಿಪ್ರಾಯವನ್ನು ಬಲವಾಗಿ ಬೆಂಬಲಿಸಿದರು.

ಖಾದಿಯಾನ್‌ನ ಸ್ನೇಹಿತರಿಂದ ಸಲಹೆಯನ್ನು ಕೇಳಿದ ನಂತರ, ಹಝ್ರತ್ ಮುಸ್ಲೆಹ್ ಮೌಊದ್(ರ) ಈ ವಿಷಯದ ಬಗ್ಗೆ ಖಾದಿಯಾನ್‌ನ ಹೊರಗಿನ ಜಮಾಅತ್ ಸ್ನೇಹಿತರಿಗೆ ಪತ್ರವನ್ನು ಕಳುಹಿಸಿ ಇದರ ಬಗ್ಗೆ ಅಭಿಪ್ರಾಯ ಕೋರಿದರು ಮತ್ತು ಈ ಪತ್ರದಲ್ಲಿ, ಸರ್ವಧರ್ಮ ಸಮ್ಮೇಳನವನ್ನು ಉಲ್ಲೇಖಿಸುವಾಗ ಮತ್ತು ಅದರಿಂದ ಉಪದೇಶ ಮಾಡುವುದರಿಂದ ಆಗಬಹುದಾದ ಪ್ರಯೋಜನಗಳ ಬಗ್ಗೆ, ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಜಮಾಅತ್ ಸ್ನೇಹಿತರನ್ನು ಉದ್ದೇಶಿಸಿ ಈ ಪತ್ರದಲ್ಲಿ ಹೀಗೆ ಹೇಳಿದರು:

ಎರಡು ವರ್ಷಗಳಿಂದ ವ್ಯಾಪಾರ ಪ್ರದರ್ಶನಕ್ಕಾಗಿ ಪ್ರಾಂತ್ಯದಲ್ಲಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ ಎಂದು ನಿಮಗೆ ತಿಳಿದಿರಬಹುದು, ಇದರಲ್ಲಿ ಎಲ್ಲಾ ರೀತಿಯ ಉತ್ಪನ್ನಗಳು ಮತ್ತು ಇಂಗ್ಲಿಷ್ ಪ್ರಾಬಲ್ಯದ ಎಲ್ಲಾ ಭಾಗಗಳ ಉದ್ಯಮದ ವಸ್ತುಗಳನ್ನು ಪ್ರದರ್ಶಿಸಲಾಗುತ್ತದೆ ಮತ್ತು ಈ ಪ್ರದರ್ಶನವು ಈಗ ತೆರೆಯಲ್ಪಟ್ಟಿದೆ ವ್ಯಾಪಾರದ ಅಭಿವೃದ್ಧಿ ಮತ್ತು ದೇಶಗಳ ಪರಸ್ಪರ ಸಂಬಂಧವನ್ನು ಗಟ್ಟಿಗೊಳಿಸುವ ದೃಷ್ಟಿಯಿಂದ ಇದನ್ನು ನೋಡಲು ಸುಮಾರು ಎರಡು ಕೋಟಿ ಜನರು ಬರುತ್ತಾರೆ ಎಂದು ಅಂದಾಜಿಸಲಾಗಿದೆ. ಆದ್ದರಿಂದ, ಈ ದಿನಗಳಲ್ಲಿ, ಪ್ರಪಂಚದ ಮೂಲೆ ಮೂಲೆಗಳಿಂದ ವಿದ್ಯಾವಂತ ಪುರುಷರು ಇಂಗ್ಲೆಂಡ್‌ನಲ್ಲಿ ಒಟ್ಟುಗೂಡುತ್ತಾರೆ ಮತ್ತು ಇಡೀ ಪ್ರಪಂಚವು ಈ ಸ್ಥಳದಲ್ಲಿ ಸಣ್ಣ ಪ್ರಮಾಣದಲ್ಲಿ ಸೇರುತ್ತದೆ. ಚೈನೀಸ್, ಜಪಾನೀಸ್, ಅಮೆರಿಕನ್ನರು, ರಷ್ಯನ್ನರು, ಫ್ರೆಂಚ್, ಜರ್ಮನ್, ಟರ್ಕ್ಸ್, ಅರಬ್ಬರು, ಈಜಿಪ್ಟಿನವರು, ಇರಾನಿಯನ್ನರು, ಆಫ್ಘನ್ನರು, ಭಾರತೀಯರು ಮತ್ತು ಇತರ ವಿದ್ಯಾವಂತ ಮತ್ತು ಬುದ್ಧಿವಂತ ಜನರು ಅಲ್ಲಿ ಸೇರುತ್ತಾರೆ ಮತ್ತು ಅಂತಹ ಸಭೆ ಆರು ತಿಂಗಳವರೆಗೆ ಇರುತ್ತದೆ.

ಈ ಕೂಟದ ಲಾಭವನ್ನು ಪಡೆದುಕೊಂಡು, ಇಂಗ್ಲೆಂಡಿನ ಧಾರ್ಮಿಕ ಅಭಿರುಚಿ ಹೊಂದಿರುವವರು ಸೆಪ್ಟೆಂಬರ್ ಅಂತ್ಯದಲ್ಲಿ ಮತ್ತು ಅಕ್ಟೋಬರ್ ಆರಂಭದಲ್ಲಿ ಧಾರ್ಮಿಕ ಸಭೆಯನ್ನು ನಡೆಸುವಂತೆ ಸೂಚಿಸಿದ್ದಾರೆ. ಇದರಲ್ಲಿ ಪ್ರತಿಯೊಂದು ಧರ್ಮದ ಜನರು ತಮ್ಮ ಧರ್ಮದ ಸತ್ಯಾಂಶವನ್ನು ಬಹಿರಂಗವಾಗಿ ವಿವರಿಸಬೇಕು ಮತ್ತು ಇಡೀ ಜಗತ್ತು ಅವರ ನಿಜವಾದ ನಂಬಿಕೆ ಮತ್ತು ಉದ್ದೇಶವನ್ನು ತಿಳಿದುಕೊಳ್ಳಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಸಂಘವು ತನ್ನ ಸಭೆಯಲ್ಲಿ ಭಾಷಣವನ್ನು ಓದಲು ನನ್ನನ್ನು ಆಹ್ವಾನಿಸಿದೆ ಮತ್ತು ನಾನೇ ಸ್ವತಃ ಅಲ್ಲಿಗೆ ಹೋಗಿ ನನ್ನ ಜಮಾಅತ್ತಿನ ಬಗ್ಗೆ ಜ್ಞಾನ ಮತ್ತು ಪರಿಚಯವನ್ನು ಅವರಿಗೆ ನೀಡುವಂತೆ ವಿನಂತಿಸಿದೆ. ತಬ್ಲೀಗ್ ಮಾಡಲು ಅಂತಹ ಉತ್ತಮ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ, ಏಕೆಂದರೆ ಇಡೀ ಪ್ರಪಂಚದ ದೇಶಗಳ ಅತ್ಯುನ್ನತ ವರ್ಗದ ಜನರನ್ನು ಇಷ್ಟೊಂದು ಹೇರಳವಾಗಿ ಮತ್ತು ಇಡೀ ಜಗತ್ತೇ ಒಂದೇ ಸಮಯದಲ್ಲಿ ಒಟ್ಟುಗೂಡಿಸುವಂತೆ ಮಾಡಲು ಅಂತಹ ಅವಕಾಶವಿಲ್ಲ ಮತ್ತು ಹೀಗೆ ಪ್ರತಿದಿನ ಕಂಡುಬರುವುದಿಲ್ಲ. ಈ ಪ್ರದರ್ಶನದ ಬಗ್ಗೆ, ಬ್ರಿಟಿಷರಿಗೆ ನೂರು ವರ್ಷಗಳ ಕಾಲ ಇಷ್ಟು ದೊಡ್ಡ ಪ್ರದರ್ಶನವನ್ನು ನಡೆಸುವುದು ಕಷ್ಟ ಎಂದು ನಂಬಲಾಗಿದೆ. ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಕುಳಿತು ಇಡೀ ಜಗತ್ತಿಗೆ ದೇವರ ಸಂದೇಶವನ್ನು ತಲುಪಿಸಿ ಲಕ್ಷಾಂತರ ಜನರಿಗೆ ಜಮಾಅತ್ತಿನ ನೈಜತೆಯ ಬಗ್ಗೆ ಅರಿವು ಮೂಡಿಸಬಹುದು ಮತ್ತು ಈ ಮಾಧ್ಯಮದ ಮೂಲಕ ಜಮಾಅತ್ತಿನ ಬಗ್ಗೆ ಪ್ರಪಂಚದ ಮೂಲೆ ಮೂಲೆಯಲ್ಲಿರುವವರಿಗೂ ತಿಳಿಸಬಹುದು.

(ತಾರೀಖೇ ಅಹ್ಮದಿಯ್ಯತ್, ಸಂಪುಟ-4, ಪುಟ 423-424)

ಖಾದಿಯಾನ್‌ನ ಸ್ನೇಹಿತರಿಂದ ಸಲಹೆಯನ್ನು ಕೇಳಿದ ನಂತರ, ಹುಝೂರ್(ರ) ಅವರು ಜಮಾಅತ್ತಿನ ಸ್ನೇಹಿತರ ಮುಂದೆ ಈ ಪತ್ರದಲ್ಲಿ ಹುಝೂರ್(ರ) ರ ಈ ಮಾತುಗಳಲ್ಲಿ ಬರೆದಿದ್ದಾರೆ:

"ಈ ಸಲಹೆಯ ನಂತರ, ನನ್ನ ಅಭಿಪ್ರಾಯವು ನನ್ನ ನಿರ್ಗಮನದ ನಂತರ ಈ ದೇಶಗಳ ಕಾರ್ಯಾಚರಣೆಗಳನ್ನು ಬಲಪಡಿಸಬೇಕು ಏಕೆಂದರೆ ಚಲಿಸುವುದು ಮತ್ತು ಮೌನವಾಗಿರುವುದು ಸರಿಯಲ್ಲ ಏಕೆಂದರೆ ಅದು ಹೆಚ್ಚು ಹಾನಿಯನ್ನುಂಟುಮಾಡುತ್ತದೆ ಮತ್ತು ಬಲಪಡಿಸಿದರೆ ಹೆಚ್ಚು ಹಣವನ್ನು ವ್ಯಚ್ಚ ಮಾಡಬೇಕಾಗುತ್ತದೆ. ಮತ್ತೆ ನಾನು ಅಲ್ಲಿಗೆ ಹೋದರೆ ನನ್ನ ಜೊತೆ ಜಾಸ್ತಿ ಜನ ಇರೋದ್ರಿಂದ ಜಾಸ್ತಿ ರೂಪಾಯಿ ಖರ್ಚಾಗುತ್ತದೆ. ಜಮಾಅತ್‌ನ ಮೇಲೆ ಈಗಾಗಲೇ ಹೊರೆ ಜಾಸ್ತಿ ಆಗಿರುವುದರಿಂದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಮತ್ತು ಹಾಫಿಝ್ ರೋಶನ್ ಅಲಿ ಸಾಹಿಬ್ ರವರನ್ನು ಕಳಿಸಬೇಕು ಎಂದು ನನಗೆ ಅನಿಸಿಕೆ." (ತಾರೀಖ್ ಅಹ್ಮದಿಯ್ಯತ್, ಸಂಪುಟ-4, ಪುಟ-425)

ಎರಡ್ಮೂರು ದಿನಗಳ ನಂತರ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ತಮ್ಮ ನಿರ್ಗಮನದ ಬಗ್ಗೆ ಕ್ಷಮೆಯನ್ನು ನೀಡಿದರು ಮತ್ತು ಅಷ್ಟರಲ್ಲಿ ಅವರನ್ನು ಸಮ್ಮೇಳನಕ್ಕೆ ಸೇರಿಸಿಕೊಳ್ಳುವ ಬಗ್ಗೆ ಮತ್ತೆ ಲಂಡನ್‌ನಿಂದ ಕರೆ ಬಂದಿತು ಮತ್ತು ಹಾಗೆಯೇ ಜಮಾಅತ್‌ನ ತೊಂಬತ್ತು ಪ್ರತಿಶತದಷ್ಟು ಸ್ನೇಹಿತರ ಅಭಿಪ್ರಾಯವನ್ನು ಹುಝೂರ್(ರ) ಸ್ವತಃ ಭಾಗವಹಿಸಬೇಕು ಎಂದು ಅಭಿಪ್ರಾಯಪಟ್ಟರು. ಮತ್ತೆ ಹಝ್ರತ್ ಮುಸ್ಲೆಹ್ ಮೌಊದ್(ರ) ಮತ್ತು ಸುಮಾರು 40 ಸ್ನೇಹಿತರು ಸಹ ಇಸ್ತಿಖಾರಾ (ವಿಶೇಷ ದುಆ) ಮಾಡಿದರು. ಇದರಿಂದ ಹುಝೂರ್(ರ) ಸ್ವತಃ ಈ ಪ್ರಯಾಣಕ್ಕೆ ಹೋಗಬೇಕೆಂದು ದೈವಿಕ ವಿಧಿ ಬಹಿರಂಗಪಡಿಸಿತು.

ಆದ್ದರಿಂದ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ತಮ್ಮ ಧಾರ್ಮಿಕ ಕರ್ತವ್ಯಗಳಿಗೆ ಮೊದಲ ಸ್ಥಾನವನ್ನು ನೀಡುತ್ತಾ ಮತ್ತು ಮನಃಪೂರಕದೊಂದಿಗೆ ಪ್ರಯಾಣ ಮಾಡಲು ನಿರ್ಧರಿಸಿದರು.

**ವೆಂಬ್ಲೆ ಸರ್ವಧರ್ಮ ಸಮ್ಮೇಳನದಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಲೇಖನದ ಬಗ್ಗೆ ಕೆಲವು ಪ್ರಮುಖ ಅಂಶಗಳು:**

* ಮೇ 24, 1924 ರಂದು, ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಸಮ್ಮೇಳನಕ್ಕಾಗಿ "ಅಹ್ಮದಿಯ್ಯತ್ ಯಾನಿ ಹಖೀಖಿ ಇಸ್ಲಾಮ್" ಎಂಬ ಲೇಖನವನ್ನು ಬರೆಯಲು ಪ್ರಾರಂಭಿಸಿದರು.

* ಹುಝೂರ್(ರ) ಅವರು ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ತೀವ್ರವಾದ ಶಾಖೆಯಲ್ಲಿ ಮತ್ತು ಶಾಖದಲ್ಲಿ ನಿರತರಾಗಿರಬೇಕಾಯಿತು. ಹಾಗಾಗಿ ಅವರು ಸ್ವತಃ ಹೇಳುತ್ತಾರೆ:

"ಪ್ರಬಂಧ ಬರೆಯುವ ದಿನಗಳಲ್ಲಿ ರಾತ್ರಿ ಹನ್ನೆರಡು ಗಂಟೆಯವರೆಗೂ ಮತ್ತು ಕೆಲವೊಮ್ಮೆ ಎರಡು ಗಂಟೆಯವರೆಗೆ ಕುಳಿತುಕೊಳ್ಳಬೇಕಾಗಿತ್ತು. ಈ ಬಿಸಿ ಋತುವಿನಲ್ಲಿ, ಹಗಲು ಕೆಲಸವು ಕಷ್ಟಕರವಾಗಿರುವಾಗ, ರಾತ್ರಿಯ ಹೊತ್ತಿನಲ್ಲಿ ದೀಪದ ಬೆಳಕಿನಲ್ಲಿ ಹನ್ನೆರಡು ಗಂಟೆಯವರೆಗೆ ಕೆಲಸ ಮಾಡುವುದು ಕಷ್ಟದ ಕೆಲಸವಾಗಿದೆ

ಮತ್ತು ನನ್ನಂತಹ ದುರ್ಬಲ ಆರೋಗ್ಯದ ಮನುಷ್ಯನಿಗೆ ಅಸಾಧ್ಯವೆಂದು ತೋರುತ್ತದೆ."

* ಹಗಲು ರಾತ್ರಿಯ ಕಠಿಣ ಪರಿಶ್ರಮ ಹಾಗೂ ಸರ್ವಶಕ್ತನಾದ ಅಲ್ಲಾಹನ ಸಹಾಯ ಮತ್ತು ಬೆಂಬಲದೊಂದಿಗೆ ಲೇಖನವನ್ನು ಬರೆಯುವ ಕೆಲಸ ಜೂನ್ 6, 1924 ರಂದು ಪೂರ್ಣಗೊಂಡಿತು.

* ಪರಿಷ್ಕರಣೆ ಮತ್ತು ಅನುವಾದ ಮತ್ತು ಅದರ ತಿದ್ದುಪಡಿಯ ಕೆಲಸವನ್ನು ಹುಝೂರ್(ರ) ಅವರು ಮಾನ್ಯ ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್, ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್ ಮತ್ತು ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ ಅವರಿಗೆ ವಹಿಸಿದ್ದರು.

* ಹಝ್ರತ್ ಮೌಲ್ವಿ ಅಬ್ದುಲ್ ರಹೀಮ್ ಸಾಹಿಬ್ ಅವರು ಇಂಗ್ಲಿಷ್ ಡ್ರಾಫ್ಟ್ ಟೈಪಿಂಗ್ ಮತ್ತು ಸ್ಪರ್ಧೆಯ ಜವಾಬ್ದಾರಿಯನ್ನು ಹೊಂದಿದ್ದರು.

* ಅವರು ಜುಲೈ 2, 1924 ರಂದು ಲೇಖನದ ಇಂಗ್ಲಿಷ್ ಅನುವಾದವನ್ನು ಪೂರ್ಣಗೊಳಿಸಿದರು ಮತ್ತು ಜುಲೈ 3, 1924 ರಂದು, ಅದರ ಪ್ರತಿಯನ್ನು ಧಾರ್ಮಿಕ ಸಮ್ಮೇಳನದ ಸಂಘಟಕರಿಗೆ ಕಳುಹಿಸಲಾಯಿತು.

* "ಅಹ್ಮದಿಯತ್ ಯಾನಿ ಹಖೀಖಿ ಇಸ್ಲಾಂ" ಲೇಖನವು ತುಂಬಾ ಉದ್ದವಾಗಿದೆ ಎಂದು ನೋಡಿದ ನಂತರ, ಅವರು(ರ) ಅದರ ವಿಷಯವನ್ನು ಸಂಕ್ಷಿಪ್ತಗೊಳಿಸಿ ಹೊಸ ಲೇಖನವನ್ನು ಬರೆಯಲು ನಿರ್ಧರಿಸಿದರು.

* ಜುಲೈ 2, 1924 ರಂದು, ಹುಝೂರ್(ರ) ಅವರು ಈ ಹೊಸ ಲೇಖನವನ್ನು ಬರೆಯುವಲ್ಲಿ ನಿರತರಾದರು ಮತ್ತು ಜುಲೈ 9 ರಂದು ರಾತ್ರಿ ಹನ್ನೊಂದು ಗಂಟೆಗೆ "ಸಿಲ್‌ಸಿಲಾ ಅಹ್ಮದಿಯಾ" (AHMADIYYA MOVEMENT) ಎಂಬ ಹೊಸ ಲೇಖನವನ್ನು ಪೂರ್ಣಗೊಳಿಸಲಾಯಿತು ಮತ್ತು ನಂತರ ಅದರ ಸಾರಾಂಶವನ್ನು ಸಮ್ಮೇಳನದಲ್ಲಿ ಓದಲಾಯಿತು.
(ತಾರೀಖೆ ಅಹ್ಮದಿಯ್ಯತ್, ಸಂಪುಟ-4, ಪುಟ 429-430)

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ತಮ್ಮ ಸಹಚರರೊಂದಿಗೆ ಜುಲೈ 21, 1924 ರಂದು ಖಾದಿಯಾನ್ ಅನ್ನು ತೊರೆದರು ಮತ್ತು ಆಗಸ್ಟ್ 22, 1924 ರಂದು ಸುಮಾರು 6 ಗಂಟೆಗೆ ಲಂಡನ್‌ನ ಪ್ರಸಿದ್ಧ ವಿಕ್ಟೋರಿಯಾ ನಿಲ್ದಾಣವನ್ನು ತಲುಪಿದರು.

**ಸರ್ವಧರ್ಮ ಸಮ್ಮೇಳನದ ಸಂಘಟನಾ ಸಮಿತಿಯ ಸದಸ್ಯರು ಮತ್ತು ಸಮ್ಮೇಳನದಲ್ಲಿ ಮಾಡಿದ ಉಪನ್ಯಾಸಗಳ ವಿವರಾತ್ಮಕ ವರದಿ**

**ಸಮ್ಮೇಳನದ ಕಾರ್ಯಕಾರಿ ಸಮಿತಿ:**

ಸಮಿತಿಯ ಅಧ್ಯಕ್ಷರು
SIR E. Denison Ross, C.I.E., PH.D.
ಸಮಿತಿಯ ಉಪಾಧ್ಯಕ್ಷ
SIR Thomas W. Arnold, C.I.E., D.LITT
Mr. Victor Branford
Mr. F.C Channing
Prof. Alice Werner, L.L.A
Mrs. C. Rhys Davids, D.Litt
Rev. W. Sutton page. B.D., O.B.E
Rev. J. Tyssul Davis
Rev. A.S geden, D.D
Sir Francis Younghusband, K.C.S.I., K.C.I.E
Prof. Margoliouth, D.Litt
ಗೌರವ ಕೋಶಾಧಿಕಾರಿ
Mr. Leonard c. Soper
ಗೌರವಾನ್ವಿತ ಕಾರ್ಯದರ್ಶಿಗಳು
Miss. M.M. Sharpels
Mr. W. Loftus Hare
(Relegions If the Empire)

ಆತ್ಮೀಯ ಓದುಗರೇ! ಈ ಸಮ್ಮೇಳನದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳನ್ನು ಸೇರಿಸಿಕೊಳ್ಳಲಾಗಿದೆ ಎಂದು ಈಗಾಗಲೇ ಹೇಳಿರುವಂತೆ ಪ್ರತಿ ಧರ್ಮದವರು ತಮ್ಮ ಧರ್ಮದ ಸತ್ಯವನ್ನು ಬಹಿರಂಗವಾಗಿ ವಿವರಿಸಿ ಇಡೀ ಜಗತ್ತನ್ನು ತಮ್ಮ ಧರ್ಮವನ್ನಾಗಿ ಮಾಡಬೇಕೆಂಬುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿತ್ತು ಮತ್ತು ಉದ್ದೇಶವಾಗಿದೆ. ಅದರಂತೆ ನಿಜವಾದ ನಂಬಿಕೆ ಮತ್ತು ಉದ್ದೇಶವನ್ನು ತಿಳಿದುಕೊಳ್ಳಬೇಕು, ಈ ಸಮ್ಮೇಳನದಲ್ಲಿ ಮಾಡಿದ ಉಪನ್ಯಾಸಗಳ ವಿವರಗಳನ್ನು ಓದುಗರಿಗೆ ನೋಡುವಂತೆ ಕೆಳಗೆ ದಾಖಲಿಸಲಾಗುತ್ತಿದೆ.

**ಸಾಮಾನ್ಯ ಅಂಶ**

1: ಪರಿಚಯ:
ಸರ್ ಇ. ಡೆನಿಸನ್ ರಾಸ್.
2: ಆಧುನಿಕ ಧಾರ್ಮಿಕ ಸಮಾಲೋಚನೆಯ ರೂಪರೇಖೆ
ವಿಲಿಯಂ ಲೋಫ್ಟಸ್ ಹೇರ್.
3: ಉದ್ಘಾಟನಾ ಸಂಬೋಧನೆ
ಸರ್ ಫ್ರಾನ್ಸಿಝಿಂಗ್ ಹಝ್‌ಬೆಂಡ್.

**ಹಿಂದೂ ಧರ್ಮ**

ಹಿಂದೂ ಧರ್ಮದ ಉಪನ್ಯಾಸಗಳ ವಿವರಗಳು ಹೀಗಿವೆ:
1: ಹಿಂದೂ ಧರ್ಮದ ಐತಿಹಾಸಿಕ ಟಿಪ್ಪಣಿಗಳು
ಡಾ. ಎ.ಎಸ್.ಗೆಡನ್.
2: ಸಾಂಪ್ರದಾಯಿಕ ಹಿಂದೂ ಧರ್ಮ (ಆರ್ಥೊಡಾಕ್ಸ್ ಹಿಂದೂ ಧರ್ಮ) ಅಥವಾ ಸನಾತನ ಧರ್ಮ
ಪಂಡಿತ್ ಶ್ಯಾಮ್ ಶಂಕರ್ (ಎಂ.ಎ) ಬನಾರಸ್.
3: ಹಿಂದೂ ತತ್ವಶಾಸ್ತ್ರದ ಧಾರ್ಮಿಕ ಅಂಶ
ಪಂಡಿತ್ ಡಿಕೆ ಲಾಡೂ.

**ಇಸ್ಲಾಂ**

ಇಸ್ಲಾಂ ಧರ್ಮದ ಉಪನ್ಯಾಸಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:
1: ಇಸ್ಲಾಂ ಬಗ್ಗೆ ಐತಿಹಾಸಿಕ ಟಿಪ್ಪಣಿ
ಪ್ರೊಫೆಸರ್ ಮಾರ್ಗೋಲಿತ್ ಅವರಿಂದ
2: ಇಸ್ಲಾಮಿನ ಮೂಲ ತತ್ವಗಳು
ಅಲ್‌ಹಾಜ್ ಖ್ವಾಜಾ ಕಮಾಲುದ್ದೀನ್ ಅವರಿಂದ
3: ಇಸ್ಲಾಂನ ಆತ್ಮ
ಮುಸ್ತಫಾ ಖಾನ್ (ಲಾಹೋರ್) ಅವರಿಂದ
4: ಇಸ್ಲಾಂನ ಶಿಯಾ ಶಾಖೆ
ಶೇಖ್ ಖಾದಿಮ್ ಅವರಿಂದ
5: ಇಸ್ಲಾಂನಲ್ಲಿ ಅಹ್ಮದಿಯಾ ಚಳುವಳಿ
ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಖಲೀಫತುಲಗ ಮಸೀಹ್ ಖಾದಿಯಾನ್ ಅವರಿಂದ
6: ಸೂಫಿಸಂ ಕುರಿತ ಐತಿಹಾಸಿಕ ಟಿಪ್ಪಣಿ
ಸರ್ ಪ್ಯಾಟ್ರಿಕ್ ಫಾಗನ್ ಸಿ.ಎಸ್.ಐ., ಕೆ.ಸಿ.ಐ.ಇ
7: ಆಧ್ಯಾತ್ಮ
ಸೂಫಿ ಹಾಫಿಝ್ ರೋಶನ್ ಅಲಿ ಅವರಿಂದ

**ಬೌದ್ಧಧರ್ಮ**

ಬೌದ್ಧ ಧರ್ಮದ ಉಪನ್ಯಾಸಗಳ ವಿವರಗಳು ಈ ಕೆಳಗಿನಂತಿವೆ:
1: ಬೌದ್ಧಧರ್ಮದ ಐತಿಹಾಸಿಕ ಟಿಪ್ಪಣಿ
ರೈಸ್ ಡೇವಿಡ್ಸ್ ಅವರಿಂದ
2: ಸಿಲೋನ್‌ನಲ್ಲಿ ಬೌದ್ಧಧರ್ಮದ ಸ್ಥಿತಿ ಮತ್ತು ಪ್ರಭಾವ
ಡಾ. ಡಬ್ಲ್ಯೂ.ಎ. ಡಿ. ಸಿಲ್ವಾ (ಕೊಲಂಬೊ) ಅವರಿಂದ

3: ಸಿಲೋನ್‌ನಲ್ಲಿ ಶಿಕ್ಷಣದ ಮೇಲೆ ಬೌದ್ಧಧರ್ಮದ ಪ್ರಭಾವ
ಜಿ.ಪಿ.ಮಲ್ಲಾಲಶೇಖರ ಅವರಿಂದ
4: ಮಹಾಯಾನ ಬೌದ್ಧಧರ್ಮ
ಶ್ರೀ ಶೋಸುನೆ ಮಿಯಾಮೊಟೊ ಅವರಿಂದ (ಟೋಕಿಯೊ)

**ಸಣ್ಣ ಭಾರತೀಯ ಧರ್ಮಗಳು**

ಸಿಖ್ ಧರ್ಮ, ಜೈನ ಧರ್ಮ ಮುಂತಾದ ಸಣ್ಣ ಭಾರತೀಯ ಧರ್ಮಗಳ ಕುರಿತು ಉಪನ್ಯಾಸಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:
1: ಐತಿಹಾಸಿಕ ಟಿಪ್ಪಣಿಗಳು
ಸರ್ ಪ್ಯಾಟ್ರಿಕ್ ಫಾಗನ್ ಸಿ.ಎಸ್.ಐ., ಕೆ.ಸಿ.ಐ.ಇ
2: ಝೋರಾಸ್ಟ್ರಿಯನ್ ಧರ್ಮ: ಪರ್ಷಿಯನ್ನರ ಧರ್ಮ
ಶಂಸುಲ್ ಉಲಮಾ ದಸ್ತೂರ್ ಕೈಕೋಬಾದ್ ಆದರಬಾದ್ ನೊಶಿರ್ವಾನ್ ಅವರಿಂದ, ಪಿಎಚ್.ಡಿ., ಪುಣೆ
3: ಜೈನಧರ್ಮ
ರಾಯ್ ಬಹದ್ದೂರ್ ಜಗಮಂದರ್ ಲಾಲ್ ಜೈನಿ ಅವರಿಂದ
ಎಂ.ಎ., ಎಂ.ಆರ್.ಎ.ಎಸ್. , ಇಂದೋರ್
4: ಸಿಖ್ ಧರ್ಮ
ಸರ್ದಾರ್ ಖಾನ್ ಸಿಂಗ್ (ನಭಾ) ಅವರಿಂದ

**ಚೀನೀ ಧರ್ಮ**

ಚೀನೀ ಧರ್ಮದ ಕುರಿತು ಉಪನ್ಯಾಸಗಳ ವಿವರಗಳು ಹೀಗಿವೆ:
1: ಟಾವೊ ತತ್ವದ ಮೇಲೆ ಐತಿಹಾಸಿಕ ಟಿಪ್ಪಣಿ
Mr. G.R.S. MEAD, B.A
2: ತಾವೊ ತತ್ವ
Mr. HSU TI-SHAN

**ಆಧುನಿಕ ಚಳುವಳಿಗಳು**

ಆಧುನಿಕ ಚಳುವಳಿಗಳು ಕೆಳಕಂಡಿವೆ:
1: ಐತಿಹಾಸಿಕ ಟಿಪ್ಪಣಿಗಳು
Rev. W.Sutton Page, O.B.E
2: ಬ್ರಹ್ಮ ಸಮಾಜ
Mr. N.C.Sen, O.B.E
3: ಆರ್ಯ ಸಮಾಜ
ಪ್ರೊ. ಎಸ್.ಎನ್.ಫೆರ್ವಾನಿ (ಶಿಕಾರ್ಪುರ್) ಅವರಿಂದ
4: ಬಹಾಯಿ ಚಳುವಳಿ.
ಈ ಲೇಖನವನ್ನು ಕೆನಡಾದ ಶ್ರೀ ಮೌಂಟ್‌ಫೋರ್ಡ್ ಮಿಲ್ಸ್ ಅವರು ಬಹಾಯಿ ಅಸೆಂಬ್ಲಿಯ ಪರವಾಗಿ ಓದಿದ್ದಾರೆ.
5: ಜೀವನದ ಮೇಲೆ ಬಹಾಯಿಯ ಪ್ರಭಾವ
ಶ್ರೀ ರೂಹಿ ಅಫ್ನಾನ್ (ಹೈಫಾ) ಅವರಿಂದ

**ಪ್ರಾಚೀನ ಧರ್ಮ**

ಸಮ್ಮೇಳನದಲ್ಲಿ ಪ್ರಾಚೀನ ಧರ್ಮಗಳ ಕುರಿತು ಈ ಕೆಳಗಿನ ಉಪನ್ಯಾಸಗಳನ್ನು ನೀಡಲಾಯಿತು:
1: ಪ್ರಾಚೀನ ಧರ್ಮದ ಬಗ್ಗೆ ಪರಿಚಯಾತ್ಮಕ ಟಿಪ್ಪಣಿ
Prof. Alice Warner, L.L.A
2: ಮಾವೋರಿ ನಂಬಿಕೆಗಳ ಕೆಲವು ಅವಲೋಕನ
The Venerable Archceacon Williams ಅವರಿಂದ
3: ಪೂರ್ವ ಆಫ್ರಿಕಾದ ಕೆಲವು ಬುಡಕಟ್ಟುಗಳ ನಂಬಿಕೆಗಳು
ಶ್ರೀ ರಿಚರ್ಡ್ ಸೇಂಟ್ ಬಾರ್ಬ್ ಬೇಕರ್ (ಕೀನ್ಯಾ ಕಾಲೋನಿಯ ಲೇಟ್)
4: ಬಂಟು ಧಾರ್ಮಿಕ ವಿಚಾರಗಳು
ಶ್ರೀ ಆಲ್ಬರ್ಟ್ ಥೋಕಾ ಅವರಿಂದ (ಪೀಟರ್ಸ್‌ಬರ್ಗ್ ದಕ್ಷಿಣ ಆಫ್ರಿಕಾ)
5: ಪೂರ್ವ ಆಫ್ರಿಕಾದ ನೀಗ್ರೋ ಧರ್ಮದ ಕೆಲವು ಅಂಶಗಳು :
MR.L.W.G.MALCOMM,F.R.S.E. ಮೂಲಕ
(ನೈಜೀರಿಯಾದ ದಿವಂಗತ ಕ್ಯಾಪ್ಟನ್ ರೆಜಿಟಿ)

**ಧರ್ಮಗಳ ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರ**

1: ಪರಿಚಯಾತ್ಮಕ ಟಿಪ್ಪಣಿ
ವಿಲಿಯಂ ಲೋಫ್ಟಸ್ ಹೇರ್ ಅವರಿಂದ
2: ಮನುಷ್ಯ ಮತ್ತು ಪ್ರಕೃತಿ
ಸರ್ ಫ್ರಾನ್ಸಿಸ್ ಯಂಗ್‌ಹಸ್ಬೆಂಡ್ ಅವರಿಂದ
3: ಎ ನ್ಯಾಚುರಲಿಸ್ಟ್ ವ್ಯೂ ಆಫ್ ರಿಲಿಜನ್
ಪ್ರೊಫೆಸರ್ ಜೆ. ಆರ್ಥರ್ ಥಾಂಪ್ಸನ್, ಎಲ್.ಎಲ್.ಡಿ.
4: ಪ್ರಾಚೀನ ವೃತ್ತಿಗಳು: ಅವರ ತತ್ವಗಳು ಮತ್ತು ಪ್ರಲೋಭನೆಗಳು
ಶ್ರೀ ವಿಕ್ಟರ್ ಬ್ರಾನ್‌ಫೋರ್ಡ್ ಅವರಿಂದ, ಎಂ.ಎ.
5: ಪವಿತ್ರ ಮಾರ್ಗಗಳು ಮತ್ತು ಪವಿತ್ರ ಸ್ಥಳಗಳು
PROF. H.J Fleure D.Sc ಅವರಿಂದ.
6: ಪವಿತ್ರ ನಗರದ ಪರಿಕಲ್ಪನೆ
ಶ್ರೀಮತಿ. ರಾಚೆಲ್ ಅನ್ನಂಡ್ ಟೇಲರ್
7: ಧರ್ಮ ಮತ್ತು ನಾಗರಿಕತೆಯ ಜೀವನ
ಶ್ರೀ ಕ್ರಿಸ್ಟೋಫರ್ ಡಾಸನ್ ಅವರಿಂದ
8: ಆದರ್ಶ ವ್ಯಕ್ತಿ
ಶ್ರೀ ವಿಲಿಯಂ ಲೋಫ್ಟಸ್ ಹೇರ್ ಅವರಿಂದ
9: ಜೀವನದ ನಕ್ಷೆಯಲ್ಲಿ ಧರ್ಮ
ಪ್ರೊಫೆಸರ್ ಪ್ಯಾಟ್ರಿಕ್ ಗೆಡ್ಡಿಸ್ ಅವರಿಂದ

**ಸಮಾರೋಪ ಸಮಾರಂಭ**

1: ಸಾಮಾನ್ಯ ಅವಲೋಕನ
ಶ್ರೀ ವಿಕ್ಟರ್ ಬ್ರಾನ್‌ಫೋರ್ಡ್ ಅವರಿಂದ, ಎಂ.ಎ.
2: ಸಾರಾಂಶ:
REV. Tyssul Davis, B.A,
(Relegions Of the Empire)

ಆತ್ಮೀಯ ಓದುಗರೇ, ಮೇಲೆ ಹೇಳಿದಂತೆ, ವೆಂಬ್ಲೆ ಧಾರ್ಮಿಕ ಸಮ್ಮೇಳನದಲ್ಲಿ ಇಸ್ಲಾಂ ಧರ್ಮದ ಶ್ರೇಷ್ಠತೆ ಮತ್ತು ದೃಢೀಕರಣವನ್ನು ಸಾಬೀತುಪಡಿಸಲು ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಸಿದ್ಧಪಡಿಸಿದ "ಮರಾಕತ್ ಅಲ್-ಅರಾ" ಲೇಖನ. **"AHMADIYYA OR TRUE ISLAM"** "ಅಹ್ಮದಿಯಾ ಅಥವಾ ನಿಜವಾದ ಇಸ್ಲಾಂ" ಅನ್ನು ಪ್ರಪಂಚದಾದ್ಯಂತ ಪ್ರಸಿದ್ಧವಾಗಿದೆ. ಈ ಲೇಖನದಲ್ಲಿ ಇಸಲಾಮ್ ಧರ್ಮದ ಮೂಲ ಬೋಧನೆಗಳು ಮತ್ತು ಅದರ ತತ್ವಗಳನ್ನು ಬಹಳ ಸಾಕ್ಷ್ಯಾಧಾರಗಳೊಂದಿಗೆ ಸೂಕ್ಷ್ಮವಾಗಿ ವಿವರಿಸಲಾಯಿತು. ಆದ ಕಾರಣ ಸಮ್ಮೇಳನದ ಉದ್ದೇಶಿತ ಸಮಯದಲ್ಲಿ ಅದನ್ನು ವಿವರಿಸಲು ಸಾಧ್ಯವಾಗಲಿಲ್ಲ, ಆದ್ದರಿಂದ ಹುಝೂರ್ ಅವರು ಒಂದು ಸಂಕ್ಷಿಪ್ತ ಲೇಖನವನ್ನು ಅದರ ಶೀರ್ಷಿಕೆ **"ಅಹ್ಮದಿಯಾ ಮೂವ್‌ಮೆಂಟ್"** ಎಂದು ಬರೆದರು.

ಓದುಗರೇ, 1924 ರ ಸೆಪ್ಟೆಂಬರ್ 23 ರಂದು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಲೇಖನವನ್ನು ಸರ್ವಧರ್ಮ ಸಮ್ಮೇಳನದಲ್ಲಿ ಓದಲಾಯಿತು. ಈ ವಿಶಿಷ್ಟ ಲೇಖನದಿಂದ ಅಹ್ಮದಿಯಾ ಜಮಾಅತಿನ ಖ್ಯಾತಿಯು ಇನ್ನಷ್ಟು ಉಜ್ವಲವಾಯಿತು ಹೀಗೆ ಯುರೋಪಿನಲ್ಲಿ ಇಸ್ಲಾಮಿನ ಆಧ್ಯಾತ್ಮಿಕ ವಿಜಯದ ಬುನಾದಿ ಇರಿಸಲಾಯಿತು.

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಪ್ರಬಂಧದ ಸಮಯವನ್ನು ಸಂಜೆ 5 ಗಂಟೆಗೆ ನಿಗದಿಪಡಿಸಲಾಯಿತು ಮತ್ತು ಅದು ಅಂದು ಮೂರನೇ ಪ್ರಬಂಧವಾಗಿತ್ತು. ಅದಕ್ಕೂ ಎರಡು ಗಂಟೆಗಳ ಮೊದಲು ಇಸ್ಲಾಂ ಧರ್ಮದ ಬಗ್ಗೆ ಲೇಖನಗಳನ್ನು ಆಲಿಸುತ್ತಿದ್ದರು, ಲಂಡನ್‌ನ ಜನರಿಗೆ ಹೆಚ್ಚು ಹೊತ್ತು ಕುಳಿತುಕೊಳ್ಳುವ

ಅಭ್ಯಾಸವಿಲ್ಲ ಮತ್ತು ಹುಝೂರ್(ರ) ಅವರ ಲೇಖನಕ್ಕೆ ಪ್ರೇಕ್ಷಕರು ಎಷ್ಟು ಹಾಜರಾಗುತ್ತಾರೆ ಎಂದು ತಿಳಿದಿರಲಿಲ್ಲ. ಆದರೆ ಹುಝೂರ್(ರ) ಅವರ ಲೇಖನವನ್ನು ಕೇಳಲು ಪ್ರೇಕ್ಷಕರು ಕೊನೆಯವರೆಗೂ ಕುಳಿತಿದ್ದರು. ವಿಶೇಷವಾಗಿ ಹುಝೂರ್(ರ) ಅವರ ಲೇಖನವನ್ನು ಆಲಿಸಲು ಲೇಖನ ಪ್ರಾರಂಭವಾದಾಗ ಅನೇಕ ಜನರು ಆಗಮಿಸಿದರು. ಸಭಾಂಗಣವು ತುಂಬಿ ತುಳುಕುತ್ತಿತ್ತು.

ಸೈಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಈ ಲೇಖನವನ್ನು ಕೇಳಲು ಜನರು ಎಷ್ಟು ಆಸಕ್ತಿ ಹೊಂದಿದ್ದರು ಎಂಬುದನ್ನು ಆ ಸಮಯದಲ್ಲಿ ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಹಝ್ರತ್ ಭಾಯಿ ಅಬ್ದುಲ್ ರಹಮಾನ್ ಸಾಹಿಬ್(ರ) ಖಾದಿಯಾನಿ ಅವರ ಮಾತುಗಳಿಂದ ಅಳೆಯಬಹುದು. ಹಝ್ರತ್ ಭಾಯಿ ಅಬ್ದುರ್ರಹ್ಮಾನ್ ಸಾಹಿಬ್ ಖಾದಿಯಾನಿ(ರ) ಬರೆಯುತ್ತಾರೆ:

**"**ಹುಝೂರ್ ಅವರ ಉಪನ್ಯಾಸದ ಮೊದಲು, ಚಹಾಕ್ಕಾಗಿ ಜನರಿಗೆ ಅರ್ಧ ಘಂಟೆಯ ವಿರಾಮವನ್ನು ನೀಡಲಾಯಿತು. ಆದರೆ ಅನೇಕ ಮಹಿಳೆಯರು ಮತ್ತು ಪುರುಷರು ಮುಂದಿನ ಸಾಲುಗಳಲ್ಲಿ ಸ್ಥಾನ ಪಡೆಯಲು ಚಹಾವನ್ನು ಸಹ ಕುಡಿಯಲು ಹೋಗಲಿಲ್ಲ ಎಂದು ನಾನು ನೋಡಿದೆ. ಮತ್ತು ಅತೀ ಶೀಘ್ರದಲ್ಲಿ ಜನರು ಓಡುತ್ತಾ ಹಿಂದಿರುಗಿದರು. ಇಲ್ಲಿ ಜನರಿಗೆ ಸಾಮಾನ್ಯವಾಗಿ ಆರಾಮವಾಗಿ ಕುಳಿತುಕೊಳ್ಳುವ ಅಭ್ಯಾಸವಿರುತ್ತದೆ ಆದ್ದರಿಂದ ಅವರು ತಮ್ಮ ಸುತ್ತಲೂ ಇದ್ದ ಕುರ್ಚಿಯ ಮೇಲೆ ಟೋಪಿ ಅಥವಾ ಕೈಚೀಲ ಇತ್ಯಾದಿಗಳನ್ನಿರಿಸಿ ಜಾಗವನ್ನು ಹಿಡಿದಿರುತ್ತಾರೆ. ಆದರೆ ಈ ವಿಷಯಗಳು ಈ ಉಪನ್ಯಾಸದಲ್ಲಿ ಇರಲಿಲ್ಲ, ಹೇಗೆ ಜನರು ಜಲ್ಸದ ದಿನಗಳಲ್ಲಿ ಮಸ್ಜಿದ್ ಮುಬಾರಕ್‌ನಲ್ಲಿ ಬೆಳಿಗ್ಗೆ ನಮಾಝ್‌ಗಾಗಿ ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳಲು ಓಡುತ್ತಿರುತ್ತಾರೆ ಅಥವಾ ಹಝ್ರತ್ ಸಾಹಿಬರ ಭಾಷಣ ಆಲಿಸಲು ಬರುತ್ತಾರೆ ಹಾಗೆಯೇ ಈ ಉತ್ಸಾಹ ಮತ್ತು ಪ್ರೀತಿಯಿಂದ ಜನರು ಮುಂದಿನ ಜಾಗ ಪಡೆಯಲು ಓಡೋಡಿ ಬರುತ್ತಿದ್ದರು.**"** (ಅಲ್-ಫಝಲ್ ದಿನಾಂಕ ಅಕ್ಟೋಬರ್ 23, 1924, ಪುಟ ಅಂಕಣ-3)

ಈ ಲೇಖನವನ್ನು ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್ ಅವರು ಹುಝೂರ್(ರ) ಅವರ ಆದೇಶದ ಮೆರೆಗೆ ವೆಂಬ್ಲೆ ಧಾರ್ಮಿಕ ಸಮ್ಮೇಳನದಲ್ಲಿ ಓದಿದರು, ಹುಝೂರ್(ರ) ಅವರು ತಮ್ಮ ಎಲ್ಲಾ ಸಹಚರರೊಂದಿಗೆ ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಇಲ್ಲಿ ಒಂದು ವಿಷಯ ತಿಳಿಸಲು ಬಯಸುತ್ತೇನೆ ಹಝ್ರತ್ ಚೌಧರಿ ಸಾಹಿಬ್ ಅವರು ಲೇಖನವನ್ನು ಓದಲು ಎದ್ದಾಗ ಹುಝೂರ್(ರ) ಅವರಿಗೆ ಕಿವಿಯಲ್ಲಿ ಹೀಗೆ ಹೇಳಿದರು **"ಭಯಪಡಬೇಡ ನಾನು ದುಆ ಮಾಡುತ್ತೇನೆ"** ಹಝ್ರತ್ ಚೌಧರಿ ಸಾಹಿಬ್ ಅವರಂತಹ ನುರಿತ ಉಪನ್ಯಾಸಕರಿಗೆ ಈ ಮಾತುಗಳು ಮತ್ತು ಹೆಚ್ಚು ದೈವಿಕ ಸಹಾಯ ಮತ್ತು ನಂಬಿಕೆಗೆ ಕಾರಣವಾಯಿತು ಮತ್ತು ಈ ಭಾಷಣವನ್ನು ಎಲ್ಲಾ ಸಭಿಕರು ಬಹಳ ಗಾಂಭೀರ್ಯದಿಂದ ಆಲಿಸಿದರು.

ಸೈಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಈ ಲೇಖನದ ಬಗ್ಗೆ ಬುದ್ಧಿಜೀವಿಗಳು ಮತ್ತು ಪತ್ರಿಕೆಗಳ ಅಭಿಪ್ರಾಯಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

ಮೊದಲಿಗೆ ವಿನೀತನು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಮಾತುಗಳಲ್ಲಿ ಈ ಲೇಖನದ ಯಶಸ್ಸಿನ ಬಗ್ಗೆ ಉಲ್ಲೇಖಿಸಲು ಬಯಸುತ್ತೇನೆ.

ಸರ್ವಧರ್ಮ ಸಮ್ಮೇಳನದಲ್ಲಿ ಯಶಸ್ವಿ ಉಪನ್ಯಾಸ ಮತ್ತು ಅದರ ಪರಿಣಾಮದ ಬಗ್ಗೆ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೆಪ್ಟೆಂಬರ್ 25, 1924 ರಂದು ಬರೆದ ಖಾದಿಯಾನ್ ಜನರಿಗೆ ತಮ್ಮ ಸಂದೇಶದಲ್ಲಿ ಹೀಗೆ ಹೇಳುತ್ತಾರೆ:

* **"**ಸಹೋದರರೇ! ಅಸ್ಸಲಾಮು ಅಲೈಕುಮ್. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ನಮ್ಮ ಉಪನ್ಯಾಸವು ಬಹಳ ಯಶಸ್ವಿಯಾಗಿದೆ ಎಂದು ನಿಮಗೆ ತಿಳಿದಿರಬಹುದು ಮತ್ತು ನಮ್ಮ ಉಪನ್ಯಾಸದಲ್ಲಿ ಸೇರಿದಷ್ಟು ಜನರು ಬೇರೆ ಯಾವುದೇ ಉಪನ್ಯಾಸದಲ್ಲಿ ಸೇರಿರಲಿಲ್ಲ ಮತ್ತು ಜನರು ಬಹಳ ಎಚ್ಚರಿಕೆಯಿಂದ ಆಲಿಸಿದರು ಮತ್ತು ಇತರರು ತಮ್ಮ ಅಭಿನಂದನೆಗಳನ್ನು ನೀಡಿದರು ಮತ್ತು ಅರ್ಧ ಘಂಟೆಯವರೆಗೆ ವಿವಿಧ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದರು.

(ಅಲ್-ಫಝಲ್, ಅಕ್ಟೋಬರ್ 16, 1924, ಪುಟ-1, ಕಾಲಮ್-2)

ಲೇಖನದ ಕೊನೆಯಲ್ಲಿ, ಸಭೆಯ ಅಧ್ಯಕ್ಷರಾದ ಶ್ರೀ ಥಿಯೋಡರ್ ಮಾರಿಸನ್ ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು:

* **"**ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಲೇಖನದ ಗುಣಮಟ್ಟ ಮತ್ತು ಸೂಕ್ಷ್ಮತೆಯನ್ನು ಲೇಖನದಿಂದಲೇ ಮೌಲ್ಯಮಾಪನ ಮಾಡಲಾಗಿದೆ. ನನ್ನ ಮತ್ತು ಸಭೆಯಲ್ಲಿ ಭಾಗವಹಿಸಿದವರ ಪರವಾಗಿ ನಾನು ಲೇಖನವನ್ನು ಉತ್ತಮವಾಗಿ ಆಯೋಜಿಸಿದ್ದಕ್ಕಾಗಿ, ಉತ್ತಮ ಆಲೋಚನೆಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ನಾನು ವಿಶೇಶವಾಗಿ ಖಲೀಫತುಲ್ ಮಸೀಹ್ ಅವರಿಗೆ ಧನ್ಯವಾದ ಹೇಳುತ್ತೇನೆ.**"**

(ಸವಾನೆಹ್ ಫಝ್ಲೆ ಉಮರ್, ಸಂಪುಟ-3, ಪುಟ-79)

ಹಝ್ರತ್ ಭಾಯಿ ಅಬ್ದುಲ್ ರಹಮಾನ್ ಸಾಹಿಬ್ ಖಾದಿಯಾನಿ ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಜೊತೆಯಲ್ಲಿದ್ದರು ಮತ್ತು ಈ ಉಪನ್ಯಾಸದ ಸಮಯದಲ್ಲಿ ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದವರು. ಅವರು ಹುಝೂರ್(ರ) ಅವರ ಲೇಖನದ ಯಶಸ್ವಿ ಮತ್ತು ಜನರ ಮೇಲೆ ಲೇಖನದ ಪ್ರಭಾವದ ಕುರಿತು ಕೆಲವು ಅನಿಸಿಕೆಗಳನ್ನು ವ್ಯಕ್ತ ಪಡಿಸಿದ್ದಾರೆ ಅದು **1924 ರ ಅಕ್ಟೋಬರ್ 23 ರ ಅಲ್-ಫಝಲ್** ನಲ್ಲಿ ಪ್ರಕಟಿಸಲಾಗಿದೆ ಅದನ್ನು ಓದುಗರಿಗೆ ನೋಡುವಂತೆ ಕೆಳಗೆ ನಮೂದಿಸಲಾಗುತ್ತಿದೆ.

ಹಝ್ರತ್ ಭಾಯಿ ಅಬ್ದುಲ್ ರಹಮಾನ್ ಸಾಹಿಬ್ ಖಾದಿಯಾನ್(ರ) ಬರೆಯುತ್ತಾರೆ:

* ಓರ್ವ ಸಜ್ಜನರು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಸನ್ನಿಧಿಗೆ ಬಂದು ಹೇಳಿದರು ನಾನು ಭಾರತದಲ್ಲಿ ಮೂವತ್ತು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ ಮತ್ತು ನಾನು ಭಾರತದಲ್ಲಿ ಮಿಷನರಿಯಾಗಿ ವಾಸಿಸುತ್ತಿರುವುದರಿಂದ ಮುಸ್ಲಿಮರ ಪರಿಸ್ಥಿತಿಗಳು ಮತ್ತು ವಾದಗಳನ್ನು ಅಧ್ಯಯನ ಮಾಡಿದ್ದೇನೆ. ಈ ಲೇಖನವನ್ನು ವಿಚಾರಗಳ ದೃಷ್ಟಿಯಿಂದ, ರಚನೆಯ ದೃಷ್ಟಿಯಿಂದ ಮತ್ತು ವಾದಗಳ ವಿಷಯದಲ್ಲಿ ಕೇಳುವುದರಿಂದ ನಾನು ಆಳವಾಗಿ ಪ್ರಭಾವಿತನಾಗಿದ್ದೇನೆ. ಅಭಿನಂದನೆಗಳು ಭಾಷೆ ಕೂಡ ಚೆನ್ನಾಗಿತ್ತು ಮತ್ತು ಎಲ್ಲರೂ ಚೆನ್ನಾಗಿ ಕೇಳಬಹುದು ಮತ್ತು ಪದಗಳು ಮತ್ತು ಅರ್ಥಗಳನ್ನು ಅನುಸರಿಸಬಹುದು.

* ಮತ್ತೊಬ್ಬ ಮಹಾನುಭಾವರು ಬಂದು ಹೇಳಿದರು: ಬಹಳ ಉತ್ತಮ ಭಾಷೆಯಾಗಿತ್ತು, ಇದು ಹದಿನೆಂಟನೇ ಶತಮಾನದ ಭಾಷೆಯಾಗಿತ್ತು. ಪ್ರಸ್ತುತ ಕಾಲದ ಭಾಷೆಯಾಗಿರಲಿಲ್ಲ. ಲೇಖನವು ಅದ್ಭುತ ಹಾಗೂ ಆಕರ್ಷಕವಾಗಿತ್ತು.

* ಮತ್ತೋರ್ವ ಮಹಾನುಭಾವರು ಬಂದು ಹೀಗೆ ಹೇಳಿದರು: ನಾನು ಈ ಲೇಖನವನ್ನು ಆಲಿಸಲು ಫ್ರಾನ್ಸ್‌ನಿಂದ ಬಂದಿರುವೆನು. ನಾನು ಇಸ್ಲಾಂ ಧರ್ಮಕ್ಕಿಂತ ಕ್ರೈಸ್ತಧರ್ಮವನ್ನು ಆದ್ಯತೆ ನೀಡುತ್ತಿದ್ದೆ. ಮತ್ತು ಇಸ್ಲಾಮ್ ಧರ್ಮವನ್ನು ಬೌದ್ಧಧರ್ಮದ ಮೇಲೆ ಆದ್ಯತೆ ನೀಡುತ್ತಿದ್ದೆ ಆದರೆ ಈಗ ನಾನು ನಿಮ್ಮ ಲೇಖನವನ್ನು ಆಲಿಸಿದ್ದೇನೆ ಮತ್ತು ಬೌದ್ಧ ಧರ್ಮವನ್ನು ಆಲಿಸಿದ್ದೇನೆ. ನೀವು ಪ್ರಸ್ತುತಪಡಿಸಿದ ಇಸ್ಲಾಮ್ ಧರ್ಮದ ಗುಣಮಟ್ಟವನ್ನು ಬೇರೆ ಧರ್ಮದವರು ಸ್ಥಧಿಸಲು ಸಾಧ್ಯವಿಲ್ಲ ನಿಸ್ಸಂದೇಹವಾಗಿಯು ಇಸ್ಲಾಮ್ ಧರ್ಮವು ಸರ್ವಧರ್ಮಗಳಿಂದ ಉತ್ತಮವಾಗಿದೆ. ಈಗ ಇದು ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿದೆ.

* ಒಬ್ಬ ದೊಡ್ಡ ಆದರೆ ಗಟ್ಟಿಮುಟ್ಟಾದ ಮತ್ತು ಎತ್ತರದ ಆಂಗ್ಲರು ವಿದೇಶಿಯರಂತೆ ವೇಷಧರಿಸಿ ಚೌಧರಿ ಸಾಹಿಬ್ ಅವರ ಬಳಿಗೆ ಬಂದು ಹೇಳಿದರು: ನಾನು ನಿಮ್ಮನ್ನು ಧನ್ಯವಾದಗಳನ್ನು

ಅರ್ಪಿಸುತ್ತೇನೆ, ನಾನು ವೃದ್ಧನಾಗಿದ್ದೇನೆ ಮತ್ತು ಸ್ವಲ್ಪ ಕಿವುಡವೂ ಆಗಿದ್ದೇನೆ ಮತ್ತು ಕೊನೆಯವರೆಗೂ ಕುಳಿತಿದ್ದೆ. ಆದರೆ ನಾನು ನಿಮ್ಮ ಪ್ರತಿ ಪದವನ್ನು ಆಲಿಸಿದ್ದೇನೆ ಮತ್ತು ಅರ್ಥಮಾಡಿಕೊಂಡಿದ್ದೇನೆ.

ಚೌಧ'ರಿ ಸಾಹಿಬ್ ಹೇಲಿದರು: ಇದು ನನ್ನ ಮಾತೃಭಾಷೆಯಲ್ಲ. ನನ್ನ ಉಚ್ಚಾರಣೆಯು ಅರ್ಥವಾಗುವುದಿಲ್ಲ ಎಂದು ನಾನು ಹೆದರುತ್ತಿದ್ದೆ. ಅದಕ್ಕೆ ಆ ಆಂಗ್ಲ ವ್ಯಕ್ತಿ ಹೇಳಿದರು: ಇಲ್ಲ, ನಾವೆಲ್ಲರೂ ಸಹೋದರರು. ನೀವು ಬಹಳ ಉತ್ತಮವಾಗಿ ಲೇಖನವನ್ನು ಓದಿದ್ದೀರಿ ಮತ್ತು ಎಲ್ಲರಿಗೂ ಬಹಳ ಉತ್ತಮವಾಗಿ ಅರ್ಥವಾಗಿದೆ.

* ಒಬ್ಬ ಆಂಗ್ಲರು ಹೇಳಿದರು:

Well Put (ಉತ್ತಮವಾಗಿ ಹೇಳಿದ್ದೀರಿ)

Well Arranged

(ಚೆನ್ನಾಗಿ ಆಯೋಜಿಸಲಾಗಿದೆ)

Well Dealth with

(ಚೆನ್ನಾಗಿ ಚರ್ಚಿಸಲಾಗಿದೆ)

* ಇದೇ ಸಮ್ಮೇಳನದ ಕಾರ್ಯದರ್ಶಿಯಾಗಿರುವ ಶ್ರೀ ಲೋಫ್ಟಸ್ ಹೇರ್ ಅವರು ಶ್ರೀ ಚೌಧರಿ ಸಾಹಿಬ್ ಅವರಿಗೆ ಹೇಳಿದರು:

Your Lecture was the Best Heard So far ಇಲ್ಲಿಯವರೆಗೆ ಕೇಳಿದ ಎಲ್ಲಾ ಉಪನ್ಯಾಸಗಳಲ್ಲಿ ನಿಮ್ಮದು ಅತ್ಯುತ್ತಮವಾಗಿತ್ತು.

* ಶ್ರೀಮತಿ ಶಾರ್ಪಲ್ಸ್ ಅವರು ಈ ಸಮ್ಮೇಳನದ ಕಾರ್ಯದರ್ಶಿಯೂ ಆಗಿದ್ದಾರೆ. ಅವರು ಚೌಧರಿ ಸಾಹಿಬ್ ಅವರಿಗೆ ಹೇಳಿದರು, ಅನುವಾದವು ನಿಮಗೆ ಸಂಭವಿಸಿದೆಯೇ? ಹೌದು ಎಂದು ಕೇಳಿದ ನಂತರ ಅವರು ಹೇಳಿದರು: ನಾನು ಅದಕ್ಕಾಗಿ ನಿಮ್ಮನ್ನು ಕೃತಜ್ಞತೆಗಳನ್ನ ಅರ್ಪಿಸುತ್ತೇನೆ. ಮತ್ತೆ ಅದೇ ಮಹಿಳೆ ಹೇಳುತ್ತಾರೆ: ಜನರು, ಮಹಿಳೆಯರು ಮತ್ತು ಪುರುಷರು ನನ್ನ ಬಳಿ ಬಂದು ತುಂಬಾ ಹೊಗಳುತ್ತಾರೆ. ಅವರಲ್ಲಿ ಕೆಲವರು ಹೀಗೆ ಹೇಳಿದರು:

He Seems to be Luther Of the Age. (ಅವರು ಈ ಯುಗದ ಲೂಥರ್ (ಸುಧಾರಕ) ಎಂದು ತೋರುತ್ತದೆ.)

ಕೆಲವರು ನನಗೆ ಹೇಳಿದರು:

There Is A Fire In Him ಅವನಲ್ಲಿ ಬೆಂಕಿ ಇದೆ.

ಈ ಮಾತುಗಳನ್ನು ಹಝ್ರತ್ ಮುಸ್ಲೆಹ್ ಮೌಊದ್[ರ] ಕುರಿತು ಉಲ್ಲೇಖಿಸಲಾಗಿದೆ.

* ಆಗ ಅದೇ ಶ್ರೀಮತಿ ಶಾರ್ಪಲ್ಸ್ ಹೇಳಿದರು: ನನ್ನ ಬಳಿಗೆ ಒಬ್ಬ ಆಂಗ್ಲರು ಬಂದು ಹೇಳಿದರು: ನೀವು ನನ್ನನ್ನು ಚಹಾಕ್ಕೆ ಆಹ್ವಾನಿಸಲಿಲ್ಲ, ಆದರೆ ನನಗೆ ಒಳಗೆ ಹೋಗಲು ಅನುಮತಿ ನೀಡಿ ನಾನು ಒಳಗೆ ಹೋಗಿ ಭಾರತದಿಂದ ಇಸ್ಲಾಮ್ ಧರ್ಮವನ್ನು ಪರಿಚಯಿಸಿದ ವ್ಯಕ್ತಿಯನ್ನು ಮತ್ತು ಅವರು ಅಹ್ಮದಿಯರ ಸರದಾರರಾಗಿದ್ದಾರೆ ಅವರನ್ನು ನಾನು ನೋಡಲು ಬಯಸುತ್ತೇನೆ. ಆ ವ್ಯಕ್ತಿಯು ಹಝ್ರತ್ ಸಾಹಿಬ್ ಅವರನ್ನು ಭೇಟಿಯಾದರು, ಮಾತನಾಡಿದರು ಮತ್ತು ಮೌಲವಿ ಮುಬಾರಕ್ ಅಹ್ಮದ್ ಸಾಹಿಬ್ ಅವರನ್ನು ಉದ್ದೇಶಿಸಿ ಹೇಳಿದರು: ನಾನು ಬೌದ್ಧಧರ್ಮದ ಕರಪತ್ರಗಳನ್ನು ಆಲಿಸಿದ್ದೇನೆ ಮತ್ತು ಇತರರ ಕರಪತ್ರಗಳನ್ನು ಆಲಿಸಿದ್ದೇನೆ. It Was For The Best Of All Papers.

ಇದು ಎಲ್ಲಾ ಪೇಪರ್‌ಗಳಲ್ಲಿ ಅತ್ಯುತ್ತಮವಾಗಿತ್ತು.

* ಇಲ್ಲಿ ಪ್ರೊಫೆಸರ್ ಆಗಿರುವ ಒಬ್ಬ ಜರ್ಮನ್ ವ್ಯಕ್ತಿ ಸಮ್ಮೇಳನದಿಂದ ಹಿಂತಿರುಗುತ್ತಿದ್ದಾಗ ಮುಂದೆ ಹೋಗಿ ಹುಝೂರ್[ರ] ಅವರನ್ನು ಅಭಿನಂದಿಸುತ್ತಾ ಹೇಳಿದರು: ನಾನು ನೋಡಿದೆ ಸಮ್ಮೇಳನದಲ್ಲಿ ನನ್ನ ಬಳಿ ಕೆಲವು ದೊಡ್ಡ ಆಂಗ್ಲರು ಕುಳಿತಿದ್ದರು ಅವರು ತಮ್ಮ ತೊಡೆಗಳನ್ನು ತಟ್ಟುತ್ತಾ ಹೀಗೆ ಹೇಳುತ್ತಿದ್ದರು:

Rare Ideas One Cannot Hear such Ideas Everybody

ಇವು ಬಹಳ ಅಪರೂಪದ ವಿಚಾರಗಳಾಗಿವೆ, ಇಂತಹ ವಿಚಾರಗಳು ಪ್ರತಿದಿನವೂ ಕೇಳಿಬರುವುದಿಲ್ಲ.

ಅದೇ ಜರ್ಮನ್ ಪ್ರಾಧ್ಯಾಪಕರು ಹೇಳುತ್ತಾರೆ: ಕೆಲವು ಸ್ಥಳಗಳಲ್ಲಿ ಜನರು ನಿಯಂತ್ರಣವಿಲ್ಲದೆ ಹೀಗೆ ಮಾತನಾಡುತ್ತಿದ್ದರು:

What a Beautiful and True principals

ಎಷ್ಟು ಸುಂದರ ಮತ್ತು ನಿಜವಾದ ತತ್ವಗಳಾಗಿವೆ.

ಮತ್ತು ಅವರು ಸ್ವತಃ ತಮ್ಮ ಈ ಮಾತುಗಳಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: ಈ ಅವಕಾಶವು ಅಹ್ಮದೀಯರಿಗೆ ಒಂದು ಮಹತ್ವದ ತಿರುವಾಗಿದೆ ಮತ್ತು ಕೇವಲ ಈ ಒಂದು ಲೇಖನದಿಂದ ನಿಮಗೆ ಲಭಿಸಿದಂತಹ ಖ್ಯಾತಿ ಮತ್ತು ಯಶಸ್ಸು ನೀವು ಸಾವಿರಾರು ಪೌಂಡ್‌ಗಳನ್ನು ಖರ್ಚು ಮಾಡಿದ್ದರೂ ಸಹ ಲಭಿಸುತ್ತಿರಲಿಲ್ಲ.

* ಮಿಸ್ಟರ್ ಲೀನ್ ಇಂಡಿಯಾ ಆಫಿಸ್‌ನಲ್ಲಿ ಒಂದು ದೊಡ್ಡ ಹುದ್ದೆಯನ್ನು ಪಡೆದುಕೊಂಡಿದ್ದಾರೆ ಅವರು ಉಪನ್ಯಾಸವನ್ನು ಕೇಳಿದ್ದರು ಆದರೆ ಅವರ ಪತ್ನಿ ಆ ದಿನ ಬಂದಿರಲಿಲ್ಲ ಅವರು ಮನೆಗೆ ಹೋಗಿ ಮನೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದರು, ಆದ್ದರಿಂದ ಅವರ ಪತ್ನಿ ಮರುದಿನ ಬಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಸಹಚರರಿಗೆ ಭೇಟಿಯಾಗಿ ಹೇಳಿದರು ನಾನು ನಿನ್ನ ಬಂದಿರಲಿಲ್ಲ ನನ್ನ ಪತಿ ಮನೆಗೆ ಬಂದು ನಿಮ್ಮ ಉಪನ್ಯಾಸದ ಯಶಸ್ಸಿನ ಬಗ್ಗೆ ನನಗೆ ಹೇಳಿದರು ಮತ್ತು ಖಲೀಫತುಲ್ ಮಸೀಹರ ಪತ್ರಗಳು ಅತ್ಯುನ್ನತ ಮತ್ತು ಅತ್ಯುತ್ತಮ ಪತ್ರಿಕೆಯಾಗಿತ್ತು.

* ಮಿಸ್ ಗಾರ್ನರ್ ಓರ್ವ ನಾಸ್ತಿಕರಾಗಿದ್ದರು ಮತ್ತು ದೇವರನ್ನು ನಿರಾಕರಿಸುವ ಮಹಿಳೆಯಾಗಿದ್ದರು ಅವರು ಹೇಳಿದರು:

It Was Charmfull

ಇದು ಬಹಳ ಆಕರ್ಷಕವಾಗಿತ್ತು.

"ಇದು ಉತ್ತಮ ಲೇಖನವಾಗಿತ್ತು."

"ಬಹಳ ಉನ್ನತ ಆಲೋಚನೆಗಳು ಇದ್ದವು."

"ಹೊಸ ಸತ್ಯವಾಗಿತ್ತು" ಇತ್ಯಾದಿ ಪದಗಳು, ತುಂಬಾ ಜನರು ತಮ್ಮ ಲೆಕ್ಕಾಚಾರಕ್ಕೆ ಮಿತಿಯಿಲ್ಲ ಎಂದು ಹೇಳಿದರು.

* ಬಹಾಯಿ ಧರ್ಮಕ್ಕೆ ಸೇರಿದ್ದ ಮಹಿಳೆಯೊಬ್ಬರು ಉಪನ್ಯಾಸವನ್ನು ಆಲಿಸಿದರು ಮತ್ತು ನಂತರ ನಮ್ಮೊಂದಿಗೆ ಮನೆಯ ಬಳಿಗೆ ಬಂದರು, ಅವರು ಹೇಳುತ್ತಾರೆ: ನಾನು ಬಹಾಯಿ ಧರ್ಮದ ತತ್ವಗಳನ್ನು ಹೊಂದಿದ್ದವಳಾಗಿದ್ದೇನೆ ಆದರೆ ಇಂದಿನ ಉಪನ್ಯಾಸವನ್ನು ಕೇಳಿದ ನಂತರ ನನ್ನ ಅಭಿಪ್ರಾಯಗಳು ಬದಲಾಗಿವೆ ನಿಮ್ಮ ಉಪನ್ಯಾಸಗಳು ಯಾವಾಗ ಮತ್ತು ಎಲ್ಲಿ ನಡೆಯುತ್ತವೆ ಎಂದು ದಯವಿಟ್ಟು ನನಗೆ ತಿಳಿಸಿದರೆ, ನಾನು ಖಂಡಿತವಾಗಿಯೂ ಬರುತ್ತೇನೆ.

* ಓರ್ವ ಕ್ರಿಶ್ಚಿಯನ್ ಮಹಿಳೆ ತನ್ನ ಮಗಳೊಂದಿಗೆ ಹುಝೂರ್[ರ] ಅವರನ್ನು ಹಿಂಬಾಲಿಸಿದರು ಮತ್ತು ಅವರು ಗುರುವಾರ ನನ್ನ ಮನೆಗೆ ಚಹಾಕ್ಕೆ ಬರಬೇಕೆಂದು ವಿನಂತಿಸಿದರು. ಹುಝೂರ್[ರ] ಅವರು ಕಾರ್ಯನಿರತವಾಗಿರುವುದರಿಂದ ಕ್ಷಮೆಯಾಚಿಸಿದರು ಆದರೆ ಅವರು ಬಹಳ ಒತ್ತಾಯಪೂರಕವಾಗಿ ಮತ್ತು ಪ್ರೀತಿಯಿಂದ ಆಕೆಯ ವಿನಂತಿಯಲ್ಲಿ ಅನುಮೋದಿಸಿಕೊಂಡು ಹೇಳಿದಳು ನಿಮಗೆ ಯಾವಾಗ ಬಿಡುವಾಗುತ್ತದೆಯೋ ಆಗ ಬನ್ನಿ ಆದರೆ ಖಂಡಿತವಾಗಿ ಬನ್ನಿ.

* ಮತ್ತೋರ್ವ ಗಣ್ಯರು ಹೇಳಿದರು: ಇದು ದೇಶಭಕ್ತಿಗಿಂತಲೂ ಹೆಚ್ಚು ಪ್ರಿಯವಾದ ಲೇಖನವಾಗಿತ್ತು.

(ಅಲ್-ಫಝ್ಲ್ ದಿನಾಂಕ 23 ಅಕ್ಟೋಬರ್ 1924)

* ಮತ್ತೋರ್ವ ವ್ಯಕ್ತಿ ಹೇಳಿದರು: ಮೂರು ವರ್ಷದ ಮುಂಚೆ ನನಗೆ ದರ್ಶನದಲ್ಲಿ ಹಝ್ರತ್ ಮಸೀಹರು ತಮ್ಮ ಹದಿಮೂರು ಶಿಷ್ಯರೊಂದಿಗೆ ಇಲ್ಲಿಗೆ ಆಗಮಿಸಿರುವುದಾಗ ತೋರಿಸಲಾಗಿತ್ತು. ಹೀಗೆ ಇಂದು ನಾನು ಆ ದರ್ಶನವು ಪೂರೈಸಿದ್ದನ್ನು ನೋಡುತ್ತಿದ್ದೇನೆ ಎಂದು ಹೇಳಿದರು.

(ಅಲ್-ಫಝ್ಲ್, ಸೆಪ್ಟೆಂಬರ್ 30, 1924)

-----------*****-----------

# 1924 ರಲ್ಲಿ ಯುರೋಪ್ ಪ್ರವಾಸದಿಂದ ಹಝ್ರತ್ ಮುಸ್ಲೆಹ್ ಮೌಊದ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಹಿಂದಿರುಗುವಿಕೆ

(ಮುಹಮ್ಮದ್ ಷರೀಫ್ ಕೌಸರ್ ಮುಬಲ್ಲಿಗ್ ಸಿಲ್‌ಸಿಲ ನಶ್ರೊ ಇಶಾಅತ್ ಖಾದಿಯಾನ್)

**ಖಾದಿಯಾನ್‌ನಲ್ಲಿ ನಿಮ್ಮ ಸ್ವಾಗತ ಮತ್ತು ಹಬ್ಬದ ವಾತಾವರಣ**

ಸರ್ವಶಕ್ತನಾದ ಅಲ್ಲಾಹನು ತನ್ನ ಖಲೀಫರಿಗಾಗಿ ಜಮಾಅತ್‌ನ ಜನರ ಹೃದಯದಲ್ಲಿ ಅಪಾರ ಪ್ರೀತಿ, ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಇರಿಸಿದ್ದಾನೆ. ಜಮಾಅತ್‌ನ ಸದಸ್ಯರು ತಮ್ಮ ಖಲೀಫಾರನ್ನು ಅಪಾರವಾಗಿ ಪ್ರೀತಿಸುತ್ತಾರೆ. ಅವರ ಆದೇಶಗಳನ್ನು ಅನುಸರಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ. ಮತ್ತು ಖಲೀಫರಿಗಾಗಿ ಪ್ರತಿಕ್ಷಣ ದುಆ ಮಾಡುತ್ತಾರೆ. ಖಲೀಫರು ಭೇಟಿ ನೀಡಿದಲ್ಲೆಲ್ಲಾ ಅಲ್ಲಿನ ಜನರಲ್ಲಿ ಅವರೊಂದಿಗೆ ವಿಶೇಷ ಆಧ್ಯಾತ್ಮಿಕ ಸಂಬಂಧವು ಬೆಳೆಯುತ್ತದೆ. ಸದೇ ರೀತಿ ಯಾವುದಾದರು ಧಾರ್ಮಿಕ ಅಗತ್ಯಗಳ ಕಾರಣದಿಂದ ಕೆಲವು ದಿನಗಳ ಕಾಲ ಖಲೀಫರು ತಮ್ಮ ನಿವಾಸದಿಂದ ದೂರ ಹೋಗಬೇಕಾದರೆ, ಖಲೀಫರ ಅನುಪಸ್ಥಿತಿಯ ಆ ಕೆಲವು ದಿನಗಳನ್ನು ಜಮಾಅತ್ತಿನ ಕೇಂದ್ರದ ಜನರು ಬಹಳ ಕಷ್ಟದಿಂದ ಕಳೆಯುತ್ತಾರೆ ಮತ್ತು ಅವರು ತಮ್ಮ ಯಜಮಾನರ ಹಿಂದಿರುಗುವಿಕೆಗಾಗಿ ಕುತೂಹಲದಿಂದ ಕಾಯುತ್ತಿದ್ದರು.

1924ರಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಯುರೋಪ್ ಪ್ರವಾಸಕ್ಕೆ ಹೋದಾಗ ಖಾದಿಯಾನ್‌ನಲ್ಲಿ ಇದೇ ರೀತಿಯ ವಾತಾವರಣವಿತ್ತು. ಜಮಾಅತ್‌ನ ಸದಸ್ಯರು ಹುಝೂರ್(ರ) ಅವರ ಪುನರಾಗಮನಕ್ಕಾಗಿ ಕಾತುರದಿಂದ ಕಾಯುತ್ತಿದ್ದರು ಮತ್ತು ಯಾವಾಗಲೂ ಹುಝೂರ್ ಅವರಿಗಾಗಿ ಪ್ರಾರ್ಥನೆಯಲ್ಲಿ ತೊಡಗಿದ್ದರು. ಮತ್ತು ಅಂತಿಮವಾಗಿ ಹುಝೂರ್(ರ) ಅವರು ಖಾದಿಯಾನ್‌ಗೆ ಹೊರಡುವ ಆ ಶುಭ ದಿನ ಬಂದಿತು.

**ಲಂಡನ್‌ನಿಂದ ನಿರ್ಗಮಿಸಿ ಮುಂಬೈಗೆ ಆಗಮಿಸುವುದು**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಅಕ್ಟೋಬರ್ 24, 1924 ರಂದು ಲಂಡನ್‌ನ ಮಸ್ಜಿದ್ ಫಝಲ್‌ನಲ್ಲಿ ಮೊದಲ ಖುತ್‌ಬ ಜುಮುಅವನ್ನು ನೀಡಿದರು ಮತ್ತು ಲಂಡನ್‌ನಿಂದ ಹೊರಡುವ ಮೊದಲು, ಹುಝೂರ್(ರ) ಹೇಳಿದರು: "ನನ್ನ ಪ್ರಕಾರ ಇಂಗ್ಲೆಂಡ್‌ನ ವಿಜಯದ ಅಡಿಪಾಯ ಇಡಲಾಗಿದೆ. ಆತನ ವಿಜಯದ ಅಡಿಪಾಯವು ಸ್ವರ್ಗದಲ್ಲಿ ಹಾಕಲ್ಪಟ್ಟಿದೆ ಮತ್ತು ಸರಿಯಾದ ಸಮಯದಲ್ಲಿ ಭೂಮಿಯ ಮೇಲೆ ಘೋಷಿಸಲ್ಪಡುತ್ತದೆ. ಶತ್ರುಗಳು ನಗುತ್ತಾರೆ ಮತ್ತು ಯಾರಾದರೂ ಈ ಆಧಾರರಹಿತ ಹೇಳಿಕೆಯನ್ನು ಮಾಡಬಹುದು, ಆದರೆ ಅವನು ಕುರುಡನಾಗಿರುವುದರಿಂದ ಮತ್ತು ಸತ್ಯವನ್ನು ನೋಡಲಾಗದ ಕಾರಣ ಅವನು ನಗಲಿ."

**ಅಕ್ಟೋಬರ್ 25 ರಂದು ಹುಝೂರ್(ರ) ಅವರು ಲಂಡನ್‌ನಿಂದ ಹೊರಟರು**

ವಾಟರ್‌ಲೂ ಸ್ಟೇಷನ್‌ನಲ್ಲಿ (ಹುಝೂರ್ ತಮ್ಮ ಸಂಗಡಿಗರೊಂದಿಗೆ ಗಾಡಿಯನ್ನು ಹತ್ತಿದರು) ಅನೇಕ ಯೂರೋಪ್‌ನ ಪುರುಷರು ಹಾಗೂ ಮಹಿಳೆಯರಲ್ಲದೆ ಭಾರತೀಯರು ಮತ್ತು ಆಫ್ರಿಕನ್ನರೂ ವಿದಾಯ ಹೇಳಲು ಹಾಜರಿದ್ದರು. ಬಹಳಷ್ಟು ಪ್ರೀತಿಯ ಹಸ್ತಲಾಘವಗಳ ನಂತರ ಪ್ರತಿಯೊಬ್ಬರು ಖುದಾ ಹಾಫಿಝ್ ಹೇಳಿದರು ಮತ್ತು ಫೋಟೊಗ್ರಾಫರ್‌ರು ಫೋಟೊಗಳನ್ನು ತೆಗೆದರು. ಲಂಡನ್‌ನಿಂದ ಗಾಡಿ ಸೌತ್ ಪ್ಯಾಟನ್‌ಗೆ ಬಂದಿತು. ಅಲ್ಲಿಂದ ಹುಝೂರ್(ರ) ಮತ್ತು ಅವರ ಸಂಗಡಿಗರು ರಾತ್ರಿ ಹನ್ನೆರಡು ಗಂಟೆಗೆ ಸುಮುದ್ರದ ಹಡಗಿನ ಮೂಲಕ ಇಂಗ್ಲೆಂಡ್ ದಾಟಿದರು ಮತ್ತು ಅಕ್ಟೋಬರ್ 26 ರಂದು ಕಾರಿನಲ್ಲಿ ಎಂಟೂವರೆ ಗಂಟೆಗೆ ಪ್ಯಾರಿಸ್ ತಲುಪಿದರು. ಪ್ಯಾರಿಸ್‌ನಲ್ಲಿ ಹುಝೂರ್(ರ) ಅವರ ವಾಸ್ತವ್ಯವು ಬಹಳ ಕಡಿಮೆಯಾಗಿತ್ತು, ಅದು ಬಹಳ ಯಶಸ್ವಿಯಾಯಿತು. ಪ್ರತಿದಿನ ಹುಝೂರ್(ರ) ಅವರನ್ನು ಭೇಟಿ ಮಾಡಲು ದಿನಪತ್ರಿಕೆಗಳ ಪ್ರತಿನಿಧಿಗಳು ಬಂದಿದ್ದರು. ಹುಝೂರ್(ರ) ಅವರು ಪ್ಯಾರಿಸ್‌ನ ಹೊಸದಾಗಿ ನಿರ್ಮಿಸಲಾದ ಅಧಿಕೃತ ಮಸೀದಿಯಲ್ಲಿ ಮೊದಲ ನಮಾಝ್ ಅನ್ನು ನಿರ್ವಹಿಸಿದರು. ಪತ್ರಿಕಾ ಪ್ರತಿನಿಧಿಗಳು ಮತ್ತು ಸಿನಿಮಾ ಕಂಪನಿಗಳು ದಿನಪತ್ರಿಕೆಗಳಲ್ಲಿ ಪ್ರಕಟವಾದ ಫೋಟೋಗಳನ್ನು ತೆಗೆದರು.

ಹುಝೂರ್(ರ) ಅಕ್ಟೋಬರ್ 31 ರಂದು ಪ್ಯಾರಿಸ್ ತೊರೆದರು. ಅವರು ನವೆಂಬರ್ 2 ರ ರಾತ್ರಿ ವೆನಿಸ್ (ಇಟಲಿ) ನಿಂದ ಹಡಗು ಹತ್ತಿದರು ಮತ್ತು ಸುಮಾರು 16 ದಿನಗಳ ಸಮುದ್ರಯಾನದ ನಂತರ ನವೆಂಬರ್ 18, 1924 ರಂದು ಮುಂಬೈ ತೀರವನ್ನು ತಲುಪಿದರು. ಭಾರತದ ವಿವಿಧ ಭಾಗಗಳಿಂದ ಬಂದಿದ್ದ ಅಹ್ಮದೀಯ ಜಮಾಅತ್‌ನ ಸುಮಾರು ಇನ್ನೂರು ಪ್ರತಿನಿಧಿಗಳು ಮುಂಬೈ ಕರಾವಳಿಗೆ ಭೇಟಿ ನೀಡಿದರು. ಹುಝೂರ್(ರ) ಅವರನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು ಮತ್ತು ಪತ್ರಿಕಾ ಪ್ರತಿನಿಧಿಗಳು ಫೋಟೋ ತೆಗೆಸಿಕೊಂಡರು. ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್(ರ) ಅವರು ಭಾರತದ ಸಂಪೂರ್ಣ ಅಹ್ಮದೀಯ ಸಮುದಾಯದ ಪರವಾಗಿ ಹುಝೂರ್(ರ) ಅವರಿಗೆ ಧನ್ಯವಾದ ಪತ್ರವನ್ನು ನೀಡಿದರು. ಇಲ್ಲಿಂದ ಹುಝೂರ್(ರ) ಲಿಯಾಕತ್ ಮಂಜಿಲ್ ತಲುಪಿ ಸನ್ಮಾನ್ಯ ಸೈಯದ್ ಮುಹಮ್ಮದ್ ರಿಝ್ವಿ ಸಾಹಿಬ್ ಅವರೊಂದಿಗೆ ಕುಳಿತರು. ಮುಂಬೈನ ಎಲ್ಲ ಪತ್ರಿಕೆಗಳ ಪ್ರತಿನಿಧಿಗಳು ಹುಝೂರ್(ರ) ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿ ಅವರ ಯೂರೋಪ್ ಪ್ರವಾಸದ ಸ್ಥಿತಿಗತಿಗಳನ್ನು ತಿಳಿದುಕೊಂಡರು.

**ಮುಂಬೈಗೆ ಸುರಕ್ಷಿತವಾಗಿ ಬಂದ ನಂತರ, ಹುಝೂರ್(ರ) ಅವರು ಅಹ್ಮದಿಯಾ ಜಮಾಅತ್‌ಗೆ ಎಲೆಕ್ಟ್ರಾನಿಕ್ ಸಂದೇಶವನ್ನು ಕಳುಹಿಸಿದರು ಅದು ಹೀಗಿತ್ತು:**

"ನಾನು ನನ್ನ ಪರವಾಗಿ ಮತ್ತು ನನ್ನ ಪ್ರಯಾಣದ ಸಹಚರರ ಪರವಾಗಿ, ನಮ್ಮ ಕಾರ್ಯಾಚರಣೆಯ ಯಶಸ್ಸಿಗಾಗಿ ಪ್ರಾರ್ಥಿಸಿದ್ದಕ್ಕಾಗಿ ಜಮಾಅತ್‌ನ ಎಲ್ಲಾ ಸ್ನೇಹಿತರಿಗೆ ನಾನು ಪ್ರಾಮಾಣಿಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರಯಾಣದಲ್ಲಿ ನಾವು ಸಾಧಿಸಿದ ಅದ್ಭುತ ಯಶಸ್ಸಿಗೆ ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಕೃಪೆಯೇ ಕಾರಣ ಎಂದು ನಾನು ನಂಬುತ್ತೇನೆ. ಅಲ್ಲಾಹನು ನಮಗೆ ದಾರಿಯ ಪ್ರತಿ ಹೆಜ್ಜೆಯಲ್ಲಿ ಬೆಂಬಲಿಸಿದನು ಮತ್ತು ನಮಗೆ ದಾರಿ ಕಾಣದ ಸಮಯದಲ್ಲಿಯೂ ನಮಗೆ ಬಾಗಿಲು ತೆರೆದನು. ನನ್ನ ಸ್ನೇಹಿತರೆಲ್ಲರೂ ತಮ್ಮ ಭಗವಂತನ ಈ ವಿಶೇಷ ಕೃಪೆಯನ್ನು ಸ್ಮರಿಸಬೇಕೆಂದು ಮತ್ತು ಈ ಅನುಗ್ರಹಗಳನ್ನು ಪಡೆಯಲು ಅವರು ಮಾಡಬೇಕಾದ ಮಹಾನ್ ತ್ಯಾಗಗಳಿಗೆ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ಕಳೆದ ನಾಲ್ಕು ತಿಂಗಳ ದುಡಿಮೆಯ ಫಲವಾಗಿ ಅಲ್ಲಾಹನಿಂದ ಬಹಿರಂಗವಾಗಲಿದೆ... ಅಲ್ಲಾಹನು ನಮ್ಮೆಲ್ಲರ ಮೇಲೆ ಆತನ ಅನುಗ್ರಹವನ್ನು ಧಾರೆಯೆರೆಯಲಿ."

**ಆಗ್ರಾದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಆಗಮನ**

ಹುಝೂರ್(ರ) 20 ನವೆಂಬರ್ 1924 ರಂದು ಮುಂಬೈನಿಂದ B.B. & C.I ರೈಲ್ವೇ ಮೂಲಕ ಹೊರಟರು ಮತ್ತು ಮರುದಿನ 21 ನವೆಂಬರ್ 1924 ರಂದು ಆಗ್ರಾ ತಲುಪಿದರು. ಆಗ್ರಾಗೆ ನಿಮ್ಮ ದಾರಿಯಲ್ಲಿ, ನೀವು ಅಕ್ರಾನ್‌ನ ಪ್ರಸಿದ್ಧ ತಾಣ, ಮಾಯಿ ಜಮ್ಯಾ ಗ್ರಾಮ ಮತ್ತು ಅಹ್ಮದಿಯಾ ಜಮಾಅತ್‌ನ ಮುಖ್ಯ ಜಿಹಾದ್‌ನ ಭೂಮಿಯನ್ನು ನೋಡಿದರು. ಆಗ್ರಾ ನಿಲ್ದಾಣದಲ್ಲಿ ನಿಮ್ಮನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಮಿರ್ಝಾ ಇರ್ಫಾನ್ ಅಲಿ ಬೇಗ್ ಸಾಹಿಬ್ ನಿಮ್ಮ ಕೊರಳಿಗೆ ಹೂವಿನ ಹಾರವನ್ನು ಹಾಕಿದರು.

ಈ ಕೆಳಗಿನ ಸುದ್ದಿಯನ್ನು ಸೂಫಿ ಮುಹಮ್ಮದ್ ಇಬ್ರಾಹಿಂ

ಸಾಹಿಬ್ ಬಿಎಸ್‌ಸಿ ಅಮೀರ್ ಅಲ್ ಮುಜಾಹಿದೀನ್ ಆಗ್ರಾ ಅವರು ಅಖ್ಬಾರ್ ಅಲ್ ಫಝಲ್‌ನಲ್ಲಿ ಡಿಸೆಂಬರ್ 6, 1924 ರಂದು ಪುಟ 7 ರಲ್ಲಿ ಪ್ರಕಟಿಸಿದ್ದಾರೆ.

ನವೆಂಬರ್ 21 ರಂದು, ರಾತ್ರಿ 8:00 ಗಂಟೆಗೆ, ಹಝ್ರತ್ ಖಲೀಫತುಲ್-ಮಸೀಹ್ ಸಾನಿ(ರ) ಖುದ್ದಾಮರೊಂದಿಗೆ ಆಗ್ರಾ ಕೋಟೆಯಲ್ಲಿ ಕಾರಿನಿಂದ ಇಳಿದರು, ಅಲ್ಲಿ ಯುಪಿಯ ವಿವಿಧ ಸ್ಥಳಗಳಿಂದ ಜಮಾಯಿಸಿದ ಅಹ್ಮದೀಯ ಜಮಾಅತ್ತಿನ ಸುಮಾರು ನೂರು ಕಾರ್ಯಕಾರಿ ಹುದ್ದೆದಾರರು, ಕೆಲವು ಮುಖ್ಯಸ್ಥರ ಜೊತೆಗೆ, ಸುಮಾರು ನಲವತ್ತು ಅಹಮದಿಯೇತರ ಪಂಜಾಬಿ ಉದ್ಯಮಿಗಳನ್ನು ಸ್ವಾಗತಿಸಿದರು. ಹುಝೂರ್(ರ) ಅವರ ಕೊರಳಿಗೆ ಹೂವಿನ ಹಾರಗಳನ್ನು ಹಾಕಲಾಯಿತು. ಹುಝೂರ್(ರ) ಅವರು ಎಲ್ಲರನ್ನು ಹಸ್ತಲಾಘವ ಮಾಡಿ ಗೌರವಿಸಿದರು. ನಂತರ ಖುದ್ದಾಮುಲ್-ಅಹ್ಮದಿಯಾ ಅವರೊಂದಿಗೆ ದಾರುಲ್ ತಬ್ಲೀಗ್‌ಗೆ ಆಗಮಿಸಿದರು. ಅವರು ಆಗಮಿಸಿದ ತಕ್ಷಣ, ಹುಝೂರ್(ರ) ಅವರು ನಮಾಝ್ ನಿರ್ವಹಿಸಿದರು ಮತ್ತು ಪ್ರದೇಶದ ಮೇನ್‌ಪುರಿಯ ಕೆಲವು ಅತಿಥಿಗಳಿಂದ ಬೈಅತ್ ಪಡೆದರು. ಭೋಜನದ ನಂತರ ಮೌಲ್ವಿ ಗುಲಾಮ್ ಅಹ್ಮದ್ ಸಾಹಿಬ್ ಮೌಲವಿ ಫಾಝಿಲ್ ಅವರು ಮುಜಾಹಿದೀನ್ ಮತ್ತು ಆಗ್ರಾದ ಅಹ್ಮದಿಯಾ ಜಮಾಅತ್ ಪರವಾಗಿ ಭಾಷಣ ಮಾಡಿದರು, ಇದಕ್ಕೆ ಪ್ರತಿಯಾಗಿ ಹುಝೂರ್(ರ) ಅವರು ಜಮಾಅತ್‌ನ ಪ್ರಗತಿಯು ಅಲ್ಲಾಹನ ಅನುಗ್ರಹದಿಂದ ಮಾತ್ರ ಎಂದು ಸಾಬೀತುಪಡಿಸುತ್ತಾ ಜಮಾಅತ್ತನ್ನು ಅಭಿವೃದ್ಧಿಯ ಹಾದಿಯಲ್ಲಿ ಮುಂದುವರಿಯಲು ಪ್ರೇರೇಪಿಸಿದರು, ಮತ್ತು ಮತ್ತಷ್ಟು ತ್ಯಾಗಗಳಿಗೆ ಸಿದ್ಧರಾಗಿರಲು ಆದೇಶಿಸಿದರು. ಮರುದಿನ ಬೆಳಗ್ಗೆ ಖುದ್ದಾಮರೊಂದಿಗೆ ಹುಝೂರ್(ರ) ಅವರು ಫೋಟೋ ತೆಗೆಸಿ ಮೋಟಾರ್ ಬೈಕ್ ನಲ್ಲಿ ತಾಜ್ ಮಹಲ್ ನೋಡುತ್ತಾ ಸಾಂಧನ್ ಗೆ ತೆರಳಿದರು.

ನವೆಂಬರ್ 22 ರಂದು, ಹುಝುರ್(ರ) ಅವರು ಮಲ್ಕಾನಾ ತಬ್ಲೀಗ್‌ನ ಮಹಾನ್ ಕೇಂದ್ರವಾದ ಸಾಂಧನ್ ಅನ್ನು ನೋಡಲು ಹೋದರು ಅಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಲ್ಕಾನದವರು ಮಾಡಿದ್ದರು. ದೊಡ್ಡ ಭವ್ಯವಾದ ಬಾಗಿಲುಗಳನ್ನು ನಿರ್ಮಿಸಲಾಯಿತು, ಅವುಗಳಲ್ಲಿ ಒಂದರಲ್ಲಿ 'ಗುಲಾಮ್ ಅಹ್ಮದ್ ಕಿ ಜೇ' ಎಂಬ ಪದಗುಚ್ಛವನ್ನು ಬರೆಯಲಾಗಿದೆ. ಹುಝುರ್(ರ) ಅವರ ಸೇವೆಯಲ್ಲಿ ಒಂದು ಸಂಬೋಧನೆಯನ್ನು ಸಹ ಪ್ರಸ್ತುತಪಡಿಸಲಾಯಿತು. ಅದಕ್ಕೆ ಹುಝೂರ್(ರ) ಉತ್ತರಿಸಿದರು. ನಂತರ ಅನೇಕ ಜನರು ಬೈಅತ್ ಮಾಡಿದರು.

ಆತ್ಮೀಯ ಓದುಗರೇ!! ಯೂರೋಪ್ ಪ್ರವಾಸದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಮುಂಬೈನಿಂದ ನೇರವಾಗಿ ಖಾದಿಯಾನ್‌ಗೆ ಬರುವ ಬದಲು ಮುಂಬೈನಿಂದ ಆಗ್ರಾಕ್ಕೆ ಏಕೆ ತೆರಳಿದರು ಎಂದು ನಿಮಗೆ ಆಶ್ಚರ್ಯವಾಗುತ್ತದೆ. ಆ ದಿನಗಳಲ್ಲಿ ಅಹ್ಮದೀಯ ಜಮಾಅತ್ ಉತ್ತರ ಪ್ರದೇಶದ ಆಗ್ರಾ ಪ್ರದೇಶದಲ್ಲಿ ಶುಧಿ ಚಳುವಳಿಯ ವಿರುದ್ಧ ಪ್ರಚಾರ ಅಭಿಯಾನವನ್ನು ನಡೆಸುತ್ತಿತ್ತು. ಈ ಅಭಿಯಾನವನ್ನು 1923 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಪ್ರಾರಂಭಿಸಿದರು.

ಆ ಸಮಯದಲ್ಲಿ, ಹಿಂದೂಗಳ ಒಂದು ಪಂಗಡವು ಮಲ್ಕಾನಾ ಗೋತ್ರದ ಮುಸ್ಲಿಮರು ಇಸ್ಲಾಂ ಧರ್ಮವನ್ನು ತೊರೆದು ಹಿಂದೂ ಧರ್ಮಕ್ಕೆ ಸೇರಬೇಕೆಂದು ಪ್ರಚಾರ ಮಾಡುತ್ತಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಪರಿವರ್ತಿಸುವ ಈ ಪ್ರಯತ್ನವನ್ನು ಎದುರಿಸಲು ಮಲ್ಕಾನಾದಲ್ಲಿ ಮುಸ್ಲಿಮರಿಗೆ ಶಿಕ್ಷಣ ಮತ್ತು ತರಬೇತಿ ನೀಡಲು ಅಹ್ಮದಿ ಬೋಧಕರು ಮತ್ತು ಸ್ವಯಂಸೇವಕರನ್ನು ಕಳುಹಿಸಿದರು.

ಆಗ್ರಾಗೆ ಹಝ್ರತ್ ಖಲೀಫತುಲ್-ಮಸೀಹ್ ಸಾನಿ(ರ) ಅವರ ಭೇಟಿಯ ಉದ್ದೇಶವೆಂದರೆ ಅವರು ಸ್ವತಃ ಸ್ಥಳಕ್ಕೆ ತಲುಪಿ ಅದನ್ನು ಪರಿಶೀಲಿಸಬೇಕು ಎಂದಾಗಿತ್ತು. ಮತ್ತು ಬೋಧನೆ ಮತ್ತು ತರಬೇತಿಯ ನಡೆಯುತ್ತಿರುವ ಅಭಿಯಾನದಲ್ಲಿ ಹೆಚ್ಚಿನ ವಿಸ್ತರಣೆ ಮತ್ತು ವೇಗವನ್ನು ಸೃಷ್ಟಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

### ಆಗ್ರಾದಿಂದ ದೆಹಲಿಗೆ ನಿರ್ಗಮನ

ನವೆಂಬರ್ 22, 1924 ರ ರಾತ್ರಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಸಾಂಧನ್‌ನಿಂದ ದೆಹಲಿಗೆ ಹೊರಟರು ಮತ್ತು ಆ ರಾತ್ರಿ ದೆಹಲಿ ತಲುಪಿದರು. ದೆಹಲಿ ನಿಲ್ದಾಣದಲ್ಲಿ ಭಾರೀ ಜನಸಂದಣಿ ಇತ್ತು. ನಡೆದಾಡಲೂ ಕಷ್ಟವಾಯಿತು. ದೆಹಲಿ ಮತ್ತು ಶಿಮ್ಲಾದ ಜಮಾಅತ್‌ಗಳು ಸಂಬೋಧನೆಗಳನ್ನು ಪ್ರಸ್ತುತಪಡಿಸಿದವು. ಅದಕ್ಕೆ ಹುಝೂರ್(ರ) ಅವರು ಉತ್ತರಿಸಿದರು.

### ದೆಹಲಿಯಿಂದ ಖಾದಿಯಾನ್‌ಗೆ ನಿರ್ಗಮನ

ನವೆಂಬರ್ 23 ರಂದು ಬೆಳಿಗ್ಗೆ ಅವರು ದೆಹಲಿಯಿಂದ ಹೊರಟು ಅಂಬಾಲಗೆ ತಲುಪಿದರು ಮತ್ತು ಅಂಬಳದಿಂದ ಬಟಾಲಕ್ಕೆ ತೆರಳಿದರು.

ಇದರ ನಡುವೆ ಬರುವ ಎಲ್ಲ ನಿಲ್ದಾಣಗಳಲ್ಲಿ ವಿವಿಧೆಡೆಯಿಂದ ಜಮಾಅತ್ತಿನ ಸದಸ್ಯರು ಆಗಮಿಸಿ ಹುಝೂರ್(ರ) ಅವರನ್ನು ಭೇಟಿಯಾಗುತ್ತಿದ್ದರು. ಅಂಬಾಲ ಜಮಾಅತ್ ವತಿಯಿಂದ ಅಂಬಾಲ ನಿಲ್ದಾಣದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ರಾಜ್‌ಪುರ ನಿಲ್ದಾಣದಲ್ಲಿ ಪಟಿಯಾಲ, ಸರ್ಹಿಂದ್, ನಭಾ ಮತ್ತು ಬ್ಯುಸಿ ಮೊದಲಾದ ಜಮಾಅತ್‌ನ ಸದಸ್ಯರು ಆಗಮಿಸಿದ್ದರು. ಚಾವಾ ಮತ್ತು ದುರಾಹ ನಿಲ್ದಾಣಗಳಲ್ಲಿ, ಗೌಸ್‌ಗಢ್ ಜಮಾಅತ್‌ನ ಸದಸ್ಯರು ಉಪಸ್ಥಿತರಿದ್ದರು. ಆದ್ದರಿಂದ, ಗಾಡಿಯನ್ನು ನಿಲ್ಲಿಸಲಾಯಿತು ಮತ್ತು ಹುಝೂರ್(ರ) ಅವರು ಸ್ವಲ್ಪ ದೂರ ನಡೆದು ತಮ್ಮ ಖುದ್ದಾಮರಿಗೆ ಹಸ್ತಲಾಘವ ಮಾಡಿದರು.

ಲುಧಿಯಾನ ನಿಲ್ದಾಣವು ನೋಡುವುದಕ್ಕೆ ಒಂದು ಅದ್ಭುತ ದೃಶ್ಯವಾಗಿತ್ತು. ಲುಧಿಯಾನ ಮತ್ತು ಫಿರೋಝ್‌ಪುರ ಮತ್ತು ಮಲೇರ್ ಕೋಟ್ಲಾ ಈ ಎಲ್ಲಾ ಜಿಲ್ಲೆಗಳಿಂದ ಬಂದ ಎಲ್ಲಾ ಜಮಾಅತ್‌ನ ಸದಸ್ಯರುಗಳು ಒಂದು ನಿರ್ದಿಷ್ಟ ಕ್ರಮದಲ್ಲಿ ನಿಂತಿದ್ದರು. ಲುಧಿಯಾನ ಜಮಾಅತ್‌ನ ಕಾರ್ಯದರ್ಶಿಯಾದ ಶೇಖ್ ಮುಹಮ್ಮದ್ ಶಫಿ ಸಾಹಿಬ್ ಸಂಬೋಧಿಸಿದರು. ಅದಕ್ಕೆ ಹುಝುರ್(ರ) ಅವರು ಉತ್ತರಿಸಿದರು. ಲುಧಿಯಾನದ ನಂತರ ಜಲಂಧರ್ ಕಂಟೋನ್ಮೆಂಟ್ ನಲ್ಲಿ ವಾಹನ ನಿಂತಿತು. ಜಲಂಧರ್, ಹೋಶಿಯಾರ್‌ಪುರ ಮತ್ತು ಕಪುರ್ಥಾಲಾ ಜಿಲ್ಲೆಗಳಿಂದ ಜಮಾಅತ್‌ನ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಹಝ್ರತ್ ಮುನ್ಶಿ ಹಬೀಬುರ್ ರಹಮಾನ್ ಸಾಹಿಬ್ ರಯೀಸ್ ಹಾಜಿಪುರ ಸಂಬೋಧನವನ್ನು ಓದಿದರು, ನಂತರ ಜಲಂಧರ್ ಮತ್ತು ಬಿಯಾಸ್ ನಿಲ್ದಾಣಗಳಲ್ಲಿ ವಾಹನ ಸ್ವಲ್ಪ ಹೊತ್ತು ನಿಂತು ಅಮೃತಸರಕ್ಕೆ ತಲುಪಿದರು ಅಲ್ಲಿ ಪ್ಲಾಟ್‌ಫಾರ್ಮ್‌ನಲ್ಲಿ ತುಂಬ ಜನಸಮೂಹವಿತ್ತು. ಅಹ್ಮದಿಯಾ ಜಮಾಅತ್ ಅಭಿನಂದನೆ ಮತ್ತು ಸ್ವಾಗತದ ಉನ್ನತ ಧ್ವಜವನ್ನು ಬೀಸಿತು. ಖುರೈಷಿ ಮುಹಮ್ಮದ್ ಹುಸೇನ್ ಸಾಹಿಬ್ (ಮಫ್ರಾಹ್ ಅಂಬರ್‌ನ ಅನ್ವೇಷಕರು), ಅಹ್ಮದೀಯ ಜಮಾಅತ್ ಲಾಹೋರ್‌ನ ಕಾರ್ಯನಿರ್ವಾಹಕ ಅಮೀರ್ ಅವರು ಸಂಬೋಧನೆಯನ್ನು ಓದಿದರು ಮತ್ತು ಹುಝೂರ್(ರ) ಅದಕ್ಕೆ ಉತ್ತರಿಸಿದರು. ಜಮಾಅತ್ ಅಮೃತಸರ ವತಿಯಿಂದ ಊಟ ಬಡಿಸಿದ ನಂತರ ವಾಹನವು 11 ಗಂಟೆಗೆ ಬಟಾಲ ತಲುಪಿತು.

ಜಮಾಅತ್ ಖಾದಿಯಾನ್ ವತಿಯಿಂದ ಬಟಾಲಾದಲ್ಲಿ ಹುಝೂರ್(ರ) ಅವರ ಸ್ವಾಗತ ಮತ್ತು ವಾಸ್ತವ್ಯವನ್ನು ಏರ್ಪಡಿಸಲು ಸ್ನೇಹಿತರು ಉಪಸ್ಥಿತರಿದ್ದರು. ಹುಝೂರ್(ರ) ಅವರು ರಾತ್ರಿ ಬಟಾಲದಲ್ಲಿ ತಂಗಿದ್ದರು ಮತ್ತು ನವೆಂಬರ್ 24, 1924 ರಂದು ಅವರು ಬಟಾಲದಿಂದ ಮೋಟಾರು ಮೂಲಕ ಖಾದಿಯಾನ್‌ಗೆ ತೆರಳಿದರು.

### ಖಾದಿಯಾನ್‌ನಲ್ಲಿ ಆಗಮನ ಮತ್ತು ಅವರ ಅದ್ಭುತವಾದ ಉತ್ಸಾಹ ಮತ್ತು ಪ್ರಾಮಾಣಿಕ ಸ್ವಾಗತ

ಹಝ್ರತ್ ಮುಸ್ಲೆಹ್ ಮೌಊದ್(ರ) ಯುರೋಪಿನಿಂದ ಹಿಂದಿರುಗಿದ ಸಂದರ್ಭದಲ್ಲಿ, ಖಾದಿಯಾನ್‌ನ ಸ್ವಾಗತ ಸಮಿತಿಯು ಖಾದಿಯಾನ್ ಮತ್ತು ಬಟಾಲಾದ ರಸ್ತೆಗಳ ಸಂದಿಯಲ್ಲಿ ಬಾವಿಯನ್ನು ನೇಮಿಸಿತ್ತು. ಅದನ್ನು ಇಂದು ಡಲ್ಲಾ ಮೋಡ್ ಎಂದು

ಕರೆಯಲಾಗುತ್ತದೆ. ಈ ಸ್ಥಳವನ್ನು ಮೇಲಾವರಣ ಮತ್ತು ವರ್ಣರಂಜಿತ ಧ್ವಜಗಳಿಂದ ಅಲಂಕರಿಸಲಾಗಿತ್ತು. ಕುಳಿತುಕೊಳ್ಳಲು ಬೆಂಚುಗಳನ್ನು ಹಾಕಲಾಯಿತು ಮತ್ತು ರಸ್ತೆಯ ಮೇಲೆ ಬಹಳ ಸುಂದರವಾದ ಬಾಗಿಲನ್ನು ನಿರ್ಮಿಸಲಾಗಿತ್ತು, ಅದರ ಮೇಲೆ **ಅಹ್ಲೌಂ ನಸಹ್‌ಲಂ ವಮರ್‌ಹಬಾ** ಹೊರತುಪಡಿಸಿ ಇತರ ಶೋಕಗಳನ್ನು ಪ್ರದರ್ಶಿಸಲಾಗಿತ್ತು. ಹುಝುರ್(ರ) ಅವರ ಆಗಮನದ ಮೊದಲು, ಖಾದಿಯನ್ ಮತ್ತು ಹೊರಗಿನ ಅಹ್ಮದೀಯರ ಹೊರತಾಗಿ, ಅಹ್ಮದೀಯರಲ್ಲದ ಆರ್ಯರು ಮತ್ತು ಖಾದಿಯಾನ್‌ನ ಸಿಖ್ ಸಹಚರರು ಸಹ ಒಂದು ದೊಡ್ಡ ಸಭೆ ಸೇರಿದ್ದರು. ಸಂಘಟಕರು ಬಹಳ ಎಚ್ಚರಿಕೆಯಿಂದ ಎಲ್ಲಾ ಸಹಚರರನ್ನು ರಸ್ತೆಯಿಂದ ಮೇಲಾವರಣದವರೆಗೆ ಕ್ರಮವಾಗಿ ಜೋಡಿಸಿದರು, ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್(ರ), ಹಝ್ರತ್ ಮೀರ್ ಮುಹಮ್ಮದ್ ಇಸ್ಹಾಕ್ ಸಾಹಿಬ್(ರ) ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕುಟುಂಬವು ಮುಂಭಾಗದಲ್ಲಿ ನಿಂತಿದ್ದರು.

ಆ ಸಮಯದಲ್ಲಿ ಎಲ್ಲರೂ ರಸ್ತೆಯತ್ತ ಎದುರು ನೋಡುತ್ತಿದ್ದರು, ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಕಾರು ದೂರದಿಂದ ಕಂಡಿತು ಮತ್ತು ಎಲ್ಲರ ಮುಖದಲ್ಲಿ ಸಂತೋಷ ಮತ್ತು ಉತ್ಸಾಹವು ತುಂಬಿತ್ತು. ಪ್ರತಿಯೊಬ್ಬರೂ ಹಾರಲು ಮತ್ತು ತಮ್ಮ ಪ್ರೀತಿಯ ಯಜಮಾನನನ್ನು ಮೊದಲು ತಲುಪಲು ಮತ್ತು ಗೌರವ ಸಲ್ಲಿಸಲು ಬಯಸಿದ್ದರು. ಆದರೆ ನಿರ್ವಹಣಾ ನಿರ್ಬಂಧಗಳಿಂದಾಗಿ ಅವರು ಒತ್ತಾಯಿಸಲ್ಪಟ್ಟರು. ಹುಝೂರ್(ರ) ಅವರು ಕೂಡ ತಮ್ಮ ಖುದ್ದಾಮರ ಮಹಾನ್ ಉತ್ಸಾಹವನ್ನು ತಿಳಿದಿದ್ದರು. ಆದ್ದರಿಂದ, ಹುಝೂರ್(ರ) ಅವರು ತಮ್ಮ ಸ್ವಂತ ಸ್ಥಳದಲ್ಲಿ ನಿಲ್ಲುವಂತೆ ಆದೇಶಿಸಲು ಆದೇಶವನ್ನು ಕಳುಹಿಸಿದರು. ತಮ್ಮ ಸ್ಥಳವನ್ನು ಬಿಟ್ಟು ಹೋಗುವವರಿಗೆ ಯಾವುದೇ ಹಸ್ತಲಾಘವವನ್ನು ನೀಡಲಾಗುವುದಿಲ್ಲ.

ಈ ಆದೇಶ ತಲುಪಿದ ನಂತರ ಹುಝೂರ್(ರ) ಅವರ ಮೋಟಾರ್ ನಿಧಾನವಾಗಿ ಮುಂದೆ ಸಾಗಿತು. ಚೌಧರಿ ಅಲಿ ಮಹಮ್ಮದ್ ಸಾಹಿಬ್ ಹಿಡಿದಿದ್ದ ಮೋಟಾರ್ ಸೈಕಲ್ ಮೇಲೆ ಹಸಿರು ಬಾವುಟ ರಾರಾಜಿಸುತ್ತಿತ್ತು. ಹುಝೂರ್(ರ) ಅವರು ಬಾಗಿಲನ್ನು ತಲುಪಿದಾಗ, ಮೊದಲು ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್(ರ) ನಂತರ ಹಝ್ರತ್ ಮೀರ್ ಮುಹಮ್ಮದ್ ಇಸ್ಹಾಕ್ ಸಾಹಿಬ್(ರ) ಅವರನ್ನು ಹಸ್ತಲಾಘವ ಮಾಡಿದರು ಮತ್ತು ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರನ್ನು ತಬ್ಬಿಕೊಂಡರು. ಆ ಸಮಯದಲ್ಲಿ ಹಝ್ರತ್ ಸಾಹಿಬ್‌ಝಾದಾ ಸಾಹೇಬರ ಕಣ್ಣಲ್ಲಿ ನೀರು ಹರಿಯುತ್ತಿತ್ತು. ತದನಂತರ ಹುಜ್ಜತುಲ್ಲಾ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ) ಮತ್ತು ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ) ಅವರನ್ನು ಹಸ್ತಾಲಾಘವ ಮಾಡಿದರು ಮತ್ತು ನಂತರ ಇಡೀ ಜಮಾಅತ್ತಿನೊಂದಿಗೆ ದುಆ ಮಾಡಿದರು ಮತ್ತು ಅವರ ಸಹಚರರೊಂದಿಗೆ ಖಾದಿಯಾನ್ ಕಡೆಗೆ ನಡೆದರು. ಆ ಸಮಯದಲ್ಲಿ ದೊಡ್ಡ ಜನಸಮೂಹವೇ ನೆರೆದಿತ್ತು.

ಪಟ್ಟಣವನ್ನು ಪ್ರವೇಶಿಸುವ ಮೊದಲು, ಹುಝೂರ್(ರ) ಅವರು ಬಹಿಷ್ತಿ ಮಖ್ಬರಾಗೆ ತಲುಪಿದರು. ಆ ಸಮಯದಲ್ಲಿ ಹುಝೂರ್(ರ) ಅವರ ಕೊರಳಲ್ಲಿ ಅನೇಕ ಹೂವಿನ ಮಾಲೆಗಳಿದ್ದವು. ಆ ಸಂದರ್ಭದಲ್ಲಿ ಹುಝೂರ್(ರ) ಅವರು ಹೇಳಿದರು: ಇದು ಅನುಮತಿಸಿದ್ದರೆ ನಾನು ಈ ಎಲ್ಲಾ ಹೂವುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅನುಗ್ರಹದಾಯಕ ಸಮಾಧಿಯ ಮೇಲೆ ಇಡುತ್ತಿದ್ದೆ, ಏಕೆಂದರೆ ಈ ವಿಜಯದ ಚಿಹ್ನೆಯು ನಿಮ್ಮ ಸಹಾಯದ ಮೂಲಕ ಮತ್ತು ನಿಮ್ಮಿಂದ ಮಾತ್ರ ಸಾಧಿಸಲ್ಪಟ್ಟಿದೆ. ಅದರ ನಂತರ, ಹುಝೂರ್(ರ) ಬಹಿಷ್ತಿ ಮಖ್ಬರದ ಬಳಿ ತಲುಪಿ ಮಣ್ಣಿನ ಮಡಕೆಯಿಂದ ನೀರನ್ನು ಸೇವಿಸಿದರು. ನಂತರ ಅವರು ವಝೂ ಮಾಡಿದರು ಮತ್ತು ಸ್ವಲ್ಪ ಸಮಯದ ನಂತರ ಏಕಾಂಗಿಯಾಗಿ ಪ್ರಾರ್ಥಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಖಬರ್ ಬಳಿ ಹೋದರು, ಹುಝೂರ್(ರ) ಅವರು ತಮ್ಮ ಪ್ರಯಾಣಿಕ ಸಹಚರರನ್ನು ತಮ್ಮ ಬಳಿ ಕರೆದರು. ನಂತರ ಎಲ್ಲರೂ ಒಟ್ಟಾಗಿ ದುಆ ಮಾಡಿದರು. ದುಆವಿನ ನಂತರ, ಹುಝೂರ್(ರ) ತನ್ನ ತಾಯಿಯ ತಂದೆ (ನಾನಾ ಜಾನ್) ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್(ರ) (ತಮ್ಮ ಪ್ರಯಾಣದ ಸಮಯದಲ್ಲಿ ನಿಧನರಾಗಿದ್ದರು) ಅವರ ಖಬರ್ ಬಳಿ ನಿಂತು ನಮಾಝೆ ಜನಾಝವನ್ನು ನಿರ್ವಹಿಸಿದರು.

ಅವರು ಬಹಿಷ್ತಿ ಮಖ್ಬರಾದಿಂದ ಪಟ್ಟಣವನ್ನು ಪ್ರವೇಶಿಸಲು ಪ್ರಾರಂಭಿಸಿದಾಗ, ಹುಝುರ್(ರ) ಹೇಳಿದರು. ಹಾಫಿಝ್ ರೋಶನ್ ಅಲಿ ಸಾಹೇಬ್(ರ) ನಗರದಲ್ಲಿ ಪ್ರವೇಶಿಸುವ ದುವಾ ಪಠಿಸುವರು. ಎಲ್ಲಾ ಸ್ನೇಹಿತರು ಅದನ್ನು ಜೋರಾಗಿ ಪುನರಾವರ್ತಿಸಬೇಕು. ಆದ್ದರಿಂದ ಹಾಫಿಝ್ ಸಾಹಿಬ್ ಪ್ರಾರ್ಥನೆಯನ್ನು ಗಟ್ಟಿಯಾಗಿ ಪಠಿಸಿದರು ಮತ್ತು ಇಡೀ ಜಮಾಅತ್ ಅದನ್ನು ಪುನರಾವರ್ತಿಸುತ್ತಿತ್ತು. ಪ್ರಾರ್ಥನೆ ಹೀಗಿತ್ತು: **ಅಇಬೂನ ತಾಯಿಬೂನ ಆಬಿದೂನ ಲಿರಬ್ಬಿನಾ ಹಾಮಿದೂನ ಸದಖಲ್ಲಾಹು ವಅ್‌ದಹು ವ ನಸರ ಅಬ್ದಹೂ ವಹಝುಮಲ್ ಅಹ್‌ಝಾಬ ವಹ್‌ದಹೂ–**

ಹುಝೂರ್(ರ) ಅವರು ಮಿಯಾಂ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ ಮತ್ತು ಮಿಯಾಂ ಮುಹಮ್ಮದ್ ಅಬ್ದುಲ್ಲಾ ಸಾಹಿಬ್ ಜಿಲ್ದಸಾಝ್ ಅವರ ಮನೆಯ ಪಕ್ಕದ ಹಾದಿಯಲ್ಲಿ ಹಾದು ಹೋಗುತ್ತಾ ಅತಿಥಿ ಗೃಹವನ್ನು ಸಮೀಪಿಸಿದರು. ಅಲ್ಲಿ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಕ್ ಸಾಹಿಬ್(ರ) ಅವರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರ ಲಂಗರ್‌ಖಾನಾದಲ್ಲಿ ಸ್ವಾಗತಿಸಿದರು. ಇಲ್ಲಿ ನವಾಬ್ ಮುಹಮ್ಮದ್ ಅಬ್ದುಲ್ಲಾ ಖಾನ್ ಸಾಹಿಬ್ ಅವರ ಪುತ್ರ ಮಿಯಾಂ ಅಬ್ಬಾಸ್ ಅಹ್ಮದ್ ಸಾಹಿಬ್ ಎತ್ತರದ ವೇದಿಕೆಯ ಮೇಲೆ ಕುಳಿತಿದ್ದರು. ಅವರ ಪರವಾಗಿ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಕ್ ಸಾಹಿಬ್ ಅವರು ಹುಝೂರ್(ರ) ಅವರ ಸೇವೆಯಲ್ಲಿ ಒಂದು ರೊಟ್ಟಿಯನ್ನು ಹೀಗೆ ಹೇಳುತ್ತಾ ಪ್ರಸ್ತುತಪಡಿಸಿದರು, "ಇದು ನಿಮಗಾಗಿ ಮತ್ತು ನಿಮ್ಮೊಂದಿಗೆ ಇರುವವರಿಗಾಗಿ ಇದೆ." ಹುಝೂರ್(ರ) ಆ ರೊಟ್ಟಿಯನ್ನು ತೆಗೆದುಕೊಂಡು ತಮ್ಮ ಸಹಚರರಿಗೆ ಹಂಚಿದರು. ಅದರ ನಂತರ, ಮೆರವಣಿಗೆಯು ಮತ್ತೆ ಗಟ್ಟಿಯಾದ ಧ್ವನಿಯಲ್ಲಿ ಈ ಸ್ತುತಿಗೀತೆಯನ್ನು ಪಠಿಸುತ್ತಾ ಮುಂದೆ ಸಾಗಿತು. ಮದ್ರಸಾ ಅಹ್ಮದಿಯ್ಯ ಮತ್ತು ಶಾಲಾ ಗೇಟ್‌ಗಳ ಬಳಿ ಸ್ವಾಗತ ಮತ್ತು ಸ್ವಾಗತದ ವರ್ಣರಂಜಿತ ಮತ್ತು ಉತ್ತಮ ತುಣುಕುಗಳನ್ನು ಪ್ರದರ್ಶಿಸಲಾಗಿತ್ತು.

ಮಸ್ಜಿದ್ ಮುಬಾರಕ್‌ನ ಪೂರ್ವ ಭಾಗದಲ್ಲಿರುವ ಕಬ್ಬಿಣದ ಗೇಟ್‌ನ ಬಳಿಯ ಚೌಕ್‌ಗೆ ಆಗಮಿಸಿ ಹುಝೂರ್(ರ) ಅವರು ಇಡೀ ಸಭೆಯೊಂದಿಗೆ ಹಿಂದಿರುಗುವಂತೆ ಪ್ರಾರ್ಥಿಸಿದರು. ಆ ಸಮಯದಲ್ಲಿನ ನೋಟವು ಅತ್ಯಂತ ಕರುಣಾಜನಕ ಮತ್ತು ಪರಿಣಾಮಕಾರಿಯಾಗಿತ್ತು, ಹುಝೂರ್(ರ) ಅವರ ಧ್ವನಿಯು ಕರುಣೆಯಿಂದ ತುಂಬಿತ್ತು ಮತ್ತು ಅವರ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದವು, ಮತ್ತು ಪ್ರೇಕ್ಷಕರು ಸಹ ಸಂತೋಷದಿಂದ ಕಂಬನಿ ಸುರಿಸುತ್ತಿದ್ದರು ಮತ್ತು ಅವರಲ್ಲಿ ಕೆಲವರು ಬಹಳ ದುಃಖದಿಂದ ಅಳುತ್ತಿದ್ದರು. ಈ ದಯನೀಯ ಸ್ಥಿತಿಯಲ್ಲಿ, ಹುಝೂರ್(ರ) ಅವರು ಕಣ್ಣೀರಿನ ಕಣ್ಣುಗಳು ಮತ್ತು ನೋವಿನ ಸ್ವರದಿಂದ ಹೇಳಿದರು.

"ನೋಡಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಈ ಪ್ರಾರ್ಥನೆಯು ಎಷ್ಟು ಸೂಕ್ಷ್ಮವಾಗಿದೆ ನಾವು ಇಂದು ಅದರ ದೃಶ್ಯ ನೋಡುತ್ತಿದ್ದೇವೆ. ಇದೇ ಸ್ಥಳದಲ್ಲಿ, ಮತ್ತು ಇದೇ ಮನೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ದಾವೆ ಮಾಡಿದಾಗ ಅವರು ಒಬ್ಬಂಟಿಯಾಗಿದ್ದರು ಮತ್ತು ಏಕಾಂಗಿಯಾಗಿದ್ದರು. ಜೊತೆಗಾರ ಅಥವಾ ಸಹಾಯಕ ಇರಲಿಲ್ಲ. ಆ ಸಮಯದಲ್ಲಿ ನೌಝುಬಿಲ್ಲಾಹ್ ಇವರು ವಂಚಕರು, ಸುಳ್ಳುಗಾರರು, ಅವರೊಬ್ಬರು ದೇಶದ್ರೋಹಿ ಎಂದು ಸುತ್ತಮುತ್ತಲಿಂದ ಧ್ವನಿಗಳು ಕೇಳಿಬಂದವು. ಅವರನ್ನು ಹುಳುವಿನಂತೆ ಕೊಲ್ಲುತ್ತೇವೆ ಎಂದು ಶತ್ರುಗಳು ಹೇಳುತ್ತಿದ್ದರು.

ಆದರೆ ಸರ್ವಶಕ್ತನಾದ ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ನಿಮ್ಮನ್ನು ಬೆಂಬಲಿಸಿದನು. ಮತ್ತು ಇಂದು ನಾವು ಇಲ್ಲಿ ಒಟ್ಟುಗೂಡಿದ್ದೇವೆ, ಅದೇ ನೊಗದಿಂದ ಬಂಧಿತರಾಗಿದ್ದೇವೆ, ನಿಮ್ಮ ಸಹಾಯದಿಂದಾಗಿ, ಸರ್ವಶಕ್ತನಾದ ಅಲ್ಲಾಹನು ನಮಗೆ ಎಲ್ಲಾ ಕ್ಷೇತ್ರಗಳಲ್ಲಿ ಜಯವನ್ನು ನೀಡಿದ್ದಾನೆ. ಅವರ ಮೂಲಕ ಮತ್ತು ಅವರ ವಾಗ್ದಾನಗಳ ಪ್ರಕಾರ, ಸರ್ವಶಕ್ತನಾದ ಅಲ್ಲಾಹನು ನಮಗೆ ನಿಜವಾಗಿ ಬಂದ ಗೌರವಗಳನ್ನು ನೀಡಿದನು ಮತ್ತು ಸರ್ವಶಕ್ತನಾದ ಅಲ್ಲಾಹನು ಅವರಿಗೆ ವಾಗ್ದಾನ ಮಾಡಿದ ಪ್ರತಿಫಲಗಳ ವಾರಸುದಾರರನ್ನಾಗಿ ಮಾಡಿದನು ಮತ್ತು ವಾಸ್ತವ ಮತ್ತು ಸತ್ಯವನ್ನು ಗಣನೆಗೆ ತೆಗೆದುಕೊಂಡರೆ, ಎಲ್ಲಾ ಮಹಿಮೆಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸಲ್ಲುತ್ತದೆ, ಮುಹಮ್ಮದ್ ಸಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಸಲ್ಲುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಸಲ್ಲುತ್ತದೆ.

ಈ ಮಾತುಗಳನ್ನು ಹೇಳಿದ ನಂತರ, ಹುಝೂರ್(ರ) ಅವರು ಮಸ್ಜಿದ್ ಮುಬಾರಕ್‌ನ ಕೆಳಗೆ ಅತ್ಯಂತ ಸೌಂದರ್ಯದಿಂದ ನಿರ್ಮಿಸಲಾದ ಮತ್ತು ಹೂವುಗಳಿಂದ ಅಲಂಕರಿಸಲ್ಪಟ್ಟ ಗೇಟ್ ಮೂಲಕ ಹಾದುಹೋದರು. ಡೇರೆ ಹಾಕಲಾದ ರಸ್ತೆಯ ಮೂಲಕ ಹಾದು ಮೆಟ್ಟಿಲುಗಳ ಮೂಲಕ ಮಸ್ಜಿದ್ ಮುಬಾರಕ್‌ಗೆ ಹೋದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆರಂಭಿಕ ದಿನಗಳಲ್ಲಿ ಮಸೀದಿಯಾಗಿದ್ದ ಮಸೀದಿಯ ಆ ಭಾಗಕ್ಕೆ ಹೋದರು. ಹುಝೂರ್(ರ) ಅವರು ತಮ್ಮ ಸಹಚರರೊಂದಿಗೆ ಎರಡು ಕರಅತ್ ನಫಿಲ್ ನಮಾಝ್ ನಿರ್ವಹಿಸಿದರು. ನಮಾಝ್ ನಂತರ, ಹುಝೂರ್(ರ) ಅವರು ಸಭೆಗೆ ಅಸ್ಸಲಾಮು ಅಲೈಕುಮ್ ಎಂದು ಹೇಳಿದ ನಂತರ ದಾರುಲ್-ಮಸೀಹ್‌ಗೆ ತಮ್ಮ ಮನೆಗೆ ತೆರಳಿದರು.

ಈ ರೀತಿಯಾಗಿ, ಸುಮಾರು ನಾಲ್ಕು ತಿಂಗಳ ಮುಂಚೆ ಜುಲೈ 12, 1924 ರಂದು ಪ್ರಾರಂಭವಾದ ಹುಝೂರ್(ರ) ಅವರ ಈ ಅನುಗ್ರಹದಾಯಕ ಮತ್ತು ಐತಿಹಾಸಿಕ ಯಾತ್ರೆಯು ನವೆಂಬರ್ 24, 1924 ರಂದು ಯಶಸ್ವಿಯಾಗಿ ಕೊನೆಗೊಂಡಿತು ಮತ್ತು ಸುದೀರ್ಘ ಯುರೋಪ್ ಪ್ರಯಾಣದ ನಂತರ ಅವರು ವಿಜಯ ಮತ್ತು ಸಮೃದ್ಧಿಯ ಧ್ವಜವನ್ನು ಬೀಸುತ್ತಾ ಖಾದಿಯಾನ್‌ನ ಪವಿತ್ರ ಭೂಮಿಗೆ ಮರಳಿದರು.

-------------*****-------------

ಪುಟ ಸಂಖ್ಯೆ 02ರ ಉಳಿದ ಭಾಗ

ಅಲಿಯ ಕಂಟದಲ್ಲಿ.

ಕೇವಲ ಇಷ್ಟೇ ಅಲ್ಲ, ಇನ್ನೂ ಹಲವು ಶೀರ್ಷಿಕೆಗಳೊಡನೆ ಅವರಿಗೆ ಉತ್ತರ ನೀಡಲಾಗಿದೆ. ಒಟ್ಟಿನಲ್ಲಿ ಹುಝೂರ್ ಅವರ ಆಕ್ಷೇಪಣೆಗಳಿಗೆ ಕೊಟ್ಟ ಉತ್ತರಗಳಲ್ಲಿನ ಒಂದು ಸಂಕ್ಷಿಪ್ತ ಬರಹ ನಮೂದಿಸುತ್ತೇವೆ. ಅದು ಹುಝೂರ್ ರವರ ಪ್ರಯಾಣದ ನಿಜವಾದ ಉದ್ದೇಶದ ಮೇಲೆ ಬೆಳಕು ಚೆಲ್ಲುತ್ತದೆ. ಹುಝೂರ್ ಹೇಳುತ್ತಾರೆ. "ಈ ಪ್ರಯಾಣದಲ್ಲಿ ನಾವು ಏನೂ ಕಾರ್ಯ ಮಾಡದಿದ್ದರೂ, ಕೇವಲ ವಿಹಾರವೇ ಮಾಡುತ್ತಿದ್ದರೂ, ಆಗಲೂ ಈ ಪ್ರಯಾಣ ಆಕ್ಷೇಪಣೆಗೆ ಅರ್ಹವಾಗಿರಲಿಲ್ಲ. ಏಕೆಂದರೆ ಇದು ಎರಡು ಭವಿಷ್ಯವಾಣಿಗಳನ್ನು ಪೂರ್ತಿಗೊಳಿಸುವ ಉದ್ದೇಶ ಹೊಂದಿದೆ. ಒಂದು ಹಝ್ರತ್ ಪೈಗಂಬರ್(ಸ) ರವರ ಭವಿಷ್ಯವಾಣಿ ಸೀರಿಯಾಕ್ಕೆ ಸಂಬಂಧಿಸಿದ್ದಾಗಿತ್ತು ಮತ್ತು ಇನ್ನೊಂದು ಭವಿಷ್ಯವಾಣಿ ಹಝ್ರತ್ ಮಸೀಹ್ ಮೌಊದ್(ಅ) ರದ್ದು, ಇಂಗ್ಲೆಂಡ್ ಕುರಿತಾಗಿತ್ತು. ಹೀಗಿರುವಾಗ ನಾವು ನಮ್ಮ ಸಂಪತ್ತು ಈ ಪ್ರಯಾಣದ ಮೂಲಕ ಭವಿಷ್ಯವಾಣಿಗಳನ್ನು ಪೂರ್ಣಗೊಳಿಸುವ ಉದ್ದೇಶದಿಂದ ಕೈಗೊಂಡರೆ ಆಕ್ಷೇಪಣೆಗೆ ಕಾರಣವೇನು."

(ಅಲ್ ಫಝುಲ್ ಖಾದಿಯಾನ್ ಅಮಾನ್, 4 ಅಕ್ಟೋಬರ್ 1924, ಪುಟ-4)

**ಸಂಪೂರ್ಣ ವ್ಯವಸ್ಥೆಯನ್ನು ಶಿಫಾರಸ್ಸು ಮಾಡುವುದು.**

ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರಯಾಣದ ಉದ್ದೇಶಗಳ ಮೇಲೆ ಬೆಳಕು ಚೆಲ್ಲುತ್ತಾ ಹೇಳುತ್ತಾರೆ:- ನನ್ನ ಪ್ರಕಾರ, ಈ ಪ್ರಯಾಣ ಅಗತ್ಯವಿರುವ ಉದ್ದೇಶಗಳಲ್ಲಿ ಒಂದು ವಾಗ್ದತ್ತ ಮಸೀಹರ ಸ್ವಪ್ನ ನನಸಾಗಿಸುವುದಾಗಿದೆ. ಎರಡನೆಯದಾಗಿ ಈ ಧಾರ್ಮಿಕ ಅವಶ್ಯಕತೆಯು, ನಮ್ಮ ಜಮಾಅತ್‌ನ ಕೆಲಸವು ಇಡೀ ಜಗತ್ತಿನಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸುವುದಾಗಿದೆ ಮತ್ತು ಇಡೀ ಜಗತ್ತನ್ನು ಇಸ್ಲಾಮಿನ ವಲಯಕ್ಕೆ ತರುವುದು ನಮ್ಮ ಕರ್ತವ್ಯವಾಗಿರುವುದರಿಂದ, ಇದಕ್ಕಾಗಿ ಒಂದು ಪರಿಪೂರ್ಣ ವ್ಯವಸ್ಥೆ ಆಯೋಜಿಸುವುದು ಅಗತ್ಯವಾಗಿದೆ. ಈ ವ್ಯವಸ್ಥೆಯನ್ನು ಸ್ಥಾಪಿಸಲು ಖಲೀಫರು ಪಾಶ್ಚಿಮಾತ್ಯ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಯನ್ನು ನೋಡುವುದು ಮುಖ್ಯವಾಗಿದೆ. ಇಸ್ಲಾಮಿನ ನಂಬಿಕೆಗಳನ್ನು ಒಪ್ಪಿಕೊಳ್ಳಲು ಯೂರೋಪ್ ಇಂದು ಸಿದ್ಧವಾಗಿದೆ. ಆದರೆ ಅದು ತನ್ನ ಅಭ್ಯಾಸಗಳನ್ನು ಬಿಡಲು ಸಿದ್ಧವಾಗಿಲ್ಲ. ಕೇವಲ ಖುದ್ದು ತಯಾರಿಲ್ಲ, ಬದಲು ಅದು ಏಷ್ಯಾ ಮತ್ತು ಆಫ್ರಿಕಾಗೂ ಸಹ ತಮ್ಮಂತೆ ಮಾಡಿ ಇಸ್ಲಾಂ ಧರ್ಮವನ್ನು ಲೋಕದಿಂದ ಹೊರಗಿಡಬಯಸುತ್ತದೆ. ಈ ಜನರ ಶೈಲಿ ಮತ್ತು ಅವರ ಜೀವನ ಪರಿಸ್ಥಿತಿಗಳು ನಮ್ಮಿಂದ ತುಂಬಾ ವಿಭಿನ್ನವಾಗಿವೆ. ಮನೆಯಲ್ಲಿ ಕುಳಿತು ಅವರನ್ನು ನಿರ್ಣಯಿಸುವುದೆಂದರೆ ನೆಲದ ಮೇಲೆ ಕುಳಿತು ಚಂದ್ರನ ಪರಿಸ್ಥಿತಿಗಳನ್ನು ನಿರ್ಣಯಿಸುವಂತಿದೆ. ಆದರೆ ಚಂದ್ರನ ಪರಿಸ್ಥಿತಿಗಳು ದೂರದಲ್ಲಿದ್ದರೂ ದೂರದರ್ಶಕದಿಂದ ನೋಡಬಹುದು. ಆದರೆ ಇದು ಅದಕ್ಕಿಂತಲೂ ಕಷ್ಟಕರವಾಗಿದೆ. ಏಕೆಂದರೆ ಇಲ್ಲಿ ಒಂದು ಜೀವಂತ ಸಮುದಾಯದ ಸುಧಾರಣೆ ಪ್ರಶ್ನೆಯಿದೆ. ಅದನ್ನು ಬಾಹ್ಯ ರೂಪದಲ್ಲಿ ಬಗೆಹರಿಸಲು ಆಗದು, ಅದರ ಆಂತರಿಕ ಆಲೋಚನೆಗಳು ಮತ್ತು ಪೂರ್ವಗ್ರಹಗಳ ಮೇಲೆ ನಿರ್ಧರಿಸಬೇಕಾಗುತ್ತದೆ.

(ಯೂರೋಪ್ ಪ್ರವಾಸ, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-385)

**ಶತಮಾನಗಳ ಯೋಜನೆ ಸಿದ್ಧಪಡಿಸುವುದು**

ಪ್ರಯಾಣದ ಒಂದು ಉದ್ದೇಶ ಹುಝೂರ್(ರ) ರವರ ಪದಗಳಲ್ಲಿ ನೋಡಿರಿ. ಹುಝೂರ್(ರ) ಹೇಳುತ್ತಾರೆ:- ಈ ಪ್ರಯಾಣ "ಶತಮಾನಗಳ ಕಾಲ ಪ್ರಚಾರಕ್ಕಾಗಿ ಸಿದ್ಧಪಡಿಸಲು" ಹಮ್ಮಿಕೊಳ್ಳಲಾಗಿದೆ.

(ಅಲ್ ಫಝುಲ್ ಖಾದಿಯಾನ್-16 ಆಗಸ್ಟ್ 1924, ಪುಟ-3, ಕಾಲಮ್-1)

**ಹುಝೂರ್(ರ) ಅವರ ತಮ್ಮ ಒಂದು ಸ್ವಪ್ನದ ಪೂರ್ಣಗೊಳ್ಳುವಿಕೆ**

ಹುಝೂರ್(ರ) ಹೇಳುತ್ತಾರೆ:

"ನಾನು ಲಂಡನ್‌ನಲ್ಲಿ ಸಂಸತ್ತಿನ ಶ್ರೇಷ್ಠ ಸದಸ್ಯರು, ನವಾಬ್‌ಗಳು, ಮಂತ್ರಿಗಳು ಮತ್ತು ಇತರ ಮಹಾನ್ ವ್ಯಕ್ತಿಗಳ ಸಭೆಯಲ್ಲಿ ನಾನಿದ್ದೇನೆ. ಅದೊಂದು ಆಮಂತ್ರಣ ಸಭೆಯಾಗಿದ್ದು ಅದರಲ್ಲಿ ನಾನೂ ಸೇರಿಕೊಂಡಿದ್ದೇನೆ. ಶ್ರೀ ಲಾಯ್ಡ್ ಜಾರ್ಜ್ ಮಾಜಿ ಪ್ರಧಾನಿ ಅದರಲ್ಲಿ ಮಾತನಾಡುತ್ತಿದ್ದಾರೆ. ಮಾತನಾಡುವಾಗ ಅವನ ಸ್ಥಿತಿಯು ಬದಲಾಯಿತು ಮತ್ತು ಅವನು ಸಭಾಂಗಣದಲ್ಲಿ ಹೆಜ್ಜೆ ಹಾಕಲು ಪ್ರಾರಂಭಿಸಿದನು. ಅವನ ಚಲನವಲನಗಳು ಎಷ್ಟು ಆತಂಕವನ್ನು ತೋರಿಸಿದವು ಎಂದರೆ ಎಲ್ಲರೂ ಅವನನ್ನು ಹುಚ್ಚರೆಂದು ಭಾವಿಸಿದರು. ಜನರು ಸಾಲಿನಲ್ಲಿ ನಿಂತಿದ್ದಾರೆ ಮತ್ತು ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವೇಗವಾಗಿ ಹೋಗುತ್ತಿದ್ದಾರೆ. ಅಷ್ಟರಲ್ಲಿ ಲಾರ್ಡ್ ಕರ್ಜನ್ ಅವರಿಗೆ ಹೇಳಿದರು. ಅವನ ಸುತ್ತಲೂ ಇದ್ದವರು ಮತ್ತು ಅವರೆಲ್ಲರೂ ಸಭಾಂಗಣದ ಬಾಗಿಲಿನ ಕಡೆಗೆ ತೆರಳಿದರು. ಮತ್ತು ರಸ್ತೆಯ ಪೂರ್ವದ ಕಡೆಗೆ ನೋಡಲಾರಂಭಿಸಿದರು. ಅವರ ವರ್ತನೆಯಿಂದ ನನಗೆ ಇನ್ನಷ್ಟು ಆಶ್ಚರ್ಯವಾಯಿತು. ಖಾಜಿ ಅಬ್ದುಲ್ಲಾ ಸಾಹಿಬ್ ನನ್ನ ಪಕ್ಕದಲ್ಲಿ ನಿಂತಿದ್ದಾರೆ. ನಾನು ಅವರನ್ನು ಕೇಳಿದೆ, ಅವರು ಏನು ಹೇಳಿದರು ಮತ್ತು ಈ ಜನರು ಏಕೆ ಬಾಗಿಲಿನ ಕಡೆಗೆ ತಿರುಗಿದರು. ಮತ್ತು ಅವರು ಏನು ನೋಡುತ್ತಾರೆ? ಲಾರ್ಡ್ ಜಾರ್ಜ್, ಲಾರ್ಡ್ ಕರ್ಜನ್ ಅವರಿಗೆ ನನಗೆ ಹೆಚ್ಚು ಹಿಡಿಸಿಲ್ಲ ಎಂದು ಹೇಳಿದ್ದರು. ಆದರೆ ನಾನು ಅಲೆದಾಡುತ್ತಿದ್ದೇನೆ. ಏಕೆಂದರೆ ಅಹ್ಮದಿಯಾ ಜಮಾಅತ್‌ನ ಇಮಾಮ್ ಅವರ ಪಡೆಗಳು ಕ್ರಿಶ್ಚಿಯನ್‌ರನ್ನು ದಮನ ಮಾಡುತ್ತಿದ್ದಾರೆ ಎಂದು ಖಾಜಿ ನನಗೆ ಉತ್ತರಿಸಿದರು.

(ಯೂರೋಪ್ ಪ್ರವಾಸ, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-383)

**"ವಿಲಿಯಂ ದಿ ಕಾಂಕರರ್" ಕನಸು ನನಸಾಯಿತು**

ಹುಝೂರ್^(ರ) ನುಡಿಯುತ್ತಾರೆ:

**"**ನಿಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಲೋಕದ ಎಲ್ಲಾ ಚುಕ್ಕಾಣಿ ಅವನ ಕೈಯಲ್ಲಿದೆ. ಆ ದೇವರೇ ನನಗೆ ತಿಳಿಸಿದ್ದ, ನಾನು ಇಂಗ್ಲೆಂಡಿಗೆ ಹೋಗಿದ್ದೇನೆ ಮತ್ತು ವಿಜಯಶಾಲಿಯಗಿ ಅದನ್ನು ಪ್ರವೇಶಿಸಿದ್ದೇನೆ ಮತ್ತು ಆ ಸಮಯದಲ್ಲಿ ನನಗೆ ವಿಲಿಯಂ ದಿ ಕಾಂಕರರ್ ಎಂಬ ಬಿರುದು ನೀಡಲಾಗಿದೆ. ಇಂಗ್ಲೆಂಡ್‌ನ ಆಧ್ಯಾತ್ಮಿಕ ವಿಜಯವು ನಾನು ಇಂಗ್ಲೆಂಡಿಗೆ ಹೋಗುವುದರೊಂದಿಗೆ ಮಾತ್ರ ಸಂಬಂದಿಸಿದೆ ಎಂದು ನಾನು ಈ ಕನಸಿನಿಕಂದ ನಂಬಿದ್ದೇನೆ. ಆದರೆ ಅಂತಿಮವಾಗಿ ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ ನಾನು ಇಂಗ್ಲೆಂಡಿಗೆ ತಲುಪಿದ್ದೇನೆ ಮತ್ತು ಈಗ ನನ್ನಿಂದ ಇಂಗ್ಲೆಂಡ್‌ನ ವಿಜಯದ ಅಡಿಪಾಯ ಹಾಕಲಾಗಿದೆ. ಈ ವಿಜಯದ ಅಡಿಪಾಯ ಸ್ವರ್ಗದಲ್ಲಿ ಹಾಕಲಾಗಿದೆ, ಸರಿಯಾದ ಸಮಯದಲ್ಲಿ ಅದನ್ನು ಭೂಮಿಯ ಮೇಲೂ ಘೋಷಿಸಲಾಗುವುದು, ಇಂಗ್ಲೆಂಡ್ ವಿಜಯಿಯಾಗಿದೆ, ಅಲ್ಲಾಹನ ವಾಗ್ದಾನ ನೆರವೇರಿದೆ. ನಾನು ಇಂಗ್ಲೆಂಡ್‌ಗೆ ಬರಬೇಕು ಎಂಬ ಶರತ್ತು ಇತ್ತು. ಅಂದಹಾಗೆ ಅಲ್ಲಾಹನ ಕೃಪೆಯಿಂದ ನಾನು ಇಂಗ್ಲೆಂಡ್‌ಗೆ ಬಂದಿದ್ದೇನೆ. ಈಗ ಅದರ ಕಾರ್ಯಚಟುವಟಿಕೆಗಳು ಪ್ರಾರಂಭವಾಗುವುವು. ಇನ್‌ಶಾಅಲ್ಲಾಹ್. ಭವಿಷ್ಯದಲ್ಲಿ ಜನರು ಇನ್‌ಶಾಅಲ್ಲಾಹ್ ನೋಡುವರು, ನಾನು ಏನೆಲ್ಲ ಬರೆದಿದ್ದೆ, ಅದು ಸತ್ಯವಾಗಿದೆ. ಅಜ್ಞಾನಿಗಳಿಗೆ ತಿಳಿಯದು. ಕೆಲವು ಸಮಸ್ಯೆಗಳು ಕೆಲವು ನಿರ್ಧಿಷ್ಟ ವ್ಯಕ್ತಿತ್ವಕ್ಕೆ ಸಂಬಂಧಿಸುತ್ತವೆ. ಇಂಗ್ಲೆಂಡ್‌ನಲ್ಲಿ ಧರ್ಮದ ಬೆಳವಣಿಗೆಯ ಪ್ರಶ್ನೆಯು ಸರ್ವಶಕ್ತನಾದ ಅಲ್ಲಾಹನ ತೀರ್ಪಿನಲ್ಲಿ ನಾನು ಇಂಗ್ಲೆಂಡ್ ಬರುವುದಕ್ಕೆ ಸಂಬಂಧಿಸಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಸ್ವಪ್ನದಲ್ಲಿ ಅದನ್ನೇ ತೋರಿಸಲಾಗಿತ್ತು. ನೀವು ವಿಲಾಯತ್‌ಗೆ ಹೋದಾಗ ಈ ವಿಜಯವು ಪ್ರಾರಂಭವಾಗುತ್ತದೆ ಎಂದು. ಪ್ರವಾದಿಗಳ ಖಲೀಫ಼ರು ಅವರ ಸ್ವಂತ ಅಸ್ತಿತ್ವವೆಂದು ಪರಿಗಣಿಸಲ್ಪಟ್ಟಿರುವುದರಿಂದ ಎರಡು ಕನಸುಗಳ ಅರ್ಥ ಒಂದೇ ಆಗಿದೆ. ಆದ್ದರಿಂದ ಈಗ ವಾಗ್ದತ್ತ ಮಸೀಹನ ಉತ್ತರಾದಿಕಾರಿಯು ಲಂಡನ್ ತಲುಪಿದರು. ಇನ್‌ಶಾಅಲ್ಲಾಹ್ ಈಗ ವಿಜಯಗಳ ಬಾಗಿಲುಗಳು ತೆರೆಯುವುವು. ಅದು ಯವಾಗಲೂ ಉದ್ದೇಶಿಸಲ್ಪಟ್ಟಿದ್ದೆ. (ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಅಕ್ಟೋಬರ್ 1924, ಪುಟ-3, ಕಾಲಮ್-3)

**"ವಿಲಿಯಂ ದಿ ಕಾಂಕರರ್ ಎಂಬ ಸ್ವಪ್ನ ಬಾಹ್ಯರೂಪದಲ್ಲೂ ನೆರವೇರಿತು."**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ^(ರ) ಅವರಿಗೆ ಸಮುದ್ರ ದಂಡದ ಒಂದು ಸ್ಥಳದಲ್ಲಿ ಬಂದಿಳಿದದ್ದನ್ನು ಸ್ವಪ್ನದಲ್ಲಿ ತೋರಿಸಲಾಗಿತ್ತು. ಅವರು ಮರದ ಕಟ್ಟುಗಳ ಮೇಲೆ ತಮ್ಮ ಪಾದಗಳನ್ನು ಇಟ್ಟುಕೊಂಟು ಧೈರ್ಯಶಾಲಿ ಮತ್ತು ಯಶಸ್ವಿ ಸೇನಾಪತಿಯಂತೆ ಸುತ್ತಲೂ ನೋಡಿದರು. ಅಲ್ಲಿಂದ ಒಂದು ಧ್ವನಿ ಬಂತು. **"**ವಿಲಿಯಂ ದಿ ಕಾಂಕರರ್**"** ಹುಝೂರ್ ಅವರ ಯೂರೋಪ್ ಪ್ರಯಾಣದಿಂದ ಈ ಸ್ವಪ್ನವೂ ನೆರವೇರಿತು. ಹುಝೂರ್ ಈ ಸ್ವಪ್ನವನ್ನು ಬಾಹ್ಯವಾಗಿ ಪೂರ್ಣಗೊಳಿಸಲು 2 ಅಕ್ಟೋಬರ್ 1924 ರಂದು ಒಂದು ಪ್ರವಾಸ ಕೈಗೊಂಡರು. Pevensi ಖಾದಿಯಾನ್‌ಗೆ ತಲುಪಿದರು ಮತ್ತು ಅಲ್ಲಿಂದ ಹಡಗು ಮೂಲಕ **"**ವಿಲಿಯಂ ದಿ ಕಾಂಕರರ್**"** ತಲುಪಿದ ಜಾಗಕ್ಕೆ ತಲುಪಿದರು.

(ಅಲ್ ಫಝ್ಲ್‌ಖಾದಿಯಾನ್ ದಾರುಲ್ ಅಮಾನ್, 20 ನವೆಂಬರ್ 1924, ಪುಟ-5, ಕಾಲಮ್-2)

ಹುಝೂರ್ ಹೇಳುತ್ತಾರೆ:- **"**ನಾನು ಯೂರೋಪ್ ಪ್ರವಾಸದ ನಿರ್ಣಯ ಕೈಗೊಂಡ ಮೇಲೆ **"ವಿಲಿಯಂ ದಿ ಕಾಂಕರ್**‌ನ ಸ್ವಪ್ನ ಕಂಡಿದ್ದನ್ನು ನೆನಪಾಯಿತು. ಇಂಗ್ಲೆಂಡ್‌ನ ಸಮುದ್ರ ದಡಕ್ಕೆ ಕಾಲಿಟ್ಟಾಗ ತಿಳಿಯಿತು. ಈಗ ಅಲ್ಲಾಹನ ಕೃಪೆಯಿಂದ ವಿಜಯ ದೊರೆತಿದೆ. ಅಂದಹಾಗೆ ಅದೇ ಸಮಯ ಈ ಪ್ರಬಂಧ ಬರೆದೆ. ಅದು ಅಲ್ ಫಝ್ಲ್‌ನಲ್ಲಿ ಪ್ರಕಟಗೊಂಡಿದೆ. ಅದರಲ್ಲಿ ನಾನು ಬರೆದುಬಿಟ್ಟಿದ್ದೆ. **"**ಇಂಗ್ಲೆಂಡ್‌ನ ವಿಜಯಪರ್ವ ಪ್ರಾರಂಭವಾಗಿದೆ**"** ಎಂದು.

(ಅಖ್ಬಾರೆ ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-5, ಕಾಲಮ್ 3)

**ಸಿರಿಯಾ ಭವಿಷ್ಯವಾಣಿ ಹೇಗೆ ಪೂರ್ಣಗೊಂಡಿತು.**

ಸೀರಿಯಾಕ್ಕೆ ಸಂಬಂಧಿಸಿದ ಹದೀಸ್ ಹೀಗಿದೆ: **ಬಅಸಲ್ಲಾಹು ತಆಲಲ್‌ಮಸೀಹ ಬ್ನ ಮರ್ಯಮ ಫಯನ್‌ಝಿಲು ಇಂದಲ್ ಮನಾರತಿಲ್ ಬೈಝಾಇ ಶರ್ಖಿಯ್ಯ ದಮಿಷ್ಕ ಬೈನ ಮಹ್‌ಝೂದತೈನಿ ವಾಝಿಅನ್ ಕಫ್ಫೈಹಿ ಅಲಾ ಅಜ್ನಿಹತಿ ಮಲಕೈನಿ-** ಅಂದರೆ ಅಲ್ಲಾಹನು ಮರಿಯಮ್ಮನ ಪುತ್ರ ಮಸೀಹ್‌ನನ್ನು ಅವತರಿಸುವರು. ಸೀರಿಯಾದ ಪೂರ್ವ ದಿಕ್ಕಿನ ಬಳಿ ಗೋಪುರದ ಬಳಿ, ಎರಡು ಹಳದಿ ಬಣ್ಣದ ಚಾದರಗಳನ್ನು ಧರಿಸಿ, ಎರಡು ದೇವದೂತರ ಭುಜಗಳ ಮೇಲೆ ಕೈಯನ್ನಿಟ್ಟು ಅವತರಿಸುವರು. (ಮುಸ್ಲಿಂ ಕಿತಾಬುಲ್ ಫಿತನ್ ಬಾಬ್ ಝಿಕ್ರುದ್ದಜ್ಜಾಲ್ ವ ಸಫ್ಹ ವಮಾಹು)

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಹದೀಸಿನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ:-

**ಸುಮ್ಮ ಯುಸಾಫಿರುಲ್ ಮಸೀಹುಲ್ ಮೌಊದು ಔ ಖಲೀಫತುಮ್ಮಿನ್ ಖುಲಫಾಇಹೀ ಒ;; ಅರ್ಝಿ ದಮಿಷ್ಕ ಫಹಾಝ ಮನಲ್‌ಖೌಲಿಲ್ಲಝೀ ಜಾಅಫಿ ಹದೀಸಿ ಮುಸ್ಲಿಮ ಅನ್ನ ಈಸಾ ಯನ್‌ಝಿಲು ಇಂದ ಮನಾರತಿ ದಮಿಷ್ಕ-** ಅಂದರೆ ವಾಗ್ದತ್ತ ಮಸೀಹ್ ಅಥವಾ ಅವರ ಖಲೀಫರುಗಳಲ್ಲಿ ಒಬ್ಬರು ಸಿರಿಯಾ ಕಡೆ ಪ್ರಯಾಣ ಮಾಡುವರು. ಆದ್ದರಿಂದ ಇದರರ್ಥ ಮುಸ್ಲಿಂ ಹದೀಸಿನ ಪ್ರಕಾರ ಈಸಾ ದಮಸ್ಕ್‌ನ ಮಿನಾರದ ಬಳಿ ಅವತರಿಸುವರು.

(ಹಮಾಮತುಲ್ ಬುಶ್ರ, ಪುಟ-37, ಉರ್ದು ಅನುವಾದ ಪುಟ-121)

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೇಲಿನ ಹದೀಸನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ:-

**"**ಪ್ರಸ್ತುತ ಪರಿಸ್ಥಿತಿಗೆ ಹೊಂದಿಕೆಯಾಗದ ಕೆಲವು ವಿವಿಧ ಹದೀಸುಗಳನ್ನು ಹೇರಿಸಿದರೂ, ಯಾವುದೇ ತೊಂದರೆ ಇಲ್ಲ, ಏಕೆಂದರೆ ಅಲ್ಲಾಹನು ಈ ಭವಿಷ್ಯವಾಣಿಗಳನ್ನು ತನ್ನ ಅನುಯಾಯಿಯಿಂದ ಒಂದು ಕಾಲದಲ್ಲಿ ನೆರವೇರಿಸಿಕೊಡುವನು. ಅವರು ಸಾದೃಶ್ಯ ಮಸೀಹರ ಸ್ಥಾನಮಾನ ಹೊಂದಿರುವವರಾಗಿರುವರು. ಅನುಯಾಯಿಗಳಿಂದ ಕೆಲವು ಸೇವೆಗಳ ನೆರವೇರಿಕೆಯು ವಾಸ್ತವವಾಗಿ ನಾವು ಆ ಸೇವೆಗಳನ್ನು ನಮ್ಮ ಕೈಯಿಂದಲೆ ಪೂರೈಸಿದ್ದೇವೆ ಎಂದು ಪ್ರತಿಯೊಬ್ಬ ವ್ಯಕ್ತಿಯು ಅರ್ಥ ಮಾಡಿಕೊಳ್ಳಬಹುದು. ವಿಶೇಷವಾಗಿ ಕೆಲವು ಅನುಯಾಯಿಗಳು ತನ್ನ ಗುರುವಿನಲ್ಲಿ ಸಮರ್ಪಣೆಗೊಂಡು ಅವರ ರೂಪವೇ ಧರಿಸಿಕೊಳ್ಳುತ್ತಾರೆ, ಅಲ್ಲಾಹನ ಕೃಪೆಯು ಅವರಿಗೆ ಸಾದೃಶ್ಯ ರೂಪವನ್ನು ನೀಡುತ್ತದೆ. ಆಗ ಅವರ ರೂಪ ನಮ್ಮ ರೂಪವಾಗುತ್ತದೆ. ಏಕೆಂದರೆ ನಿಸ್ಸಂದೇಹವಾಗಿ ಅವರ ಉದ್ದೇಶವು ನಮ್ಮ ಉದ್ದೇಶವಾಗಿದೆ, ನಮ್ಮ ಮಾರ್ಗವನ್ನು ಅನುಸರಿಸುವವರು ನಮ್ಮಿಂದ ಪ್ರತ್ಯೇಕವಾಗಿಲ್ಲ, ನಮ್ಮ ಗುರಿಗಳನ್ನು ಪೂರೈಸುವವರು ನಿಜವಾಗಿಯೂ ನಮ್ಮ ಅಸ್ತಿತ್ವದಲ್ಲಿರುತ್ತಾರೆ.**"**

(ಇಝಾಲಾ ಅವ್‌ಹಾಮ್, ಭಾಗ-1, ರೂಹಾನಿ ಖಝಾಇನ್, ಸಂಪುಟ-3, ಪುಟ-216)

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್^(ರ) ದಮಿಶ್ಕ್‌ ಮಿನಾರದ ಬಳಿ ಮಸೀಹರ ಆಗಮನದ ಭವಿಷ್ಯವಾಣಿ ಪೂರ್ತಿಯಾಗುವ ಬಗ್ಗೆ ಹೇಳುತ್ತಾರೆ, ಆಗ ಅವರು ಈ ಪ್ರಯಾಣ ನಿಮಿತ್ತ ದಮಿಶ್ಕ್‌ನಲ್ಲಿದ್ದರು:-

**"**ಮೌಲ್ವಿ ಅಬ್ದುಲ್ ಖಾದರ್ ಸಾಹಿಬ್, ಸಯ್ಯದ್ ವಲಿಯಲ್ಲಾಹ್ ಶಾಹ್ ಸಾಹಿಬರ ಮಿತ್ರರಾಗಿದ್ದರು. ಅವರಿಂದ ನಾನು ಕೇಳಿದೆ. ನಿಮ್ಮ ದೃಷ್ಟಿಯಲ್ಲಿ ಹಝ್ರತ್ ಈಸಾ ಅವತರಿಸುವ ಆ ಗೋಪುರ ಎಲ್ಲಿದೆ? ಅವರು ಹೇಳಿದರು. ಮಸ್ಜಿದ್ ಅಮ್‌ವಿಯದ್ದಾಗಿದೆ. ಆದರೆ ಇನ್ನೊರ್ವ ಮೌಲ್ವಿ ಸಾಹಿಬ್ ಹೇಳಿದರು. ಕ್ರೈಸ್ತರ ಓಣಿಯಲ್ಲಿದೆ. ಮತ್ತೊಬ್ಬರು ಹೇಳಿದರು. ಹಝ್ರತ್ ಈಸಾ ಖುದ್ದು ಆಗಮಿಸಿ ನಿರ್ಮಿಸುವರು. ಈಗ ನಮಗೆ ಆಶ್ಚರ್ಯ ಆಗತೊಡಗಿತು, ಅದು ಯಾವ ಮಿನಾರವಾಗಿರಬಹುದು ಮುಂಜಾನೆ ನೋಡೋಣ, ನಾನು ಹೋಟೆಲ್‌ನಲ್ಲಿ ನಮಾಝ್ ನಿರ್ವಹಿಸಿಕೊಟ್ಟೆನು. ಆ ಸಮಯದಲ್ಲಿ ನಾನು ಮತ್ತು ಝುಲ್ ಫಿಖಾರ್ ಖಾನ್ ಸಾಹಿಬ್ ಮತ್ತು ಡಾ॥ ಹಷ್ಮತುಲ್ಲಾಹ್ ಸಾಹಿಬ್ ಇದ್ದರು, ಎಂದರೆ ನನ್ನ ಹಿಂದೆ ನಮಾಝ್ ನಿರ್ವಹಿಸುತ್ತಿದ್ದರು. ನಾನು ಸಲಾಂ ಮುಗಿಸಿದ ನಂತರ ನೋಡಿದೆ.

ಮುಂದೆ ಮಿನಾರವಿದೆ, ನಮ್ಮ ಮತ್ತು ಅದರ ನಡುವೆ ಕೇವಲ ಒಂದು ರಸ್ತೆ (Road) ಅಡ್ಡ ಇದೆ. ಅದೇ ಆ ಗೋಪುರವಾಗಿದೆ ಮತ್ತು ನಾವು ಅದರ ಪೂರ್ವದಲ್ಲಿದ್ದೆವು. ಅದೇ ಬಿಳಿ ಗೋಪುರ ಅಲ್ಲಿತ್ತು. ಬೇರೆ ಯಾವುದೂ ಇರಲಿಲ್ಲ. ಮಸ್ಜಿದ್ ಅಮ್‌ವಿಯದ ಗೋಪುರ ನೀಲಿ ಬಣ್ಣದ್ದಾಗಿದ್ದವು. ನಾನು ಆ ಬಿಳಿ ಗೋಪುರವನ್ನು ಕಂಡಾಗ ಮತ್ತು ಹಿಂದೆ ಎರಡನೇ ಮುಖ್ತದಿ ಇದ್ದರು. ನಾನು ಹೇಳಿದೆ. ಆ ಹದೀಸ್ ಪೂರ್ಣಗೊಂಡಿದೆ.

(ಅಖ್ಬಾರ್ ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-6,7)

ಮಿನಾರದ ಬಳಿ ಹುಝೂರ್(ರ) ಅವರ ಆಗಮನವು ವಾಸ್ತವದಲ್ಲಿ ಮಸೀಹ್ ಮೌಊದ್(ಅ) ರವರ ಆಗಮನವೇ ಆಗಿದೆ. ಮೊದಲನೆಯದಾಗಿ ಹಝ್ರತ್ ಮಸೀಹ್ ಮೌಊದ್(ಅ) ಭವಿಷ್ಯವಾಣಿ ನುಡಿದಿದ್ದರು. ಮಸೀಹರೆಂದರೆ ಮಸೀಹರ ಖಲೀಫ ಎಂದಾಗಿದೆ. ಎಂದರೆ ಅವರು ಮಸೀಹರ ಉತ್ತರಾಧಿಕಾರಿಯು ಆಗಿದ್ದರು ಮತ್ತು ಸಾದೃಶ್ಯರು ಆಗಿದ್ದರು. ಸಂಘಟನೆಯ ಸಾಹಿತ್ಯಗಳ ಅಧ್ಯಯನ ಮಾಡುವವರು ಬಲ್ಲರು. ಆದರೆ ಇತರರು ಸಹ ಅವರನ್ನು ಮಸೀಹ ಎಂದು ಹೇಳದೆ ಇರಲಿಲ್ಲ. ಹುಝೂರ್(ರ) ಹೇಳುತ್ತಾರೆ:

ದೇವನು ಮೊದಲಿನಿಂದಲೂ ಅಂತಹ ಕಾರಣಗಳನ್ನು ಸೃಷ್ಟಿಸಿದನು. ವಿಮಾನದಲ್ಲಿ ನನ್ನ ಮುಂದೆ ವಿಶೇಷ ಕುರುಹುಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ವೈದ್ಯರು ಬಂದು ನಮ್ಮನ್ನು ನೋಡಿದ ನಂತರ ಅವರು ಎಲ್ಲರನ್ನೂ ಎಣಿಸಿದರು. ನಂತರ, ಅವರು ಸ್ವಲ್ಪ ಯೋಚಿಸಿದ ನನ್ನತ್ತ ನೋಡಿ ಹೇಳಿದರು. ಮಸೀಹ್ ಮತ್ತು ಅವರ ಹನ್ನೆರಡು ಸಹಾಬರು, ಅಂತಹ ನುಡಿಗಳು ಸರ್ವಶಕ್ತನಾದ ದೇವರ ನಾಲಿಗೆಯಿಂದ ಮಾತ್ರ ಜಾರಿಯಾಗಲು ಸಾಧ್ಯ.

(ಅಖ್ಬಾರ್ ಅಲ್‌ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-7, ಕಾಲಮ್-1)

**ರೋಗಕ್ಕೆ ಮದ್ದು ಹುಡುಕುವುದು**

ವಿಲಾಯತ್ ತಲುಪುವ ಮೊದಲೇ ಹುಝೂರ್(ರ) ಜಮಾಅತ್‌ನ್ನು ಉದ್ದೇಶಿಸಿ ಲೇಖನ ಬರೆದರು ಅದರಲ್ಲಿ ಅವರು ಪ್ರವಾಸದ ಉದ್ದೇಶ ಮತ್ತು ಧ್ಯೇಯಗಳ ಬಗ್ಗೆ ಬೆಳಕು ಚೆಲ್ಲುತ್ತಾ ಹೇಳುತ್ತಾರೆ:-

"ನಾನು ಪ್ರಯಾಣಕ್ಕೆ ಹೊರಟಿದ್ದೇನೆ, ನಾನು ಹೋಗುತ್ತಿರುವ ಕೆಲಸವು ಅದರ ಸ್ವಭಾವದಲ್ಲಿ ಸಂಪೂರ್ಣವಾಗಿ ವಿಶಿಷ್ಟವಾಗಿದೆ, ನಮ್ಮ ಕೆಲವು ಸ್ನೇಹಿತರು ಸಹ ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ, ಇಸ್ಲಾಂ ಧರ್ಮವನ್ನು ಬೋಧಿಸುವುದು ಪ್ರತಿಯೊಬ್ಬರು ಕೆಲಸವಾಗಿದೆ ಮತ್ತು ನನ್ನದು ಸಹ. ಕೆಲವರು ರೈಲಿನಲ್ಲಿ ಅಹ್ಮದಿಯರಲ್ಲದವರಿಗೆ ನಾನು ಧರ್ಮ ಪ್ರಚಾರಕ್ಕಾಗಿ ವಿಲಾಯತ್‌ಗೆ ಹೊರಟಿದ್ದೇನೆ ಎಂದು ಕೇಳಿದ್ದೇನೆ. ಆದರೆ ನಾನು ಸ್ಪಷ್ಟವಾಗಿ ಬರೆದಿರುವಂತೆ ಖಲೀಫರು ಬೋಧಿಸಲು ಹೊರಟಿದ್ದಾರೆ ಎಂಬುದು ನಿಜವಲ್ಲ, ಅದರ ಮುಖ್ಯ ಕಾರ್ಯವು ಪ್ರಸರಣವನ್ನು ಮತ್ತು ಮೇಲ್ವಿಚಾರಣೆ ಮಾಡುವುದಾಗಿದೆ. ಅವರು ಬೋಧಕರಾಗಿ ಹೊರಗೆ ಹೋಗುವುದು ಸಂಘಟನೆಗೆ ಅಪಾಯಕಾರಿ, ಸಮಸ್ಯೆಗಳನ್ನು ಉಂಟು ಮಾಡಬಹುದು. ಇದರಿಂದ ಹೊರಬರಲು ಕಷ್ಟವಾಗುತ್ತದೆ. ಆದ್ದರಿಂದ ಈ ಪ್ರವಾಸವು ಆ ಉಪದೇಶಕ್ಕಾಗಿ ಅಲ್ಲ, ಆದರೆ ಉಪದೇಶದ ತೊಂದರೆಗಳನ್ನು ಕಂಡುಹಿಡಿಯುವುದು ಮತ್ತು ಭವಿಷ್ಯದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಬೋಧಿಸಲು ಅನುಕೂಲಕರ ವಾತಾವರಣ ನಿರ್ಮಿಸುವುದಾಗಿದೆ. ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಇಸ್ಲಾಮಿನ ಹರಡುವಿಕೆಯೊಂದಿಗೆ ಉದ್ಭವಿಸುವ ಆ ಅಪಾಯಕಾರಿ ವಿಪತ್ತುಗಳಿಗೆ ಪರಿಹಾರ ಹುಡುಕುವುದಾಗಿದೆ. ಮುಂಚಿತವಾಗಿ ಕಾಳಿಜಿ ವಹಿಸದಿದ್ದರೆ, ಪಶ್ಚಿಮದಲ್ಲಿ ಇಸ್ಲಾಂ ಧರ್ಮದ ಹರಡುವಿಕೆಯು ಇಸ್ಲಾಂನ ನಾಶಕ್ಕೆ ಕಾರಣವಾಗುವುದು."

(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 16 ಆಗಸ್ಟ್ 1924, ಪುಟ-7, ಕಾಲಮ್-1)

ಯೂರೋಪಿನಲ್ಲಿ ಇಸ್ಲಾಂ ಧರ್ಮದ ಪ್ರಚಾರಕ್ಕೆ ಯಾವ ರೀತಿಯ ಆತಂಕಗಳಿವೆ ಎಂದು ವಿವರಿಸುತ್ತಾ ಹೇಳಿದರು. ನಾವು ಎರಡು ಬೆಂಕಿಯಲ್ಲಿದ್ದೇವೆ, ನಮ್ಮ ಉದಾಹರಣೆಯು 'ಅತ್ತ ಹುಲಿ ಇತ್ತ ಖೆಡ್ಡಾ' ಎಂಬಂತಿದೆ. ಈ ತೊಂದರೆಗೆ ಪರಿಹಾರ ಹುಡುಕಲು ಅಥವಾ ಸ್ಥಳೀಯ ಪರಿಸ್ಥಿತಿಗಳನ್ನು ಕಂಡುಹಿಡಿಯುವುದು ಮತ್ತು ಬೋಧಕರನ್ನು ಕಾಯಲು ಮತ್ತು ಹಡಗನ್ನು ಸುರಕ್ಷಿತವಾಗಿ ಬಂಡಗಳ ಮೂಲಕ ಮಾರ್ಗದರ್ಶನ ನೀಡುವುದಂತಾಗಿದೆ. ಸರ್ವಶಕ್ತ ದೇವನ ಸಹಾಯವನ್ನು ಹೊರತುಪಡಿಸಿ ಇಸ್ಲಾಂ ಧರ್ಮವನ್ನು ಉಳಿಸುವುದು ಕಷ್ಟವಾಗಿದೆ. ಈ ಸಮಯ ನನ್ನ ಪ್ರಯಾಣದ ಇದೇ ಉದ್ದೇಶವೂ ಇದೆ ಆಗಿದೆ.

(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 16 ಆಗಸ್ಟ್ 1924, ಪುಟ-7, ಕಾಲಮ್-1)

**ಇಂಗ್ಲೆಂಡ್‌ನ ಆಧ್ಯಾತ್ಮಿಕ ವಿಜಯ ಆರಂಭಗೊಂಡಿದೆ**

ಹುಝೂರ್(ರ) ಹೇಳುತ್ತಾರೆ:- "ಶತ್ರುಗಳು ಹಾಸ್ಯ ಮಾಡುವರು, ವ್ಯಂಗ್ಯ ಮಾಡುವರು. ಆದರೆ ನಾನು ಅದನ್ನು ಲೆಕ್ಕಿಸದೆ ನಿರಾತಂಕವಾಗಿ ಹೇಳುವೆನು. ಅಲ್ಲಾಹನ ಅನುಗ್ರಹದಿಂದ ಇಂಗ್ಲೆಂಡ್‌ನ ಆಧ್ಯಾತ್ಮಿಕ ವಿಜಯ ಆರಂಭಗೊಂಡಿದೆ. ನಾನು ಹೇಳುವುದೆಲ್ಲ ಒಂದು ಆಧ್ಯಾತ್ಮಿಕ ಅಧ್ಯಾಯವಾಗಿದೆ, ಅದನ್ನು ಆಧ್ಯಾತ್ಮಿಕ ದೃಷ್ಟಿಯುಳ್ಳವರು ಮಾತ್ರ ಕಾಣಬಹುದು." (ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಅಕ್ಟೋಬರ್ 1924, ಪುಟ-3, ಕಾಲಮ್-3)

**ಅನುಮಾನಗಳ ಅವಕಾಶಕ್ಕಿಂತ ಮೀರಿದ ಯಶಸ್ಸು**

ಹುಝೂರ್(ರ) ಹೇಳುತ್ತಾರೆ:-

ಮಾನವನ ಊಹೆಗೂ ನಿಲುಕದ ಯಶಸ್ಸು ಈ ಪ್ರಯಾಣದಲ್ಲಿ ದೊರಕಿದೆ. ಅಲ್ಲಾಹನು ಬಿತ್ತಿದ ಈ ಬೀಜಕ್ಕೆ ನೀರೆರೆಯಲು ಜಮಾಅತ್ ಸಿದ್ಧವಿರಬೇಕಾಗಿದೆ. ನಾವು ಈ ಪ್ರಯಾಣ ಬೆಳೆಸದಿರುತ್ತಿದ್ದರೆ ಈ ಫಲಗಳು ದೊರೆಯುತ್ತಿರಲಿಲ್ಲ. ಆದರೆ ಅಲ್ಲಾಹನು ಅಂತಹ ವಸ್ತುಗಳನ್ನು ಒದಗಿಸಿದ್ದಾನೆ. ನಾವು ನನ್ನ ಕಾರ್ಯಗಳಿಗೆ ಮತ್ತು ತ್ಯಾಗಕ್ಕೆ ನೀರೆರೆಯದಿದ್ದರೆ ಫಲಗಳು ದೊರೆಯಲಾರವು. ಪ್ರಪಂಚದಾದ್ಯಂತ ಹರಡಿರುವ ಬೀಜಕ್ಕೆ ಬೇಕಾದಷ್ಟು ನೀರು ಮತ್ತು ಕಾಳಜಿ ವಹಿಸುವ ಅಗತ್ಯವಿದೆ. ಈಗ ಆ ಕಾರ್ಯಗಳು ಸಾಕಷ್ಟು ಹೆಚ್ಚಾಗಿದೆ.

(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-8,9)

**ಮಸೀದಿ ನಿರ್ಮಾಣದ ಕೀರ್ತಿ ಪ್ರಪಂಚದಾದ್ಯಂತ ಇದೆ.**

ಜಗತ್ತಿನ ಪ್ರತಿ ಮೂರರಲ್ಲಿ ಒಬ್ಬರಿಗೆ ಈ ಮಾತು ತಲುಪಿದೆ.

ಹುಝೂರ್(ರ) ಹೇಳುತ್ತಾರೆ:

ಇಲ್ಲಿಯವರೆಗೆ ಸುಮಾರು ಇಪ್ಪತ್ತು, ಇಪ್ಪತ್ತೈದು ಕೋಟಿ ಜನರು "ಲಂಡನ್‌ನಲ್ಲಿ ಒಂದು ಮಸೀದಿ ನಿರ್ಮಾಣವಾಗಿದೆ ಎಂಬ ಸುದ್ದಿ ಕೇಳಿರುತ್ತಾರೆ. ಇದನ್ನು ಅಹ್ಮದಿ ಜಮಾಅತ್ ಉದ್ಘಾಟಿಸಿತು. ಮತ್ತು ನಿರ್ಮಿಸಿದೆ. ಅವರ ಇಮಾಮ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಆಗಿದ್ದಾರೆ. ಅವರನ್ನು ಅಲ್ಲಾಹನು ವಾಗ್ದತ್ತ ಮಸೀಹರಾಗಿ ಮತ್ತು ಸಂದೇಶವಾಹಕನಾಗಿ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಕಳುಹಿಸಿರುವನು. ಜಗತ್ತಿನಲ್ಲಿ ಪ್ರತಿ ಮೂರು ಮನುಷ್ಯನಲ್ಲಿ ಓರ್ವ ಮನುಷ್ಯನಿಗೆ ಈ ಮಾತು ತಲುಪಿದೆ. ಖುದ್ದು ಇಂಗ್ಲೆಂಡಿನ ಪತ್ರಿಕಾ ಬರಹಗಾರರಿಗೆ ಮತ್ತು ಇತರರಿಗೆ ಇದು ತಿಳಿದಿದೆ. ನಾವು ಎರಡು ಕೋಟಿ ರೂಪಾಯ ಖರ್ಚು ಮಾಡಿದರೂ, ಈಗಿನಷ್ಟು ಪ್ರಕಟಣೆ ಆಗುತ್ತಿರಲಿಲ್ಲ. ಆದರೆ ಕೆಲವರು ಎರಡು ಕೋಟಿ ಪೌಂಡ್ ಖರ್ಚು ಮಾಡಿದರೂ ಈ ಕೆಲಸ ಆಗುತ್ತಿರಲಿಲ್ಲ ಎಂದು ಹೇಳುತ್ತಾರೆ.

(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್, 9 ನವೆಂಬರ್ 1926, ಪುಟ-10, ಕಾಲಮ್-1)

**ಪತ್ರಿಕೋದ್ಯಮದವರು ಯವ ರಾಜನಿಗೂ ಅಷ್ಟೊಂದು ಗಮನ ಕೊಡಲಿಕಲ್ಲ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:-

ಇಂಗ್ಲೆಂಡ್‌ನ ಪತ್ರಕರ್ತರೊಬ್ಬರು ಅಲ್ಲಾಹನು ನನಗೆ ನೀಡಿದ ಯಶಸ್ಸಿನ ಬಗ್ಗೆ ಹೇಳಿದರು. ಮತ್ತು ಇನ್ನೂ ಕೆಲವರು ಹೇಳಿದರು. ನಿಮಗೆ ಯಶಸ್ಸಿನ ಬಗ್ಗೆ ತಿಳಿದಿಲ್ಲ. ಪತ್ರಿಕೆಗಳು ನಿಮಗೆ ಸಹಾಯ ಮಾಡಿದ ರೀತಿಯನ್ನು ನೋಡಿದರೆ ಯಾವುದೇ ರಾಜನ ಬಗ್ಗೆಯೂ

ಇಂತಹ ಗಮನ ನೀಡಲಿಲ್ಲ. ಇಲ್ಲೊಂದು ಮುಖ್ಯ ಪತ್ರಗಳು ದೊಡ್ಡ ದೊಡ್ಡ ರಾಜರನ್ನು ಸಹ ಮೂರು ನಾಲ್ಕು ಬಾರಿಗಿಂತ ಹೆಚ್ಚು ಪ್ರಕಟಿಸುವುದಿಲ್ಲ, ಯಾರು ಎಂಬುದು ಸಹ ವಿಚಾರಿಸುವುದಿಲ್ಲ, ಹೋದರೆ ನೀವು ಎರಡು ತಿಂಗಳು ಇಲ್ಲಿಯೇ ಇದ್ದೀರಿ ಮತ್ತು ಪ್ರತಿ ಸಂದರ್ಭದಲ್ಲಿ ದೊಡ್ಡ ಪತ್ರಿಕೆಗಳ ವರದಿಗಾರರು ಮತ್ತು ಪ್ರಬಂಧಕಾರರು ಲೇಖನಗಳನ್ನು ಪ್ರಕಟಿಸಿದವು. ಇದು ಸಾಕಷ್ಟು ಅಸಾಮಾನ್ಯವಾಗಿದೆ. ಪ್ರತಿ ಸಂದರ್ಭದಲ್ಲೂ ದೊಡ್ಡ ಪತ್ರಿಕೆಗಳ ವರದಿಗಾರರು ಮತ್ತು ಲೇಖಕರು ಬಂದು ನಮ್ಮಿಂದ ಬಂದವರು ಎಂದು ತಿಳಿಯುವ ರೀತಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ಅವರ ಸಹಾನುಭೂತಿ ನಮ್ಮೊಂದಿಗಿದೆ.

(ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-4, ಕಾಲಮ್-3)

ಅವರು ಹೇಳಿದರು: ಇಲ್ಲಿ (ಅಂದರೆ ಭಾರತದಲ್ಲಿ) ಬ್ರಿಟಿಷರು ಭಾರತೀಯರನ್ನು ಕೀಲಾಗಿ ಕಾಣುತ್ತಾರೆ ಎಂದು. ಆದರೆ ತಿಳಿದುಬಂದಿದೆ. ನಮ್ಮನ್ನು ಹೊರತು ಯಾರಿಗೂ ಸಹ ಗೌರವ ಕೊಡುವುದಿಲ್ಲ.

ಮತ್ತೆ ಅವರು ಹೇಳಿದರು: ದೊಡ್ಡ ದೇಶಗಳಲ್ಲಿ ದೀರ್ಘಾವಧಿಯಲ್ಲಿ ಹೆಸರನ್ನು ಸಹ ತಿಳಿಸುವುದು ಕಷ್ಟ. ಆದರೆ ನಮ್ಮ ಹೆಸರು ಮಿಂಚಿನ ವೇಗದಿಂದ ಖ್ಯಾತಿ ಪಡೆದಿದೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-5, ಕಾಲಮ್-2)

**ಪೋಪ್ ವಿರುದ್ಧ ಮತ್ತು ಹುಝೂರ್[ರ] ಅವರ ಪರವಾಗಿ ಪತ್ರಿಕೆಯ ವ್ಯಾಖ್ಯಾನ**

ಇಟಲಿಯಲ್ಲಿ ಹುಝೂರ್[ರ] ಅವರು ಪೋಪ್ ಅವರನ್ನು ಭೇಟಿಯಾಗಲು ಬಯಸಿದ್ದರು. ಪೋಪ್ ಹೇಳಿದರು: "ನನ್ನ ಮನೆ ನಿರ್ಮಿಸಲಾಗುತ್ತಿದೆ ಆದ್ದರಿಂದ ಭೇಟಿ ಮಾಡಲಾಗುವುದಿಲ್ಲ."

ದಿನಕ್ಕೆ 8,00,000 ಪ್ರಸರಣವನ್ನು ಹೊಂದಿದ ಇಟಲಿಯ ಅತಿ ದೊಡ್ಡ ಪತ್ರಿಕೆಯ ಸಂಪಾದಕರಿಗೆ ಹುಝೂರ್[ರ] ಪೋಪರ ಉತ್ತರ ತೋರಿಸಿದಾಗ, ಅವರು ತನ್ನ ಲೇಖನದಲ್ಲಿ ಹೀಗೆ ಬರೆದರು.

"ಇದು ಆಶ್ಚರ್ಯಕರವಾಗಿದೆ! ಒಬ್ಬ ಮುಖ್ಯಸ್ಥ ಬಂದು ಪೋಪ್ ಅವರನ್ನು ಭೇಟಿಯಾಗಲು ಬಯಸುತ್ತಾರೆ. ಆದರೆ ಪೋಪ್ ಹೇಳುತ್ತಾರೆ. ಮನೆ ದುರಸ್ತಿಯಾಗಿರುತ್ತಿರುವ ಕಾರಣ ಈಗ ಭೇಟಿಯಾಗಲು ಸಾಧ್ಯವಿಲ್ಲ. ಅವರ ಮನೆ ಯಾವಾಗಲೂ ದುರಸ್ತಿಯಲ್ಲಿರುವುದು. ಅಂತಹ ಪ್ರಭಾವಶಾಲಿ ಕ್ರಿಶ್ಚಿಯನ್ ಪತ್ರಿಕೆ ಎಂತಹ ಪ್ರಮುಖ ನುಡಿಗಟ್ಟು ಬರೆಯುತ್ತದೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924)

**ಈಜಿಪ್ಟ್‌ನಲ್ಲಿ ಯಶಸ್ಸು**

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ:- ನಾವು ಅಲ್ಲಿಗೆ ತಲುಪಿದ ತಕ್ಷಣ, ಜನರು ನಮ್ಮತ್ತ ಗಮನ ಹರಿಸಿದರು. ಎರಡೂ ಪಕ್ಷಗಳು ಬಂದವು. ಅವರಿಗೆ ನಮ್ಮ ವಿರೋಧ ನೆನಪಾಗಲಿಲ್ಲ.

ಇಬ್ಬರೂ ಆದರಣೀಯ ಮತ್ತು ಪ್ರಭಾವಶಾಲಿ ವ್ಯಕ್ತಿಗಳು ಹೇಳಿದರು. ನೀವು ನಿಂತರೆ ನಾವು ಬೈಅತ್ ಮಾಡುವೆವು. ಅದರಲ್ಲಿ ಒಬ್ಬರು ತುರ್ಕರಾಗಿದ್ದರು. ಅವರು ಹೇಳಿದನು. ನಾನು ಇಲ್ಲಿ ಧರ್ಮಕಾರ್ಯಕ್ಕೆ ಬಂದಿದ್ದೆ, ಈ ಜನರು ಧರ್ಮವನ್ನು ಬಿಟ್ಟಿದ್ದಾರೆ ಎಂದು ತಿಳಿಯಿತು, ನಾನು ನಿಮ್ಮ ಜೊತೆಯಲ್ಲಿ ಸೇರಿ ಆ ಕಾರ್ಯ ಮಾಡಬಯಸುತ್ತೇನೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-6, ಕಾಲಮ್-1)

**ದಮಿಶ್ಕ್‌ನಲ್ಲಿ ಯಶಸ್ಸು**

ಹುಝೂರ್[ರ] ಹೇಳುತ್ತಾರೆ: ಎರಡು ದಿನಗಳವರೆಗೆ ಯಾರೂ ಸಹ ಯಾವ ಗಮನ ಕೊಡಲಿಲ್ಲ, ನಾನು ತುಂಬಾ ಗಾಬರಿಯಲ್ಲಿದ್ದೆ ಮತ್ತು ಪ್ರಾರ್ಥಿಸಿದೆ. ಹೇ ಅಲ್ಲಾಹ್ ದಮಿಶ್ಕ್ ನಿಮಿತ್ತ ಭವಿಷ್ಯವಾಣಿ ಹೇಗೆ ಪೂರ್ಣಗೊಳ್ಳುವುದು. ನೀನು ನಿನ್ನ ಕೃಪೆಯಿಂದ ಯಶಸ್ಸು ನೀಡು. ನಾನು ಪ್ರಾರ್ಥಿಸಿ ಮಲಗಿದಾಗ ರಾತ್ರಿ ಈ ಪದಗಳು ನನ್ನ ನಾಲಿಗೆಯ ಮೇಲೆ ಹರಿದಾಡಿದವು- **"ಅಬ್ದುಮ್ ಮುಕರ್ರಮನ್"** ಅಂದರೆ ನನ್ನ ದಾಸ ಅವನಿಗೆ ಗೌರವ ನೀಡಲಾಗಿದೆ. ಅದರಿಂದ ನನಗೆ ಮನವರಿಕೆಯಾಯಿತು. ಇಲ್ಲಿ ಪ್ರಚಾರದ ದ್ವಾರ ತೆರೆಯಲಾಗಿದೆ. ಹಾಗೆ ಮರುದಿನವೇ ಎದ್ದಾಗ ಜನರು ಬರತೊಡಗಿದರು. ಮುಂಜಾನೆಯಿಂದ ರಾತ್ರಿಯ ಹನ್ನೆರಡು ಗಂಟೆ ತನಕ ಎರಡು ನೂರರಿಂದ ಹನ್ನೆರಡು ನೂರರವರೆಗೆ ಹೋಟೆಲ್ ಮುಂದೆ ನಿಲ್ಲುತ್ತಿದ್ದರು. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-6, ಕಾಲಮ್-2)

ಕಾಲೇಜುಗಳ ಹುಡುಗರು ಮತ್ತು ಪ್ರೊಫೆಸರ್‌ಗಳು ನೋಟ್‌ಬುಕ್ ತರುತ್ತಿದ್ದರು, ನಾನು ಹೇಳುತ್ತಾ ಹೋದಂತೆ ಅವರು ಬರೆದುಕೊಳ್ಳುತ್ತಿದ್ದರು. ಏನಾದರೂ ಪದ ಬಿಟ್ಟು ಹೋಗಿದ್ದಲ್ಲಿ, ಸ್ವಲ್ಪ ನಿಲ್ಲಿ ಬರೆದುಕೊಳ್ಳುತ್ತೇವೆ ಎನ್ನುತ್ತಿದ್ದರು. ಅಂದರೆ ಇಂಜಿಲಿನಲ್ಲಿ ಮಸೀಹರನ್ನು ಹೇ ಉಸ್ತಾದ್ ಎಂದು ಸಂಬೋಧಿಸುವ ದೃಶ್ಯ ಗೋಚರವಾಗಿತ್ತು. ಯಾರಾದರೂ ಮೌಲ್ವಿ ವಿರುದ್ಧವಾಗಿ ಮಾತನಾಡಿದರೆ ಅವರನ್ನು ಅದೇ ಜನರು ಎದುರಿಸುತ್ತಿದ್ದರು. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-6, ಕಾಲಮ್-3)

**ತಬ್ಲೀಗಿನ ತತ್ವಗಳು ನಿಶ್ಚಯಿಸಲಾಯಿತು**

ಹುಝೂರ್[ರ] ಹೇಳುತ್ತಾರೆ. ನಾನು ಈ ಪ್ರಯಾಣದಲ್ಲಿ ಅಳವಡಿಸಿಕೊಂಡ ಕೆಲವು ತಬ್‌ಲೀಗ್‌ನ ತತ್ವಗಳು ಕೆಲವನ್ನು ಮೌಲ್ವಿ ಅಬ್ದುರ್ ರಹೀಮ್ ಸಾಹಿಬ್ ದರ್ದ್ ಅವರಿಗೆ ಬರೆದುಕೊಟ್ಟಿದ್ದೇನೆ ಮತ್ತು ಕೆಲವನ್ನು ಬರೆಯುತ್ತಿದ್ದೇನೆ. (ಅ ಲ್ ಫ ' ರ' ಝ ಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-8, ಕಾಲಮ್-1)

**ಸಭಾಧ್ಯಕ್ಷರ ಅನಿಸಿಕೆ**

ಹುಝೂರ್[ರ] ಹೇಳುತ್ತಾರೆ:- ಸಮ್ಮೇಳನದ ಸಭಾಧ್ಯಕ್ಷರು ಮೂರು ನಾಲ್ಕು ಸಲ ಹೇಳಿದರು. ಮತ್ತು ಮನೆಗೆ ಬಂದು ಸಹ ಹೇಳಿದರು. ಇಸ್ಲಾಂ ಧರ್ಮ ಜೀವಂತ ಧರ್ಮವಾಗಿದೆ. ಅಹ್ಮದಿಯಾ ಸಂಘಟನೆ ಅದಕ್ಕೆ ಜ್ವಲಂತ ಉದಾಹರಣೆಯಾಗಿದೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-7, ಕಾಲಮ್-3)

**ಪಶ್ಚಿಮದ ರೋಗಕ್ಕೆ ಚಿಕಿತ್ಸೆ-ಮಸೀಹ್ ಮೌಊದ್‌ರ ಹೆಸರು ಮತ್ತು ಅವರ ವಿವರ**


ಹುಝೂರ್[ರ] ಹೇಳುತ್ತಾರೆ: ಈ ಪ್ರಯಾಣದಿಂದ ಎರಡು ಮುಖ್ಯ ಸಮಸ್ಯೆಗಳು ಪರಿಹಾರವಾಗಿವೆ. ಅದರಿಂದ ತುಂಬಾ ಸಂತೋಷ ದೊರೆತಿದೆ. ಪಶ್ಚಿಮದಲ್ಲಿ ಹಝ್ರತ್ ಮಸೀಹರ ಸ್ಮರಣೆ ವಿಷ ಎನ್ನುತ್ತಾರೆ. ಆದರೆ ನಾವು ಈ ಪ್ರಯಾಣ ಕಾರಣದಿಂದಾಗಿ ತಿಳಿದುಕೊಂಡಿದ್ದೇವೆ. ಹಝ್ರತ್ ಮಸೀಹರ ಸ್ಮರಣೆಯೇ ರೋಗಕ್ಕೆ ಚಿಕಿತ್ಸೆಯಾಗಿದೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-8, ಕಾಲಮ್-2)

ಎರಡನೇ ಪ್ರಶ್ನೆ ಪರಿಹಾರವಾದದ್ದು, ನಾನು ಭಾವಿಸಿದ್ದೆ ಯೂರೋಪ್ ಇಸ್ಲಾಂ ಧರ್ಮದ ಶಿಕ್ಷಣವನ್ನು ಸ್ವೀಕರಿಸುವುದಿಲ್ಲ, ಆದರೆ ನಿಶ್ಚಿತವಾಗಿಯೂ ಸ್ವೀಕರಿಸುತ್ತಾರೆ ಎಂಬ ಭರವಸೆಯೊಂದಿಗೆ ಮರಳಿದ್ದೇನೆ. (ಅಲ್‌ಫಝಲ್ ಖಾದಿಯಾನ್ ದಾರುಲ್ ಅಮಾನ್, 4 ಡಿಸೆಂಬರ್ 1924, ಪುಟ-8, ಕಾಲಮ್-2)

**ಯೂರೋಪ್ ಪ್ರವಾಸ ಮತ್ತು ಒಬ್ಬ ಅಹ್ಮದಿಯೇತರ ಸ್ವಪ್ನ**

ಹಝ್ರತ್ ಮೌಲಾನ ಶೇರ್ ಅಲಿ ಸಾಹಿಬ್[ರ] 26 ಸೆಪ್ಟೆಂಬರ್ 1924ರ ಖುತುಬ ಜುಮುಅದಲ್ಲಿ ಒಬ್ಬ ಅಹ್ಮದಿಯೇತರರ ಸ್ವಪ್ನದ ಬಗ್ಗೆ ಹೇಳಿದರು. ಅದು ಹುಝೂರ್ ರವರ ಯೂರೋಪ್ ಪ್ರವಾಸದ ಬಗ್ಗೆಯಾಗಿತ್ತು. ಆ ಸ್ವಪ್ನವೇನಾಗಿತ್ತು ಮತ್ತು ಹೇಗೆ ಪೂರ್ತಿಯಾಯಿತು ಎಂಬ ವಿವರ ನಾವು ಹಝ್ರತ್ ಮೌಲಾನ ಶೇಕ್ ಅಲಿ ಸಾಹಿಬ್(ರ) ಅವರ ವರದಿಗಳಲ್ಲೆ ವಿವರಿಸುತ್ತೇವೆ. ಅವರು ಹೇಳುತ್ತಾರೆ. ಅಲ್ಲಾಹನು ತನ್ನ ಪ್ರೀತಿ ಪಾತ್ರರಿಗೆ ಮತ್ತು ಸತ್ಯವಂತರಿಗೆ ಅನೇಕ ವಿಧದಲ್ಲಿ ಸಹಾಯ ಮಾಡುತ್ತಾನೆ. ಅವನ ಸಹಾಯ ಮತ್ತು ಬೆಂಬಲದ ಒಂದು

*(ಪುಟ ಸಂಖ್ಯೆ 09 ರಲ್ಲಿ ಮುಂದುವರಿಸಲಾಗಿದೆ)*

ಮಸ್ಜಿದ್ ಫಝ್ಲುಲ್ ಲಂಡನ್‌ನ ಶಂಕುಸ್ಥಾಪನೆಗೆ ನೂರು ವರ್ಷ ಪೂಣಗೊಂಡಾಗ ಲಂಡನ್‌ನಲ್ಲಿ ಆಯೋಜಿಸಿದ ಒಂದು ವಿಶೇಶ ಕಾರ್ಯಕ್ರಮದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್[ಅತಬಿಅ] ಅವರು **MTA Studios** ಇಸ್ಲಾಮಬಾದ್‌ನಿಂದ ಸಂಬೋಧಿಸುತ್ತಿರುವುದು




ಸಂಬೋಧನೆಯ ಸಮಯದಲ್ಲಿ ಪ್ರೇಕ್ಷಕರ ಎರಡು ದೃಶ್ಯಗಳು



ವಿದ್ಯುತ್ ದೀಪಗಳಿಂದ ಅಲಂಕರಿಸಲ್ಪಟ್ಟ ಮಸ್ಜಿದ್ ಫಝ್ಲುಲ್ ಲಂಡನ್‌ನ ಒಂದು ಸುಂದರ ದೃಶ್ಯ

EDITOR
TARIQ AHMED IDRIS
Mobile : +91 9902678609
E-mail: kannadabadar@gmail.com
website: www.akhbarbadr.in
: www.alislam.org/badr

Registered with the registrar of the newspapers for India at No. RN 61/57
ಕನ್ನಡ ಬದರ್ ವಾರ ಪತ್ರಿಕೆ Weekly BADAR Qadian
Qadian - 143516 Distt. Gurdaspur (Pb.) INDIA
Vol No. 05, 19-26 December 2024, Issue No. 51-25

MANAGER
SHAIKH MUJAHID AHMAD
Mobile : +91 99153 79255
e -mail:managerbadrqnd@gmail.com
SUBSCRIPTION
ANNUAL: Rs: 600/-
WEIGHT: 50-100 gms / issue

## ತೊಬ್ಬತೆಂಟು ವರ್ಷಗಳ ಮುಂಚೆ ಮಸ್ಜಿದ್ ಫಝ್ಲ್ ಲಂಡನ್‌ನ ಭವ್ಯ ಉದ್ಘಾಟನೆ

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ದುಷ್ಕರ್ಮಿಗಳು ಲಂಡನ್ ಮಸೀದಿಯನ್ನು ನಿರ್ಮಿಸಿರುವುದನ್ನು ಬಯಸುತ್ತಿರಲಿಲ್ಲ. ಆದರೆ ಅಲ್ಲಾಹನು ಮಸೀದಿಯನ್ನು ನಿರ್ಮಿಸುವ ಭಾಗ್ಯ ಮಾತ್ರ ನೀಡಿದ್ದಲ್ಲದೇ ಅದು ಪೂರ್ಣಗೊಂಡ ನಂತರ ಅದರ ಭವ್ಯ ಉದ್ಘಾಟನೆಯ ಸಾಧನಗಳು ಸಹ ಒದಗಿಸಿಕೊಟ್ಟನು. ಅದು ಎಷ್ಟರಮಟ್ಟಿಗೆ ಭವ್ಯವಾಗಿತ್ತೆಂದರೆ ಪ್ರತಿಯೊಬ್ಬರು ಒಪ್ಪಿಕೊಂಡರು. ಹಿಂದೆ ಇಂತಹ ಭವ್ಯ ಸಮಾರಂಭ ನಡೆದ ಉದಾಹರಣೆ ಇಲ್ಲ. ಇದನ್ನು ಇನ್ನೂರಕ್ಕೂ ಹೆಚ್ಚು ಪ್ರಾಂತಿಯ ಪತ್ರಿಕೆಗಳು ಬಲವಾದ ಪದಗಳೊಂದಿಗೆ ಉಲ್ಲೇಖಿಸಿದರು. ಈ ಪತ್ರಿಕೆ ಇಂಗ್ಲೆಂಡ್‌ನದ್ದಾಗಿವೆ. ಇವುಗಳ ಹೊರತಾಗಿ ಬೇರೆ ಬೇರೆ ದೇಶಗಳಲ್ಲಿ ಇದರ ಚರ್ಚೆಯಾಗುತ್ತಿವೆ. ಮತ್ತ ಅವರ ವರದಿಗಳು ಬರುತ್ತಿವೆ. ಹೀಗೆ ಇಲ್ಲಿಯತನಕ ಸುಮಾರು 25 ಕೋಟಿ ಜನರು, ಲಂಡನ್‌ನಲ್ಲಿ ಒಂದು ಮಸೀದಿ ರಚನೆಗೊಂಡಿದೆ. ಅದರ ಉದ್ಘಾಟನೆಯು ಆಗಿದೆ. ಅದನ್ನು ಅಹ್ಮದಿಯಾ ಜಮಾಅತ್ ನಿರ್ಮಿಸಿದೆ. "ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಅವರ ಇಮಾಮ್ ಆಗಿದ್ದಾರೆ. ಅಲಾಹನು ಅವರಿಗೆ ವಾಗ್ದತ್ತ ಮಸೀಹನಾಗಿ ಮತ್ತು ಪ್ರವಾದಿ ಎಂದು ಕರೆದನು. ಅವರ ಕಾರ್ಯ ಇಸ್ಲಾಂ ಧರ್ಮದ ಪ್ರಚಾರ ಮಾಡುವುದಾಗಿದೆ. ಲೋಕದ ಪ್ರತಿ ಮೂರು ಜನರಲ್ಲಿ ಒಬ್ಬನಿಗೆ ಈ ಸುದ್ದಿ ತಲುಪಿದೆ ಮತ್ತು ಖುದ್ದು ಇಂಗ್ಲೆಂಡಿನ ವರದಿಗಾರರ ಹಾಗೂ ಗಣ್ಯವ್ಯಕ್ತಿಯ ಈ ಅಭಿಪ್ರಾಯವಾಗಿದೆ. ನಾವು ಎರಡು ಕೋಟಿ ಖರ್ಚು ಮಾಡುತ್ತಿದ್ದರೂ ಈ ರೀತಿಯ ಪ್ರಚಾರ ಗಿಟ್ಟಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲದೆ ಕೆಲವರು ಹೇಳಿದ್ದಾರೆ.

ಎರಡು ಕೋಟಿ ರೂಪಾಯಿಗಷ್ಟೇ ಅಲ್ಲ, ಎರಡು ಕೋಟಿ ಪೌಂಡ್ ಸಹ ಖರ್ಚು ಮಾಡಿದರೂ ಇವರು ಮಾಡಿ ತೋರಿಸಿದ ಸಾಧನೆ ಸಾಧ್ಯವಿರಲಿಲ್ಲ. ಈ ಮಸೀದಿಯ ಉದ್ಘಾಟನೆಯಲ್ಲಿ ಗಣ್ಯಾತಿಗಣ್ಯ ವ್ಯಕ್ತಿಗಳು ಪಾಲ್ಗೊಂಡರು. ಮೂರು ಲಾರ್ಡ್‌ಗಳು, 13 ಸಂಸತ್ ಸದಸ್ಯರು, ವಿವಿಧ ದೇಶಗಳ ರಾಯಭಾರಿಗಳು, ನವಾಬ್‌ಗಳು ಮತ್ತು ಗೌರವಾನ್ವಿತ ಮುಖಂಡರು ಒಂದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಕೇವಲ ಭಾಗವಹಿಸಲಿಲ್ಲ. ಬದಲು ತುಂಬಾ ಆಸಕ್ತಿ ತೋರಿಸಿದರು. ಮತ್ತು ಸಂತೋಷವನ್ನು ವ್ಯಕ್ತಪಡಿಸಿದರು. ಕೆಲವರಂತೂ ಕೆಲಸಗಳಲ್ಲೂ ಸಹಾಯ ಮಾಡುವುದು ಹೆಮ್ಮೆಯ ವಿಷಯ ಎಂದರು. ಭಾರತದ ಗಣ್ಯಥಿಗಣ್ಯ ಜನರು ಸಹ ಇದರಲ್ಲಿ ಭಾಗವಹಿಸಿದರು. ಮಹಾರಾಜ ಬುರುದಾನರು ಸಹ ಭಾಗವಹಿಸಿದರು. ಅವರು ಈ ಸಂದರ್ಭದಲ್ಲಿ ಭಾಷಣ ಮಾಡಲು ಅನುಮತಿ ಕೋರಿದರು ಮತ್ತು ಸಂತೋಷವನ್ನು ವ್ಯಕ್ತಪಡಿಸಿದರು. ಹೇಳಿದರು. ನಾನು ಹಿಂದೂ ಆಗಿದ್ದರೂ ಇದರಲ್ಲಿ ಭಾಗವಹಿಸುವುದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಅಲ್ಲದೇ 11 ಸರಕಾರಗಳ ಪ್ರತಿನಿಧಿಗಳು ಸಹ ಈ ಸಂದರ್ಭದಲ್ಲಿ ಹಾಜರಾಗಿದ್ದರು. ಜರ್ಮನಿ, ಇಟಲಿ. ಚೀನಾ, ಇತ್ಯಾದಿ ದೇಶಗಳಿಂದಲೂ ಮಂತ್ರಿಗಳು ಬಂದಿದರು. ಹಣ ಎಲ್ಲಿ ಹೋಗಿದೆ ಎಂದು ಕೇಳುವ ಜನರಿಗೆ ಇದು ತಕ್ಕ ಉತ್ತರವಾಗಿದೆ. ಅವರು ಸರಿಯಾಗಿ ಆಲಿಸಿಕೊಳ್ಳಲಿ. ಹಣ ಇಲ್ಲಿಯೇ ಹೋಗಿದೆ.

**(ಅಲ್ ಫಝ್ಲ್ ಖಾದಿಯಾನ್ ದಾರುಲ್ ಅಮಾನ್ 9 ನವೆಂಬರ್ 1926)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gurdaspur-143516, Punjab. India. Editor: Tariq Ahmed Idris.